ಕಲ್ಯಾಣ ಕಿರಣ

ಡಿಸೆಂಬರ್ - 2005

ಬೆಲೆ : ರೂ. 5/-





Sri Satnam Singhji uppal (right) and Sri Hardev Singh were garlanded when they honoured Pujya Mataji who came in chariot.

॥ ಓಂ ಶ್ರೀ ಗುರು ಬಸವ ಲಿಂಗಾಯನಮಃ ॥

೮ ೬ ೬ ೬ ೬ ೬

ಅಷ್ಟಾವರಣ ಷಡಾಚಾರ ಷಟಸ್ಥಲ ಷಟ್‌ಸೂತ್ರ ಷಟ್‌ಶೀಲ ಷಟ್‌ಕ್ರಿಯೆ

ಸಂಪುಟ-೩೫ ಬಸವಶಕೆ-೮೭೨ ಆಜೀವ ಸದಸ್ಯತ್ವ ೫೦೦ ರೂ.
ಸಂಚಿಕೆ- ೬ ಡಿಸೆಂಬರ್-೨೦೦೫ ವಾರ್ಷಿಕ ಚಂದಾ ೫೦/- ರೂ

ಶರಣ ಮೇಳಕೆ ಬಂದು ಪಾವನನಾಗು

ಬಾ ಬಾ ಬಾ ಎಲೆ ಶರಣ ನೀನು ....
ಶರಣ ಮೇಳಕೆ ಬಂದು ಪಾವನನಾಗು ॥ ಪ ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ. ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚೆಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ ೧ ॥

ನಾಡ ಬಲ್ಲಿದರೆಲ್ಲ ಕೂಡಿದರು ಹರುಷಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ ೨ ॥

ಸಮತೆಯು ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ ೩ ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ ೪ ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ ೫ ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯ ಕರೆಯಿದು ॥ ೬ ॥

-ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ

ಸಂಚಿಕೆ 8 ಡಿಸೆಂಬರ್- 2005 ವಾರ್ಷಿಕ ಚಂದಾ 50/-ರೂ.

ಕಿರಣ ಗನ್ನಡಿ

Cover Page : Pujya Mataji was affered a "Sword" as symbol of special honour by Sri Satnam Singhji Uppal, Sri Hardev Singhji and other sikh leaders. All are standing in front of Sis Ganj Gurudwar, Delhi.

KALYANA KIRANA-Reg No.19988/70. Monthy Magazine Edited by Pujya Mate Kasturidevi and Published by Pujya Allama Prabhu Swamiji, at Padmasri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||



866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಹತ್ತೊಂಬತ್ತನೆಯ

ಶರಣ ಮೇಳ

2006ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹತ್ತೊಂಬತ್ತನೆಯ ಶರಣ ಮೇಳವು 2006ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಆವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು(F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiಾದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268038/268007/268338

ಸಿಖ್ಖರದು ಜೀವಂತ ಸಮಾಜ

- ಮಾತಾಜಿ

ಅನೇಕರ ದೃಷ್ಟಿಯಲ್ಲಿ ನಾವು ಮಾಡಿರುವ ಸಾಧನೆ ಬಹಳ ಎಂದು ಎನ್ನಿಸಿ ಅವರು ಪ್ರಶಂಸಿಸುತ್ತಿದ್ದರೂ, ಮುಖ್ಯವಾಗಿ ನಮ್ಮ ಅಭಿಮಾನಿಗಳು ಹಾಗೆ ಭಾವಿಸುತ್ತಿದ್ದರೂ ಏಕೋ ನನಗೆ ಮಾತ್ರ ನಮ್ಮ ಸಮಾಜಕ್ಕೆ ಇನ್ನೂ ತೇರ್ಗಡೆಯ ಅಂಕಗಳು ಬೀಳುತ್ತಿಲ್ಲ ಎನ್ನಿಸುತ್ತದೆ. ಏಕೆಂದರೆ ನಮ್ಮ ಉದ್ದೇಶ ನಾವು ವೈಯಕ್ತಿಕವಾಗಿ ಬೆಳೆಯುವುದಲ್ಲ, ಅನೇಕ ಮಠಾಧೀಶರಂತೆ ವಿಪುಲವಾಗಿ ಹಣ ಗಳಿಸುವುದಲ್ಲ, ಬಿಲ್ಡಿಂಗ್ ಕಟ್ಟುವುದಲ್ಲ; ಒಂದು ಧೀರ, ಶೂರ, ತಾತ್ವಿಕ ಗಟ್ಟಿತನವುಳ್ಳ ಶರಣ ಸಂಸ್ಕೃತಿಯ ಜನಾಂಗ ನಿರ್ಮಾಣ. ಉಳಿದ ಕೆಲವು ಹಿಂದುಗಳು, ವೀರಶೈವರು, ವೀರಶೈವ ಲಿಂಗಾಯತರೆಂಬ ಹೈಬ್ರಿಡ್ ತಳಿಗಳು - ಇವರೆಲ್ಲರ ದೃಷ್ಟಿಯಲ್ಲಿ ತಾತ್ತ್ವಿಕವಾಗಿ ಗಟ್ಟಿಗೊಂಡ ಲಿಂಗಾಯತರು ಅಷ್ಟಿಷ್ಟು ಜನರು ತಯಾರಾಗುವುದು ನಮ್ಮ ಶರಣಮೇಳ, ಸಭೆ-ಸಮ್ಮೇಳನಗಳ ಮೂಲಕ ವ್ಯಕ್ತವಾಗುತ್ತಿದ್ದರೂ ಸತ್ವ ಮತ್ತು ಗಾತ್ರದ ದೃಷ್ಟಿಯಿಂದ ಏನೇನೂ ಸಾಲದು ಎಂಬ ಖಿನ್ನತೆ ನನ್ನಲ್ಲಿ ಮೂಡುತ್ತದೆ. ಅದೂ ಸಿಖ್ಖ ಜನಾಂಗವನ್ನು ನೋಡಿದಾಗ ಅವರ ಬಗ್ಗೆ ಅಭಿಮಾನ ಮೆಚ್ಚುಗೆ ಮೂಡುತ್ತಾ , ನಮ್ಮ ಜನರಲ್ಲಿನ ಅಜ್ಞಾನ, ಅಸಂಘಟನೆ, ಧಾರ್ಮಿಕತೆಯಲ್ಲಿ ಉದಾಸೀನ, ಔದಾರ್ಯದ ಕೊರತೆ, ತತ್ತ್ವನಿಷ್ಠೆಯಿಲ್ಲದ ನಿರಭಿಮಾನ ಮುಂತಾದವು ಎದ್ದು ತೋರುತ್ತವೆ. ವಚನ ಸಾಹಿತ್ಯದ ಅಧ್ಯಯನದಿಂದ ನಮ್ಮ ಚಿತ್ತಭಿತ್ತಿಯಲ್ಲಿ ಮೂಡುವ ಸಮಾಜದ ಚಿತ್ರಣವನ್ನಿಟ್ಟುಕೊಂಡು ಇಂದಿನ ಲಿಂಗಾಯತ ಸಮಾಜವನ್ನು ನೋಡಿದಾಗ ಬಹಳ ದುಃಖವೆನಿಸುತ್ತದೆ. ಒಂದು ಸಮಾಜ ಎಂದಾಗ ಎಲ್ಲರೂ ನೂರಕ್ಕೆ ನೂರು ಧಾರ್ಮಿಕ ವ್ಯಾಖ್ಯಾನಕ್ಕೆ ತಕ್ಕಂತೆ ಇರುತ್ತಾರೆ ಎಂದು ಹೇಳಲು ಆಗದು. ಶೇಕಡಾವಾರು ನೋಡಿದಾಗ ಸಿಖ್ಖ ಧರ್ಮಿಯರು ತಮ್ಮ ಗುರು ಪರಂಪರೆ ಹೇಳುವ ಧಾರ್ಮಿಕ ವಿಚಾರ -ಆಚಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಾಲಿಸುತ್ತಾರೆ. ಲಿಂಗಾಯತರಾದರೋ ಧರ್ಮಪಿತರು ಮತ್ತು ಶರಣರು ಹೇಳಿದ ವಿಚಾರ ಪಾಲಿಸುವಲ್ಲಿ ಹೆಚ್ಚಿನ ಜನರು ಸೋತಿದ್ದಾರೆ. ಉದಾಹರಣೆಗೆ ಅಮೃತಸರಕ್ಕೆ ಹೋಗುವಾಗ ಸ್ನಾನ-ಪೂಜೆ ಮಾಡಿಹೋಗೋಣ ಎಂದು ಜಲಂಧರದೊಳಕ್ಕೆ ಹೋದೆವು ಅಲ್ಲಿ ತಲಾಬ್ ದೇವಿ ಮಂದಿರವಿದೆ. ಅವರ ಧರ್ಮಶಾಲೆಯಲ್ಲಿ ಸ್ನಾನ ಪೂಜೆ ಮುಗಿಸಿದೆವು. ಆ ದೇವಿ ಮಂದಿರಕ್ಕೆ ಕೆಲವು ಸಿಖ್ಖರು ದರ್ಶನಾರ್ಥಿಗಳಾಗಿ ಬಂದಿದ್ದರು. ಇವರನ್ನು ನಾಮಕೆ ವಾಸ್ತೆ ಸಿಖ್ಖರು ಎಂದು ತತ್ತ್ವನಿಷ್ಠ ಸಿಖ್ಖರು ಭಾವಿಸುತ್ತಾರೆ. ಏಕೆಂದರೆ ಸಿಖ್ಖ ಧರ್ಮ ಏಕ ದೇವೋಪಾಸಕ ಧರ್ಮ. ಅವರ ಗುರುವಾಣಿಯ ಪ್ರಕಾರ ದೇವರು ನಿರಾಕಾರ, ನಿರ್ಗುಣ. ಅನ್ಯ ದೇವತೆಗಳ ಪೂಜೆ-ದರ್ಶನ ಮಾಡುವುದು ಅವರ ಗುರುವಾಣಿಯ ಪ್ರಕಾರ ನಿಷಿದ್ಧ. ಆದರೂ ಕೆಲವು ಅಜ್ಞ ಜನರು ಹೋಗುತ್ತಾರೆ. ಶೇಕಡಾವಾರು ನೋಡಿದಾಗ ಅವರ ಸಂಖ್ಯೆ ಕಡಿಮೆ. ಲಿಂಗಾಯತ ಧರ್ಮೀಯರನ್ನು ನೋಡಿದಾಗ ಇವರಲ್ಲಿ ಇಷ್ಟಲಿಂಗ ಧಾರಣೆ ಮತ್ತು ಪೂಜೆ ಬಿಟ್ಟು ಬೇರೆಲ್ಲವನ್ನು ಮಾಡುವವರ ಸಂಖ್ಯೆಯೇ ಜಾಸ್ತಿ .

ಗುರುದ್ವಾರ ನಿರ್ಮಾಣ : ಸಿಖ್ಖರು ನಿರ್ಮಾಣ ಮಾಡಿರುವ ಗುರುದ್ವಾರಗಳನ್ನು ನೋಡಿದರೆ ಅದ್ಭುತ ಎನಿಸುತ್ತದೆ. ಸ್ವರ್ಣ ಮಂದಿರದ ವಿಷಯ ಒತ್ತಟ್ಟಿಗಿರಲಿ, ದೆಹಲಿಯಲ್ಲೇ ದೊಡ್ಡ ದೊಡ್ಡ 20 ಗುರುದ್ವಾರಗಳಿವೆ. ತಮ್ಮ ಗುರುಗಳು, ಸಂತರು ನಡೆದಾಡಿರುವ ಸ್ಥಳಗಳನ್ನು ಅತ್ಯಂತ ಶ್ರದ್ಧೆಯಿಂದ

ಕಾಪಾಡಿಕೊಂಡಿದ್ದಾರೆ. ಸ್ವರ್ಣಮಂದಿರದ ಮೇಲೆ ಮುಸಲೀಮರು ಹಲವಾರು ಬಾರಿ ದಾಳಿ ಮಾಡಿ ಆಕ್ರಮಿಸಿಕೊಂಡು ಕೆಡವಿದ್ದಾರೆ ; ದುರ್ಬಳಕೆ ಮಾಡಿದ್ದಾರೆ. ಆಗಲೆಲ್ಲ ಪುನಃ ಸಿಖ್ಖರು ಅದನ್ನು ಬಿಡಿಸಿಕೊಂಡು ಸ್ವತಃ ಕೈ ಸೇವೆ ಮಾಡಿ ಪುನರ್ ನಿರ್ಮಾಣ ಮಾಡಿದ್ದಾರೆ. ಶ್ರೀಮತಿ ಇಂದಿರಾಗಾಂಧಿ ಬ್ಲ್ಯೂಸ್ಟಾರ್ ಆಪರೇಷನಲ್ಲಿ ಸ್ವರ್ಣ ಮಂದಿರದ ಇನ್ನೊಂದು ಮುಖ್ಯ ಸ್ಥಳ ಧರ್ಮಾದೇಶ ನೀಡುವ ಅಕಾಲ ತಕ್ತ್ ಅನ್ನು ಕೆಡವಿಸಿದರು. ನಂತರ ಪಶ್ಚಾತ್ತಾಪ ಪಟ್ಟು ಸರ್ಕಾರದ ವತಿಯಿಂದ ಕಟ್ಟಿಸಿಕೊಟ್ಟರು. ಆದರೆ ಮನನೊಂದಿದ್ದ ಸಿಖ್ ಜನರು ಸರ್ಕಾರ ಕಟ್ಟಿಸಿದ ಕಟ್ಟಡ ಕೆಡವಿ, ಪುನಃ ತಾವೇ ಕೈಯಾರೆ (ಕಾರ್ ಸೇವಾ) ಕಾಯ ಸೇವೆಯ ಮೂಲಕ ಇನ್ನೂ ಅದ್ಭುತವಾಗಿ ಅಲಂಕಾರಿಕವಾಗಿ, ವೈಭವಯುತವಾಗಿ ಕಟ್ಟಿದ್ದಾರೆ. ಅವರ ಛಲ ಮೆಚ್ಚುವಂತಹುದು. ಬೀದರದಂತಹ ಸ್ಥಳ-ಸಿಖ್ಖರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವಲ್ಲಿಯೇ ಎಂತಹ ಗುರುದ್ವಾರ, ನಾನಕ ಝರಾ ನಿರ್ಮಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಪ್ರತಿ ಧರ್ಮಕ್ಕೆ ಸಾಮೂಹಿಕ ಚಟುವಟಿಕೆಗಳಿಗಾಗಿ ಒಂದು ಸ್ಥಳ ಬೇಕು. ಮುಸಲೀಮರಿಗೆ ಮಸೀದಿ, ಕ್ರೈಸ್ತರಿಗೆ ಚರ್ಚ್, ಯಹೂದಿಗಳಿಗೆ ಸಿನೆಗಾಗ್, ಬೌದ್ಧರಿಗೆ ವಿಹಾರ, ಜೈನರಿಗೆ ಬಸದಿ ಇತ್ಯಾದಿಗಳಿವೆ. ಹಿಂದೂಗಳಿಗೆ ಅನೇಕ ಮಂದಿರಗಳು ಇದ್ದರೂ ಅವು ಯಾವುದೇ ಸಂಸ್ಕಾರ ಕೊಡಲು, ಸಮಾನತೆ ತರಲು, ಸಹೋದರತ್ವ ಬೆಳೆಸಲು ಅಸಮರ್ಥವಾಗಿವೆ. ದುಡು ದುಡು ಬರುತ್ತಾರೆ ಗಂಟೆ ಬಾರಿಸುತ್ತಾರೆ; ಗದ್ದಲ ಮಾಡುತ್ತಾರೆ, ಕಾಯಿ ಒಡೆಸುತ್ತಾರೆ, ಹೊರಟು ಹೋಗುತ್ತಾರೆ. ಗುರು ಬಸವಣ್ಣನವರು ಅನುಭವ ಮಂಟಪ ಕಟ್ಟಿ ಇದೇ ಮಾದರಿಯಲ್ಲೇ ನೀವೂ ಕಟ್ಟಿರಿ ಎಂದು ಕಲಿಸಿ ಹೋದರೂ ಲಿಂಗಾಯತ ಸಮಾಜವು 800 ವರ್ಷಕಾಲ ಅದರ ಬಗ್ಗೆ ಆಲೋಚನೆಯನ್ನೇ ಮಾಡದೆ ಇರುವುದು ನೋಡಿದರೆ ಸೋಜಿಗ ಎನಿಸುತ್ತದೆ. ಮಠಗಳು ಆ ಕೊರತೆಯನ್ನು ತುಂಬಬಹುದಿತ್ತಾದರೂ ತುಂಬಲಿಲ್ಲ, ಕೆಲವು ಮಠಾಧೀಶರಂತೂ ಕೇವಲ ಅನ್ನ ದಾಸೋಹದಲ್ಲಿ ನಿರತರಾದರೇ ವಿನಾ ಜನರಿಗೆ ಸಂಸ್ಕಾರ ಕೊಡುವ ಬಗ್ಗೆ ಅರ್ಥಾತ್ ಜ್ಞಾನ ದಾಸೋಹದ ಕಡೆಗೆ ಗಮನವನ್ನೇ ಕೊಡಲಿಲ್ಲ, ಮಾತ್ರವಲ್ಲ ಬಸವ ತತ್ತ್ವವನ್ನು ಧೈರ್ಯವಾಗಿ ಪ್ರತಿಪಾದಿಸಲೂ ಸಹ ಹೆದರುತ್ತಾರೆ. ಅವರು ಯಾರಿಗೆ ಹೆದರುತ್ತಾರೆ, ಏಕೆ ಹೆದರುತ್ತಾರೆ ಎಂಬುದೇ ಜನರಿಗೆ ಬಗೆ ಹರಿಯದ ಸಮಸ್ಯೆಯಾಗಿದೆ.

ಇತ್ತೀಚೆಗೆ ಧಾರವಾಡದಲ್ಲಿ ಒಂದು ಧಾರ್ಮಿಕ ಸಭೆ ನಡೆದಾಗ ಓರ್ವ ಸ್ವಾಮಿಗಳು ಪೆದ್ದುಪೆದ್ದಾಗಿ ಹೇಳಿದರಂತೆ, "ನಮ್ಮ ಭಕ್ತರು ಹೇಳಿದಂತೆ ಕೇಳಬೇಕಾಗುತ್ತದೆ. ಆದ್ದರಿಂದ ಅವರನ್ನು ನೀವು ಮನವೊಲಿಸಿ," ಎಂದರಂತೆ. ಗುರುವು ಅವರ ಭಕ್ತರ ಮನ ಒಲಿಸಬೇಕೋ ಏನು ಅನ್ನರು ತಿಳುವಳಿಕೆ ಕೊಡಬೇಕೋ ? ಇದರಿಂದ ಲಿಂಗಾಯತ ಸಮಾಜದಲ್ಲಿ "ನಾಯಿಯು ಬಾಲವನ್ನು ಅಲ್ಲಾಡಿಸುವುದಕ್ಕಿಂತಲೂ ಬಾಲವೇ ನಾಯಿಯನ್ನು ಅಲ್ಲಾಡಿಸುವ ಕೆಲಸ ನಡೆಯುತ್ತಿದೆ." ಎಂದೆನಿಸದೇ? ಭಕ್ತರಿಗೆ ಜ್ಞಾನ ನೀಡಲು ಅಸಮರ್ಥರಾದವರು ಗುರು ಪೀಠಗಳನ್ನು ಏಕೆ ಏರಬೇಕು ? ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಸವಮಂಟಪ ನಿರ್ಮಾಣವಾಯಿತು; ಈಗ ಹಲವಾರು ಕಡೆ ನಿರ್ಮಾಣಗೊಂಡಿವೆ, ಗೊಳ್ಳುತ್ತಲಿವೆ.

ಇತ್ತೀಚೆಗೆ ಇಂಗ್ಲೆಂಡಿನ ರಾಜಧಾನಿ ಲಂಡನ್‌ದಲ್ಲಿ ಒಂದು ಗುರುದ್ವಾರ ನಿರ್ಮಾಣವಾಯಿತಂತೆ. ಕೆಲಸ ಆರಂಭಿಸುವ ಮೊದಲು ಒಂದು ಸಭೆ ಕರೆದಿದ್ದರಂತೆ. ಆಗ ಸಮಾಜದ

ನೇತಾರರು ಲಂಡನ್‌ದಲ್ಲಿ ಗುರುದ್ವಾರ ಆಗಬೇಕು. ಅದಕ್ಕೆ ಇಲ್ಲಿ ಬಂದವರೆಲ್ಲ ಧನ ಸಹಾಯ ಮಾಡಿರಿ ಎಂದರೆ ಮಹಿಳೆಯರು ಮೈಮೇಲಿದ್ದ ಬಂಗಾರದ ಆಭರಣಗಳನ್ನು ರಾಶಿ ಹಾಕಿದರಂತೆ ! ಸಿಖ್ಖರು ಲಕ್ಷಗಟ್ಟಳೆ ಪೌಂಡ್‌ಗಳನ್ನು ಕೊಟ್ಟರಂತೆ. ಆ ಗುರುದ್ವಾರವು ಅದ್ಭುತವಾಗಿದೆ ಎಂದು ಇಲ್ಲಿಯ ಸಿಖ್ಖರು ಮಾತನಾಡುತ್ತಿದ್ದರು. ಆಗ ಅನ್ನಿಸುತ್ತೆ "ನಿಜ , ಅವರುಗಳು ಅತೀವ ಶ್ರೀಮಂತರು ಅವರು ಉದಾರವಾಗಿ ಕೊಡುತ್ತಾರೆ. ನಮ್ಮ ಜನರು ಮಧ್ಯಮ ವರ್ಗದವರು, ಬಡವರು, ಎಲ್ಲಿಂದ ಕೊಡುತ್ತಾರೆ"? ಮರುಕ್ಷಣವೇ ಅನ್ನಿಸುತ್ತದೆ "ಇದು ಸುಳ್ಳು, ಸಿಖ್ಖರಷ್ಟು ಸಿರಿವಂತರು ಅಲ್ಲದಿದ್ದರೂ ಲಿಂಗಾಯತರು ಎಲ್ಲರೂ ದಟ್ಟ ದರಿದ್ರರೇನಲ್ಲ; ಇವರಲ್ಲೂ ಸಾಕಷ್ಟು ಶ್ರೀಮಂತರಿದ್ದಾರೆ, ಆದರೆ ಇವರ ಹಣ ತಮ್ಮ ಧರ್ಮ ಪ್ರಚಾರಕ್ಕೆ ಬಳಕೆಯಾಗುತ್ತಿಲ್ಲ"ಎಂದು.

ಉಂಬಾಗಳಿಲ್ಲೆನ್ನ ಉಡುವಾಗಳಿಲ್ಲೆನ್ನ
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತರಿಗೆ ಇಲ್ಲೆಂಬ,
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ,
ದೇವರಿಗೆ ಹಣ ಬಿಟ್ಟಿ ಹೇಳಿತ್ತೆ ಲಿಂಗದೇವ ?

- ಧರ್ಮಪಿತ ಬಸವಣ್ಣನವರು

ವೈಯಕ್ತಿಕ ಸುಖ ಭೋಗಗಳಿಗೆ, ದುರ್ವ್ಯಸನ- ದುರಾಚಾರಗಳಿಗೆ, ವೈಭವದ ವಿವಾಹ ಮುಂತಾದುವಕ್ಕೆ, ಅನ್ಯ ದೇವತೆಗಳ ಕ್ಷೇತ್ರಾಭಿವೃದ್ಧಿಗೆ ಹಣವು ಬಳಕೆಯಾಗುತ್ತಿದೆ. ಅನ್ನಾಹಾರದಷ್ಟೇ ಧರ್ಮವೂ ಅತ್ಯಗತ್ಯ ಎಂದು ಇವರಿಗೆ ಏಕೆ ಅನಿಸುತ್ತಿಲ್ಲ ಎಂದು ಖೇದವೆನಿಸುತ್ತದೆ.

ಗಣಾಚಾರ ಎಂಬ ತತ್ತ್ವ ನಮ್ಮ ಪಂಚ ಆಚಾರಗಳಲ್ಲಿ ಒಂದು. ಅನಿಷ್ಟವು(Evil)ಎಲ್ಲಿಯೇ ಇರಲಿ ತನ್ನ ಮನಸ್ಸಿನಲ್ಲಿರಲಿ, ಮನೆಯಲ್ಲಿರಲಿ , ಸಮಾಜದಲ್ಲಿರಲಿ, ರಾಷ್ಟ್ರದಲ್ಲಿರಲಿ ಅದನ್ನು ತತ್ತ್ವನಿಷ್ಠೆ ಆತ್ಮ ಬಲದಿಂದ ಎದುರಿಸಿ ತೊಲಗಿಸುವುದೇ ಗಣಾಚಾರ. ಗಣಾಚಾರದಲ್ಲಿ ಧೈರ್ಯವಿರುತ್ತದೆ ಕ್ರೌರ್ಯವಿರುವುದಿಲ್ಲ. ಸಿಖ್ಖರಲ್ಲಿ ಗಣಾಚಾರ ಮನೋಭಾವವಿದೆ; ಆದರೆ ಕ್ರೌರ್ಯವಿಲ್ಲ. ಕೆಲವು ಧರ್ಮೀಯರಲ್ಲಿ ಕ್ರೌರ್ಯ, ಹಿಂಸೆ, ಭಯೋತ್ಪಾದನೆ ಜೆಹಾದ್ ಹೆಸರಿನಲ್ಲಿ ನಡೆಯುತ್ತದೆ. ಆ ರೀತಿಯ ಮನೋಭಾವ ಸಿಖ್ಖರಲ್ಲಿಲ್ಲ. ಆದರೆ ತಮ್ಮ ಧರ್ಮಕ್ಕೆ ಚ್ಯುತಿ ಬಂದಾಗ, ಅಪಪ್ರಚಾರವಾದಾಗ ಅಷ್ಟೇ ಧೈರ್ಯದಿಂದ ಪ್ರತಿಭಟಿಸುತ್ತಾರೆ. ಆತ್ಮ ರಕ್ಷಣೆ ಮಾಡಿಕೊಳ್ಳುತ್ತಾರೆ. ಸ್ವಲ್ಪ ಕಾಲ ಖಲಿಸ್ತಾನ ಚಳುವಳಿ ಸಿಖ್ ಯುವಕರಿಂದ ನಡೆದುದಕ್ಕೆ ಇಡೀ ಸಮಾಜದ ಒಪ್ಪಿಗೆಯೇನಿಲ್ಲ. "ಅವರು ತಲೆ ಕೆಟ್ಟ ಹುಡುಗರು"ಎನ್ನುತ್ತಾರೆ. "ಹಾಗೆ ಹುಡುಗರ ತಲೆ ಕೆಡಲೂ ಕಾರಣವಿದೆ, ಏಕೆಂದರೆ ಈ ಬ್ರಾಹ್ಮಣ ಜನರು ನಮ್ಮನ್ನು ತಿರಸ್ಕಾರದಿಂದ ಕಾಣುತ್ತಾರೆ. ನಮ್ಮ ಗುರು ತೇಜ್ ಬಹಾದ್ದೂರರ ಬಲಿದಾನ ಆಗಿರುವುದೇ ಮುಸಲೀಮರಿಂದ ಹಿಂದೂ ಧರ್ಮವನ್ನು ರಕ್ಷಿಸಲು. ಆದರೂ ಇದನ್ನು ಅವರು ಅರ್ಥಮಾಡಿಕೊಂಡಿಲ್ಲ" ಎನ್ನುತ್ತಾರೆ. ನಿಜ ನಾವೆ: ಆಲೋಚಿಸೋಣ, ಭಾರತವನ್ನು ಪ್ರವೇಶಿಸಲು ಇದ್ದ ಭೂಭಾಗದಲ್ಲಿ, ಗಡಿ ಪ್ರದೇಶದಲ್ಲಿ ಇರುವ ಜನರ ಮೇಲೆಯೇ ಮುಸಲೀಮರ ದಾಳಿ ಸತತವಾಗಿ ಆಗುತ್ತಿದ್ದುದರಿಂದ ಗುರುನಾನಕರು ಸಿಖ್ ಧರ್ಮವನ್ನು ಸ್ಥಾಪಿಸುವ ಅನಿವಾರ್ಯತೆ ಒದಗಿ ಬಂದಿದೆ. ಒಂದು ವೇಳೆ ಸಿಖ್ ಧರ್ಮ ಆ ಪ್ರದೇಶದಲ್ಲಿ ಹುಟ್ಟದೇ ಇದ್ದರೆ ಇಸ್ಲಾಂ ಇನ್ನೆಷ್ಟು ಪ್ರಮಾಣದಲ್ಲಿ

ಬೆಳೆಯುತ್ತಿತ್ತೋ. ಪೂರ್ತಿ ಪಂಜಾಬ್‌ವರೆಗೂ ಭಾರತವು ಕತ್ತರಿಸಲ್ಪಡುತ್ತಿತ್ತೇನೋ. ಸಿಖ್ಖರಲ್ಲಿ ಶೌರ್ಯವಿದೆ ಎಂದೇ ಅವರು ಪರಕೀಯರ ದಾಳಿಯನ್ನು ಎದುರಿಸಲು ಸಮರ್ಥರಾದರು. ಕಷ್ಟಸಂಕಷ್ಟ ಬಂದರೆ ಅವರು ಮತ್ತಷ್ಟು ಗಟ್ಟಿಗೊಳ್ಳುವರೇ ವಿನಾ ಎದೆಗೆಡುವುದಿಲ್ಲ. ಶತ್ರುಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಕೇಶ, ಕೃಪಾಣಗಳು ಸಹಕಾರಿಯಾಗುತ್ತವೆ. ಮತ್ತು ಸಿಖ್ಖರನ್ನು ಗುರುತಿಸಲು ಕೇಶ ಮತ್ತು ಗಡ್ಡಗಳು ನೆರವಾಗುತ್ತವೆ. ಕೆಲವೊಮ್ಮೆ ವಿರೋಧಿಗಳು ಇವರ ಮೇಲೆ ಎರಗಲು ಕಾರಣೀಭೂತವಾಗುತ್ತವೆ. ಹಾಗೆಂದು ಅವರು ಹೆದರುವುದಿಲ್ಲ. ಎಲ್ಲರೂ ಒಟ್ಟಾಗಿ ಬಂದ ಸಂಕಷ್ಟವನ್ನು ಎದುರಿಸುತ್ತಾರೆ. ದೆಹಲಿಯಲ್ಲಿ ಹೆಲ್ಮೆಟ್ ಕಡ್ಡಾಯ ಮಾಡಿದಾಗ ಪೇಟ ತೆಗೆಯಲು ಒಪ್ಪಲಿಲ್ಲ. ಇಂಗ್ಲೆಂಡಿನಲ್ಲಿ ಪೋಲಿಸ್ ಇಲಾಖೆಗೆ ಸೇರಬೇಕೆಂದರೆ ಕೇಶ, ಗಡ್ಡ ತೆಗೆಯಬೇಕು ಎಂದಾಗಲೂ ಒಪ್ಪಲಿಲ್ಲ. ಫ್ರಾನ್ಸ್‌ನಲ್ಲಿ ಶಾಲೆಯ ಮಕ್ಕಳು ಕೂದಲು ಕಟ್ಟಿ ಅದಕ್ಕೆ ಪೇಟ ಸುತ್ತಬಾರದು ಎಂದಾಗ ಪ್ಯಾರೀಸ್‌ನಲ್ಲಿ ಪ್ರತಿಭಟನೆ ಮಾಡಿದರು. ಪುರುಷರ ಕುರುಹಾದ ಗಡ್ಡವನ್ನು ಗಣ (ಸಮಾಜ)ಲಾಂಛನವನ್ನಾಗಿ ಗುರು ಗೋವಿಂದ್ ಸಿಂಗ್ ಮಾಡಿದ್ದಾರೆ. ಅದನ್ನು ತೆಗೆಯಲು ಸಿಖ್ಖರು ಒಪ್ಪರು. ದೇವರ ಕುರುಹಾದ ಲಿಂಗಾಯತ ಸಮಾಜದ ಗಣಲಾಂಛನವಾದ ಇಷ್ಟಲಿಂಗವನ್ನು ಸುಲಭವಾಗಿ ಲಿಂಗಾಯತರು ಬಿಟ್ಟು ಬಿಡುತ್ತಾರೆ.ಯಾರೂ ತೆಗೆಸಬೇಕಾಗಿಲ್ಲ, ಅವರೇ ತೆಗೆದಿಟ್ಟು ಬಿಡುತ್ತಾರೆ. ಸಿಖ್ ಸಮಾಜದ ದೃಷ್ಟಿಯಲ್ಲಿ ನೋಡಿದಾಗ ಲಿಂಗಾಯತ ಸಮಾಜವು ಅತ್ಯಂತ ದುರ್ಬಲ ಮನಸ್ಸಿನ, ಹೇಡಿತನದ ಸ್ವಭಾವದಿಂದ ಕೂಡಿದ ನಿರಭಿಮಾನಿ ಜನರ ಹಿಂಡು ಎನಿಸುತ್ತದೆ, ಅದರೊಟ್ಟಿಗೆ ವಿಷಾದವೂ ಆಗುತ್ತದೆ.

ಗುರು ಬಸವಣ್ಣನವರ ಕಾಲದ ಮೊದಲನೆಯ ತಂಡದ ಶರಣರಲ್ಲಿದ್ದ ಕೆಚ್ಚು, ಸ್ವಾಭಿಮಾನ ಸಾವಿರದಲ್ಲಿ ಒಂದು ಅಂಶದಷ್ಟು ಇಂದಿನ ಅನುಯಾಯಿಗಳಲ್ಲಿ ಉಳಿಯದುದು ಒಂದು ದುರಂತವೇ ಸರಿ!

ಸಿಖ್ಖರ ವಿನಯ : ಈ ಜನರು ಸತತವಾಗಿ ಗ್ರಂಥವನ್ನು ಓದುವುದರಿಂದ , ಕೇಳುವುದರಿಂದ ಇವರ ಸಮೂಹದಲ್ಲಿ ಕೆಲವು ವಿಶೇಷ ಗುಣಗಳು ಅಳವಟ್ಟಿವೆ. ಅದರಲ್ಲಿ ಒಂದು ವಿನಯ, ಇನ್ನೊಂದು ಸೇವಾ ಮನೋಭಾವ. ನಾವು ಅವರಿಗೆ ಪರಧರ್ಮೀಯರಾದರೂ ಸಂತರನ್ನು ಗೌರವಿಸಬೇಕು ಎಂಬ ಮನೋಭಾವದಿಂದ ಅತ್ಯಂತ ವಿನೀತರಾಗಿ ವರ್ತಿಸುತ್ತಾರೆ. ಅನ್ಯ ದೇವತೆಗಳ ಪ್ರಸಾದವನ್ನು ಸ್ವೀಕರಿಸುವುದಿಲ್ಲ ; ಆದರೆ ನಾವು ಕಲ್ಲು ಸಕ್ಕರೆ ಪ್ರಸಾದ ಕೊಟ್ಟರೆ ಅಷ್ಟೇ ಭಕ್ತಿ -ಶ್ರದ್ಧೆಯಿಂದ ಸ್ವೀಕರಿಸುತ್ತಾರೆ. ಇದು ಧರ್ಮಪಿತರು ಬೋಧಿಸುವ "ಜಂಗಮ" ತತ್ತ್ವವನ್ನು ಹೋಲುತ್ತದೆ. ಅವರ ಶ್ರೀಮಂತಿಕೆ, ವೈಭವದ ಮುಂದೆ ನಮ್ಮದು ಬಡವೈಭವ ಎನ್ನಿಸುತ್ತದೆ. ಆದರೆ ಶ್ರೀ ಸತ್‌ನಾಮ ಸಿಂಗರಂತಹ ಶೀಸ್‌ಗಂಜ್ ಗುರುದ್ವಾರದ ಪ್ರಭಾವಶಾಲಿ ವ್ಯಕ್ತಿ "ಪ್ರಸಾದ" ಎಂಬ ಮನೋಭಾವದಿಂದ ಸಮ್ಮೇಳನದಲ್ಲಿ ಮಾಡಿಸಿದ ಅಡಿಗೆಯನ್ನು ತಾವೂ ಉಂಡರಲ್ಲದೇ ತಮ್ಮೊಡನೆ ಬಂದಿದ್ದ ಪ್ರತಿಯೊಬ್ಬ ಸಿಖ್ ಮುಖಂಡರಿಗೂ ಉಣ್ಣಿಸಿದರು. ಪ್ರತಿಯೊಬ್ಬರನ್ನೂ ಕರೆತಂದು ನಮ್ಮ ಕೈಯಿಂದ ಕಲ್ಲು ಸಕ್ಕರೆ ಪ್ರಸಾದವನ್ನು ಕೊಡಿಸಿದರು. ನಮ್ಮ ಧರ್ಮವು ಬೋಧಿಸಿದಂತೆ ಸಿಖ್ಖರಲ್ಲೂ ಪ್ರಸಾದಕ್ಕೆ ಬಹಳ ಮಹತ್ವವಿದೆ. ಅಮೃತ ಸರದಲ್ಲಿ 24ಗಂಟೆ ಕಾಲ ಲಂಗರ್-ಸಾಮೂಹಿಕ ಪ್ರಸಾದ/ದಾಸೋಹ ವಿರುತ್ತದೆ. ಸಾಮಾನ್ಯ ದಿನಗಳಲ್ಲಿ ದಿನಾಲು 50,000(ಐವತ್ತು ಸಾವಿರ) ದಿಂದ 70,000(ಎಪ್ಪತ್ತು ಸಾವಿರ)ದವರೆಗೆ ಅನ್ನ ದಾಸೋಹವಿರುವುದಂತೆ. ವಿಶೇಷ

ಉತ್ಸವಗಳಂದು2-3ಲಕ್ಷ ಜನರ ದಾಸೋಹ ನಡೆಯುತ್ತದಂತೆ. ಬಿಸಿ ಬಿಸಿ ಗೋಧಿ ರೊಟ್ಟಿ, ಗಟ್ಟಿ ಸಾರು, ಪಲ್ಯ, ಚಹಾ ತಯಾರಾಗುತ್ತಲೇ ಇರುತ್ತದೆ. ಪಾಲಕ ಸೊಪ್ಪಿನಸಾರು, ಚಪಾತಿ ನಮಗೆ ಇಷ್ಟವೆನಿಸಿತು.ಅತ್ಯಂತ ಭಕ್ತಿ-ಪ್ರೀತಿಯಿಂದ ಉಣ್ಣಿಸುತ್ತಾರೆ. ನಮ್ಮೊಡನೆ ಬಂದ ಕೆಲವು ಸಂದರ್ಶಕರು ರಾತ್ರಿ ಟೀಕಿಸುತ್ತಾ "ಏನು ಅಡುಗೆ, ಏನು ಊಟ! ರೊಟ್ಟಿ (ಫುಲಕಾ)ಯನ್ನು ನಾವು ಮಧ್ಯಾಹ್ನ ಊಟ ಮಾಡಲೇ ಇಲ್ಲ ." ಎಂದು ತಕರಾರು ತೆಗೆದು, "ಹೋಟೆಲ್ಲಿಗೆ ಕರೆದೊಯ್ಯಿರಿ." ಎಂದರಂತೆ. ಇವರಿಗೆ ಪ್ರಸಾದದ ಮಹತ್ವವು ತಿಳಿಯದು. ಆ ನಿರಂತರ ದಾಸೋಹದಲ್ಲಿದ್ದ ಔದಾರ್ಯ, ಸೇವೆ, ಗುರುತಿಸುವ ಸೌಜನ್ಯವು ಇಂಥವರಲ್ಲಿ ಇರದು. ನನಗೆ, ಗಂಗಾಮಾತಾಜಿಗಂತೂ "12ನೇ ಶತಮಾನದ ಅಪ್ಪ ಬಸವಣ್ಣನವರ ಮಹಾಮನೆ ಹೀಗೆ ಜೇನುಗೂಡಿನಂತೆ ನಿರಂತರ ಚಟುವಟಿಕೆಗಳ ಆಗರವಾಗಿದ್ದಿರಬಹುದು"ಎನಿಸಿತು. ಶರಣ ಮೇಳದಲ್ಲಿಯೂ ಇಂಥ ದೃಶ್ಯ ಕಾಣಬರುತ್ತದೆ. ಆದರೆ ಅಮೃತಸರದಲ್ಲಿ ವರ್ಷಪೂರ್ತಿ ನಡೆಯುತ್ತದೆ. ಸಿಖ್ ಯಾತ್ರಿಕರು ಮತ್ತು ಪ್ರವಾಸಿಕರು ಅಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಸಿಖ್ಖರಿಗೆ ಪ್ರಸಾದ ಸ್ವೀಕಾರದಲ್ಲಿ ಅಷ್ಟೇ ಶ್ರದ್ಧೆ. ಅವರಲ್ಲೂ ತಟ್ಟೆಯಲ್ಲಿ ಏನನ್ನೂ ಬಿಡುವಂತಿಲ್ಲ.

ಓರ್ವ ಸಿಖ್ ಶ್ರೀಮಂತ ತರುಣನು ಅಮೆರಿಕಾದಿಂದ ಬಂದು, ಶ್ರೀ ಸತ್‌ನಾಮ ಸಿಂಗರಿಗೆ ಮೊಬೈಲ್ ಕರೆ ಮಾಡಿದರು. ನಮ್ಮ ಸಮ್ಮೇಳನದ ವೇದಿಕೆಗೆ ಬರಲು ಇವರು ಆಹ್ವಾನಿಸಿದರು. ಭಾರಿ ದೊಡ್ಡ ಶ್ರೀಮಂತ, ವಿದ್ಯಾವಂತ, ಉದ್ಯಮಿ, ವರ್ಷಕ್ಕೊಮ್ಮೆ ಅಮೃತಸರಕ್ಕೆ ಕಡ್ಡಾಯವಾಗಿ ಬರುತ್ತಾರಂತೆ.ಆತ ಮಾತನಾಡುವುದರಲ್ಲಿ ಎಂಥಾ ಭಾಷೆ, ಎಷ್ಟು ವಿನಯ,ಬಾಯಿಂದ ಜ್ಞಾನದ ಮುತ್ತುಗಳೇ ಉದುರಿದಂತೆ ಭಾಸವಾಯಿತು.

ಹೀಗೆ ದೆಹಲಿಯಲ್ಲಿ ಒಬ್ಬರ ಮನೆಯಲ್ಲಿ ಬಸವ ಜ್ಯೋತಿ ನಡೆಯಿತು. ಅವರು ಅನೇಕ ಶರಣರನ್ನು ಆಹ್ವಾನಿಸಿದ್ದರು.ಬಂದವರಿಗೆ ಪ್ರವಚನದ ಬಳಿಕ ಪ್ರಶ್ನೆ ಕೇಳಲು ತಿಳಿಸಿದ್ದೆ. ಧರ್ಮದ ಬಗ್ಗೆ ತಿಳಿದುಕೊಳ್ಳಬೇಕು ಎಂಬುದಕ್ಕಿಂತಲೂ, ತಾವೇ ಬಹಳ ತಿಳಿದವರು. ಆದ್ದರಿಂದ ತೀಕ್ಷ್ಣವಾಗಿ ಪ್ರಶ್ನೆಗಳನ್ನು ಕೇಳಿ ಬಹು ಬುದ್ಧಿವಂತರು ಎನ್ನಿಸಿಕೊಳ್ಳಬೇಕು ಎಂದು ಕೆಲವರ ಹಂಬಲ. ಕೇಳುವುದರಲ್ಲಿ ವಿನಯವಿರದು, ಪೂಜೆ ಮಾಡುವುದರಲ್ಲಿ ಆಸಕ್ತಿ ಇರದು; ಪ್ರಸಾದದಲ್ಲಿ ನಿಷ್ಠೆ ಇರದು. ಪ್ರವಚನ ಹೇಳುತ್ತಿದ್ದರೆ ಕೇಳಿ ತಿಳಿದುಕೊಳ್ಳಬೇಕೆಂಬುದಕ್ಕಿಂತಲೂ, ತಾವೇ ಭಾರಿ ಬ್ಯುಸಿ ಇರುವವರಂತೆ ಎದ್ದೆದ್ದು ಹೋಗುವ ವರ್ತನೆ. "ಧರ್ಮಪಿತ ಬಸವಣ್ಣನವರು ಕಟ್ಟ ಬಯಸಿದ ಸಮಾಜ ಇದೆಯೆ?" ಎಂದು ಮನಸ್ಸು ರೋಸಿ ಹೋಗಿ "ಇಂಥವರನ್ನು ಸಂಸ್ಕರಿಸುವ, ಸಂಘಟಿಸುವ ಆಕಾಂಕ್ಷೆಯುಳ್ಳ ನಾವೇ ಮೂರ್ಖರು" ಎಂದು ಬೈದುಕೊಳ್ಳುವಂತಾಗುತ್ತದೆ. "ಅತ್ಯಂತ ಬಲಿಷ್ಠನೂ ಸುಂದರನೂ ಆದ ತಂದೆ, ಸುಂದರಿಯೂ ಸುಶೀಲಳೂ ಆದ ತಾಯಿ, ಇವರಿಂದ ಒಂದು ಅಂಗವಿಕಲ, ಬುದ್ಧಿಗೇಡಿ ಮಗು ಹುಟ್ಟಿದಂತೆ, ಅಪ್ಪ ಬಸವಣ್ಣ ಅವ್ವ ವಚನ ಸಾಹಿತ್ಯದ ಸಂತಾನ ಫಲವಾದ ಲಿಂಗಾಯತ ಸಮಾಜ ಎಂಬ ಶಿಶುವು, ಧಾರ್ಮಿಕ ಶ್ರದ್ಧೆ-ಶಿಷ್ಟಾಚಾರ ಬೆಳಸಿಕೊಳ್ಳದೇ ಹೀಗೇಕೆ ವಿಕಲಾಂಗವಾಯಿತು?" ಎನ್ನಿಸಿ ವಿಷಾದವೆನಿಸುತ್ತದೆ.

ಸಿಖ್ಖರ ಸೇವಾ ಮನೋಭಾವ ಆದರ್ಶಪ್ರಾಯ, ಅನುಕರಣೀಯ. ಗುರು ದ್ವಾರಗಳ ಬಳಿ ಚಪ್ಪಲಿ ಕಾಯುವುದು,ಚಪ್ಪಲಿ ಸ್ವಚ್ಛಮಾಡುವುದು, ಅಂಗಳ ತೊಳೆಯುವುದು, ಅಡಿಗೆಯ ಮನೆಯಲ್ಲಿ ಚಪಾತಿ ಲಟ್ಟಿಸುವುದು, ಊಟಕ್ಕೆ ತಟ್ಟೆ ಕೊಡುವುದು, ಬಡಿಸುವುದು, ಉಂಡ ನಂತರ ಉಂಡವರ ತಟ್ಟೆ ತೊಳೆದಿಡುವುದು ಹೀಗೆ ಒಂದೇ ಎರಡೇ.

ಗುರುದ್ವಾರಗಳಲ್ಲಿ ಪ್ರವೇಶಿಸುವಾಗ ಕಾಲು ತೊಳೆದುಕೊಳ್ಳುವುದು, ತಲೆಯ ಮೇಲೆ ವಸ್ತ್ರ ಹಾಕಿಕೊಳ್ಳುವುದು ಕಡ್ಡಾಯ. ಸ್ವಧರ್ಮೀಯರಿರಲಿ ಪರಧರ್ಮೀಯರಿರಲಿ ಪಾಲಿಸಲೇಬೇಕು. ನಮ್ಮಲ್ಲಿ ಧ್ವಜ ವಂದನೆ ಮಾಡುವಾಗ, ಶರಣು ಎನ್ನುವ ಭಂಗಿಯಲ್ಲಿ ನಿಂತುಕೊಳ್ಳಿ ಎಂದರೆ ಲಿಂಗಾಯತರಿದ್ದರೂ ಕೆಲವರು ಕೈಮುಗಿದು ನಿಲ್ಲುವುದಿಲ್ಲ. ಶ್ರೀ ಸತ್‌ನಾಮ ಸಿಂಗರು ಹೇಳಿದರು "ನಮ್ಮಲ್ಲಿ ಯಾವನೇ ವ್ಯಕ್ತಿ ಎಷ್ಟೇ ದೊಡ್ಡವನಿರಲಿ, ಧಾರ್ಮಿಕ ಶಿಷ್ಟಾಚಾರವನ್ನು ಪಾಲಿಸಲೇಬೇಕು " ಇದು ಸರಿ ಎನ್ನಿಸುತ್ತದೆ. ಏಕೆಂದರೆ ಪತ್ರಿಕೆಗಳವರು ರಾಜಕೀಯ ನೇತಾರರಿಗೆ ಬಹಳ ಮಹತ್ವ ಕೊಡುವುದರಿಂದ ಅವರನ್ನು ಕರೆಯುವುದರಲ್ಲೇ ಹೆಚ್ಚಿನವರಿಗೆ ಆಸಕ್ತಿ. ಕೆಲವು ಮಠಗಳ ಕಾರ್ಯಕ್ರಮಗಳಂತೂ ಸಚಿವ ಸಂಪುಟದ ಮೀಟಿಂಗ್ ಕಾರ್ಯಕ್ರಮದಂತೆ ಇರುತ್ತದೆ. ಕೆಲ ಗಣ್ಯರು ಬಹಳ ಬ್ಯುಸಿ ಇದ್ದವರಂತೆ ಮಧ್ಯದಲ್ಲೇ ಎದ್ದು ಹೋಗುವರು. ಅವರ ಬಾಲ ಬಡುಕರು ಅವರ ಹಿಂದೆ ಎದ್ದು ಹೋಗಿ ಸಭೆಯ ಶಿಸ್ತಿಗೆ ಚ್ಯುತಿ ತರುವರು. ಒಂದು ದೊಡ್ಡ ಕಾರ್ಯಕ್ರಮ ಕರ್ನಾಟಕದವರು ಇಬ್ಬರು ಆಂಧ್ರದ ಒಬ್ಬರು ಸಚಿವರು ಇದ್ದರು, ಇವರು ಎದ್ದು ಹೋಗುವಾಗ ರಾಷ್ಟ್ರೀಯ ದೂರದರ್ಶನ ಚಾನಲ್ ಕ್ಯಾಮರಾದವರು ಬಂದು,"ಸರ್ ಭರುವುದು ತಡವಾಯಿತು, ದಯವಿಟ್ಟು ಕುಳಿತುಕೊಳ್ಳಿರಿ. ವೇದಿಕೆಯದು ತೆಗೆದುಕೊಳ್ಳುತ್ತೇನೆ' ಎಂದು ವಿನಂತಿಸಿದ. ಆಗ ಆಂಧ್ರದ ಸಚಿವರು 'ನಮಗೆ ಬೇರೆ ಕೆಲಸವಿದೆ; ನಾವು ಎದ್ದು ಹೋಗುವುದನ್ನು ತಗೊಳ್ಳಯ್ಯ.' ಎಂದರು, ಆ ದುರಹಂಕಾರದ ಮಾತು ಕೇಳಿ ನನಗೆ ಮೈಯೆಲ್ಲಾ ಉರಿಯಿತು. ಮಂಗಲಮಯವಾದ ಧಾರ್ಮಿಕ ಸಭೆಗೆ ಬಂದು ತಾನು ಪುನೀತನಾದೆ ಎಂದುಕೊಳ್ಳದೇ, ತಾನು ಬಂದುದು ಹೋಗುವುದೇ ದೊಡ್ಡ ಘಟನೆ ಎಂದು ಭಾವಿಸುವುದು ಎಂತಹ ದುರ್ವರ್ತನೆ ! ರಾಜಕೀಯ ಜನರಿಗೆ ತಾಳ್ಮೆಯೇ ಇರದು. ನೆಮ್ಮದಿಯಿಂದ ಪ್ರಾರ್ಥನೆ ಮಾಡುವುದಿಲ್ಲ, ತಮ್ಮ ಜೊತೆ ಕುಳಿತ ಇತರ ಪುಡಾರಿಗಳೊಡನೆ ಮಾತನಾಡುತ್ತಾ ಪ್ರಾರ್ಥನೆಗೂ ಭಂಗ ತರುತ್ತಾರೆ. ಬೇರೆಯವರ ಭಾಷಣ ಸಹ ಕೇಳುವುದಿಲ್ಲ, ಬಾಯಿಗೆ ಬಂದದ್ದು ಏನೋ ಹೇಳಿ ಹೊರಟು ಬಿಡುತ್ತಾರೆ. ಇವೆಲ್ಲ ಧರ್ಮಕ್ಕೆ, ಧರ್ಮಗುರುವಿಗೆ, ಸಭೆಗೆ ಮಾಡುವ ಅವಮಾನಗಳೇ ಸರಿ. ಆದ್ದರಿಂದ ಧಾರ್ಮಿಕ ಸಮಾರಂಭಗಳಲ್ಲಿ ಮಂದಿರಗಳಲ್ಲಿ ಶ್ರದ್ಧೆ -ನಿಷ್ಠೆಗಳೇ ಪ್ರಧಾನವಾಗಿರಬೇಕು ಎಂಬುದನ್ನು ಸಿಖ್ಖರಿಂದ ಕಲಿಯುವುದು ಅಗತ್ಯವಿದೆ.

ಉಪನ್ಯಾಸಗಳ ವೈಖರಿ : ಸಾಮಾನ್ಯವಾಗಿ ಮಸೀದಿ, ಚರ್ಚ್ ಯಾವುದೇ ಇರಲಿ, ಗುರುದ್ವಾರಗಳಲ್ಲಂತೂ ತಮ್ಮ ಭಕ್ತಿ-ಶ್ರದ್ಧೆಗಳನ್ನು ಗಟ್ಟಿಗೊಳಿಸುವ ಬೋಧೆ, ಉಪನ್ಯಾಸ ಇರುತ್ತದೆ. ಲಿಂಗಾಯತ ಸಮಾಜದ ಕಾರ್ಯಕ್ರಮಗಳಲ್ಲಿ ಬಗೆಬಗೆಯ ವಿಚಾರದ ಬೋಧಕರು ಬಂದು ತಮಗೆ ತಿಳಿದುದನ್ನು ಹರಟಿ, ಜನಗಳ ಮನಸ್ಸು ಕಲಕಿ ಹೋಗಿಬಿಡುತ್ತಾರೆ. ಬಸವ ಜಯಂತಿಯ ವೇದಿಕೆಯ ಮೇಲೆ ಧರ್ಮಪಿತ ಬಸವಣ್ಣನವರನ್ನು ಏಕ ವಚನದಲ್ಲಿ ಸಂಬೋಧಿಸುವುದಲ್ಲದೆ ಅವರನ್ನು ನಿಂದಿಸಿಯೂ ಹೋಗುವ ಪ್ರವೃತ್ತಿ ಕಾಣುತ್ತೇವೆ. ಜೈನರಲ್ಲಿ ಕೆಲವೊಂದು ನಂಬಿಕೆಗಳ ಆಧಾರದ ಮೇಲೆ ವಿವಿಧ ಪಂಥಗಳಿವೆ. ಅವರು ತಮ್ಮ ತಮ್ಮ ಪಂಥಗಳ ಅನುಯಾಯಿಗಳ ಮುಂದೆ ಆಯಾ ಪಂಥದ ಗುರುಗಳು ಬೋಧೆ ಮಾಡುತ್ತಾರೆ. ಇನ್ನೊಂದು ವಿಚಾರಧಾರೆಯನ್ನು ಕಲಬೆರಕೆ ಮಾಡಲು ಹೋಗರು. ಆದರೆ ನಮ್ಮಲ್ಲಿ ಚಿದಾನಂದ ಮೂರ್ತಿಯಂತಹವರು ಸಹ ಬರೀ ಸುಳ್ಳನ್ನು ಹೆಣೆಯುವುದೇ ಅಲ್ಲದೆ ಬಸವ ಧರ್ಮವನ್ನು ಶುಚಿಕೆಡಿಸುವ ಪ್ರಯತ್ನ ಮಾಡುತ್ತಾರೆ. ಇದೆಲ್ಲಕ್ಕೂ ಪರಿಹಾರ ಹುಡುಕಿ ಉತ್ತಮ ಸಮಾಜವನ್ನು ಕಟ್ಟುವುದು ಅತ್ಯಗತ್ಯ. ಇದಕ್ಕೆ ಸಿಖ್ ಸಮಾಜ ನಿಜಕ್ಕೂ ಮಾದರಿಯಾಗಿದೆ ಎಂದರೆ ಉತ್ಪ್ರೇಕ್ಷೆ ಯಾಗದು.

ಆತ್ಮೀಯರಲ್ಲಿ ಬಿನ್ನಹ

- ಮಾತಾಜಿ

ಒಂದೆರಡು ತಿಂಗಳ ಹಿಂದಿನ ಕಲ್ಯಾಣ ಕಿರಣ ಸಂಚಿಕೆಯಲ್ಲಿ "ಈ ಸಮಾಜವನ್ನು ತಿದ್ದುವುದು ಸಾಧ್ಯವಿಲ್ಲ ಎಂಬ ನಿರಾಶೆ ನಮಗೂ ಆಗಿದೆ", ಎಂದು ನಾನು ಬರೆದುದನ್ನು ಓದಿ ಅನೇಕರು "ನೀವು ನಿರಾಶರಾಗಬಾರದು; ನೀವೇ ನಮಗೆ ಸ್ಫೂರ್ತಿ." ಎಂದು ಕಳವಳಗೊಂಡು ಪತ್ರ ಬರೆದರು, ಫೋನ್ ಮಾಡಿದರು.

12ನೆಯ ಶತಮಾನದಲ್ಲಿ ಅದ್ಭುತ ಶಕ್ತಿ ಸಂಚಲನವಾಯಿತು. ಅದನ್ನು ಮುಂದುವರಿಯಲು ಬಿಡದಂತೆ ವೈದಿಕ ಪುರೋಹಿತಶಾಹಿ ಹದ್ದಿನಂತೆ ಎರಗಿತು. ಶರಣರು ಪಡಬಾರದ ಕಷ್ಟಪಟ್ಟು ವಚನ ಸಾಹಿತ್ಯವನ್ನು ಸಂರಕ್ಷಿಸಿದರು. ನಂತರ 15ನೆಯ ಶತಮಾನದಲ್ಲಿ ವಚನ ಸಾಹಿತ್ಯ ಅರಣ್ಯದ ವನವಾಸ ಬಿಟ್ಟು ಹೊರಬರುವಷ್ಟರಲ್ಲಿ ಶೈವದ ಮುಸುಕು ಹೊದ್ದು ದುರ್ಬಲಗೊಂಡಿದ್ದು ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಶೈವದ ಮುಸುಕು ಹೊದ್ದೇ ಅಷ್ಟಿಷ್ಟು ನಡೆದಾಡಿತು, ಪುನಃ ಮಲಗಿತು. 20ನೆಯ ಶತಮಾನದ ಆದಿಯಲ್ಲಿ ವೀರಶೈವ ಪುರೋಹಿತ ಶಾಹಿಯಿಂದ ಪುನಃ ವೈದಿಕ ಸಂಸ್ಕಾರಗಳನ್ನು ಒಳಸೇರಿಸಿಕೊಂಡು ಮಲಿನ ಹೊಂದಿದೆ. ಶೈವ, ವೀರಶೈವ, ವೈದಿಕದ ಆವರಣಗಳನ್ನು ಕಳಚಿ ತನ್ನ ನಿಜ ಸ್ವರೂಪದಲ್ಲಿ ಅದರ ದರ್ಶನ ಮಾಡಿಸಬೇಕೆಂದರೆ, ಅನುಯಾಯಿಗಳಾದ ಲಿಂಗಾಯತರು ಅನೇಕರಿಗೆ ತಮ್ಮ ಧರ್ಮದ ಜ್ಞಾನವೇ ಇಲ್ಲ, ತಮಗೆ ಧರ್ಮದ ಜ್ಞಾನ ಇಲ್ಲ ಎಂಬ ಅರಿವು ಸಹ ಇಲ್ಲದೆ ನಮ್ಮನ್ನೇ ತಿದ್ದಲು ಬರುತ್ತಾರೆ.

ಅತ್ಯುತ್ತಮವಾದ ನೆಟ್‌ವರ್ಕ್‌ಗಳನ್ನು ಕ್ರೈಸ್ತರು, ಸಿಖ್ಖರು, ಮುಸಲೀಮರು ಬೆಳೆಸಿಕೊಂಡಿದ್ದಾರೆ. ಸಿಖ್ಖರಲ್ಲಿ ಪಂಚಪ್ಯಾರೇ ಎಂಬ 5 ಮುಖ್ಯಸ್ಥರನ್ನು ಗುರು ಗೋವಿಂದ ಸಿಂಗರು ಗುರುತಿಸಿ ಕೊಟ್ಟರು. ಪಂಚ ಪ್ರಬಂಧಕ ಸಮಿತಿ ಆಗಾಗ ಸೇರಿ ತಮ್ಮ ಧರ್ಮ - ಸಮಾಜಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸುತ್ತದೆ. ಅದೇ ರೀತಿ ಒಂದು ಪ್ರಜ್ಞಾವಂತ ನೇತಾರರ ಸಮೂಹವನ್ನು ತಯಾರಿಸಬೇಕೆಂದು ಗಣನಾಯಕ - ನಾಯಕಿಯರನ್ನು ನಾಮಕರಣ ಮಾಡಿದೆವು. ಎಂಥಾ ಒಳ್ಳೆಯ ಪರಿಕಲ್ಪನೆ. ಆದರೆ ಕೆಲವೇ ಕೆಲವರು ನಿಷ್ಠಾವಂತರನ್ನು ಬಿಟ್ಟರೆ ಬಾಕಿಯುವರು ಬರೀ ತಮ್ಮ ಸಂಸಾರ, ಮಕ್ಕಳು, ಮೊಮ್ಮಕ್ಕಳ ಪೋಷಣೆ, ಹಣ-ಆಸ್ತಿ ಸಂಪಾದನೆಯಲ್ಲಿ ತಲ್ಲೀನರು. ಕ್ರಮಬದ್ಧವಾಗಿ ಶರಣ ಮೇಳಕ್ಕೆ ಬರುವಷ್ಟು ನಿಷ್ಠೆ ಇಲ್ಲ, ಸಂಘಟನೆಗೆ ಸಮಯಕೊಡಲೂ ಆಸಕ್ತಿ ಹೊಂದಿಲ್ಲ. ಶರಣ ಮೇಳವು ನಿರಂತರವಾಗಿ ನಡೆಯಬೇಕಾದ ಮಹಾಸಂಗಮ. ಅದರ ಜವಾಬ್ದಾರಿ ಹೊರಲು ಜನರು ಸಿದ್ಧರಾಗಬೇಕು ಎಂದು ಬಸವ ಧರ್ಮ ಸಂಸತ್ತು ರೂಪಿಸಲಾಯಿತು. ವರ್ಷಕ್ಕೊಮ್ಮೆ ನಡೆಯುವ ಶರಣ ಮೇಳದ ಚಿಂತನ ಗೋಷ್ಠಿಯಲ್ಲಿ ಇವರುಗಳು ಭಾಗವಹಿಸಿ ಮಹತ್ವಪೂರ್ಣ ವಿಷಯಗಳ ಚಿಂತನೆ ಮಾಡಬೇಕು . 12ನೆಯ ಶತಮಾನದ ಅನುಭವ ಮಂಟಪದಂತೆ ಚಿಂತನೆ ನಡೆಯಬೇಕು ಎಂಬುದು ನನ್ನ ಆಶಯವಾಗಿತ್ತು . ತತ್ತ್ವನಿಷ್ಠರನ್ನು ಆಯ್ಕೆ ಮಾಡುತ್ತಲಿದ್ದೆವು. ಅಷ್ಟರಲ್ಲಿ ಕೆಲವರು "ಅವರನ್ನು ತಗೊಳ್ಳಿರಿ; ಇವರನ್ನು ತಗೊಳ್ಳಿರಿ " ಎಂದು ಸೂಚಿಸಲು ತೊಡಗಿದರು.. ಮತ್ತೆ ಅರೆ ಮನಸ್ಸಿನ ಕಪಟಿಗಳು ಎರಡೂ ದಂಡೆಗಳ ಮೇಲೆ ಕಾಲಿಟ್ಟವರು, ಒಳಗೆ ಪ್ರವೇಶಗೊಂಡರು. ಇಂಥವರಿಂದ ಏನನ್ನೂ ನಿರೀಕ್ಷಿಸಲು ಆಗದು ಎಂದು ಬಸವ ಧರ್ಮ ಸಂಸತ್‌ದ ಪರಿಕಲ್ಪನೆ ಚೆನ್ನಾಗಿದ್ದರೂ ಕೈಬಿಡಬೇಕಾಯಿತು.

ಸಿಖ್ ನೇತಾರ ಸತ್ ನಾಮ ಸಿಂಗರು ಚನ್ನಬಸವಾನಂದ ಸ್ವಾಮಿಗಳಿಗೆ ಹೇಳಿದಂತೆ "ನಾವು ಮಕ್ಕಳಿಂದಲೇ ಧೈರ್ಯ ತುಂಬುತ್ತೇವೆ. ಧರ್ಮರಕ್ಷಣೆಗಾಗಿ ನೀವು ಯಾವುದೇ ತ್ಯಾಗಕ್ಕೂ ಸಿದ್ಧರಾಗಿರಬೇಕು . ಎಲ್ಲಿಗೆ ಕಳಿಸಿದರೂ ಹೋಗಲು ತಯಾರಾಗಿರಬೇಕು. ಗುರು ತೇಜಬಹಾದ್ದೂರ್ ಮುಂತಾದವರು ಎಂತಹ ಬಲಿದಾನ ಮಾಡಿದ್ದಾರೆ ಎಂದು ಕ್ರಾಂತಿಕಾರಿ ಗೀತೆಗಳನ್ನು, ಕಥೆಗಳನ್ನು ಹೇಳುತ್ತೇವೆ." ಎಂದು.

ಬಸವಮಂಟಪಗಳಲ್ಲಿ ಪ್ರಾರ್ಥನೆ ನಡೆಯುತ್ತಿದ್ದರೂ ಹೆಚ್ಚಿನ ಜನರು ಬರುವುದಿಲ್ಲ. ತಾಯಿ ತಂದೆ ಬಂದರೂ ತಮ್ಮ ಮಕ್ಕಳನ್ನು ಕರೆತರುವುದಿಲ್ಲ. ಭಾನುವಾರದಂದು ಮಕ್ಕಳು ನಿದ್ದೆ ಮಾಡುತ್ತಾ, ಟಿ. ವಿ. ನೋಡುತ್ತಾ , ಪೋಲಿಗಳಾಗಿ ಬೀದಿ ತಿರುಗುತ್ತಾರೆ. ಅವರಿಗೆ ಶೌರ್ಯವೂ ಬರುವುದಿಲ್ಲ, ತಮ್ಮ ಧರ್ಮದ ಜ್ಞಾನವೂ ಆಗುವುದಿಲ್ಲ, ಯುವಕರು ಹೆಚ್ಚಾಗಿ ಸಕ್ರಿಯವಾಗಿ ಕಾರ್ಯೋನ್ಮುಖರಾಗಿರುವ ರಾಷ್ಟ್ರೀಯ ಬಸವ ದಳಗಳು ಕೆಲವೇ ಕೆಲವು ಮಾತ್ರ. ಓರ್ವರು ನಿಷ್ಠಾವಂತ ಶರಣರ ಮಗಳು ಕೆಲವು ದಿವಸಗಳ ಮಟ್ಟಿಗೆ ಇರಲು ಸ್ಥಳ ಕೇಳಿಕೊಂಡು ಬಂದಿದ್ದಳು. ಆಕೆಯ ಬಿಗಿ ಪ್ಯಾಂಟ್, ಎದೆ ಪ್ರದರ್ಶಿಸುವ ಮೇಲಿನ ಅಂಗಿ ನೋಡಿ ನಾನು ದಿಗ್ಭ್ರಾಂತಿಯಿಂದ ಕುಳಿತುಬಿಟ್ಟೆ. ಇದೇನೇ ಮಕ್ಕಳಿಗೆ ಕಲಿಸುವ ಸಂಸ್ಕೃತಿ ಎನಿಸಿ ದುಃಖವಾಯಿತು.

ರಾಷ್ಟ್ರೀಯ ಬಸವ ದಳದ ಹೊಣೆಗಾರಿಕೆ

ನಾನೊಂದು ಕಾರಣಕೆ ಮರ್ತ್ಯಕ್ಕೆ ಬಂದೆನು
ಬಂದ ಬಳಲಿಕೆಯ ಪರಿಹರಿಸಲು ಚನ್ನಬಸವಣ್ಣ ಬಂದನು
ಇನ್ನು ಬಾರದಂತೆ ಪ್ರಭುದೇವರು ಬಂದರು.
ಇದಕ್ಕೆ ಆಜ್ಞಾಕರ್ತ್ಯ ಮಡಿವಾಳ ಮಾಚಿತಂದೆ ಬಂದನು.
ನಾನಿನ್ನಾರಿಗಂಜೆನು, ಬದುಕಿದೆನು ಕಾಣಾ ಲಿಂಗದೇವಾ. (ಬ.ಷ.ವ. 1165)

ಇದು ಬಹಳ ಮಹತ್ವಪೂರ್ಣ ವಚನ. ಕಾರಣಿಕ ಪುರುಷರಾದ ಧರ್ಮಪಿತ ಬಸವಣ್ಣನವರು ಕಾರಣಿಕರು. ಒಂದು ವಿಶಿಷ್ಟ ಉದ್ದೇಶ ಹೊತ್ತೇ ಬಂದರು. ಅವರು ಇಟ್ಟುದು ಬಹಳ ದಿಟ್ಟ ಹೆಜ್ಜೆ. ಸಮಾಜ ಪರಿವರ್ತನೆಯ ಕಾರ್ಯವನ್ನು ಕೈಗೊಳ್ಳುವುದೂ ಒಂದೇ, ಹುಲಿಯ ಗವಿಯನ್ನು ಹೋಗುವುದೂ ಒಂದೆ. ಆಗ ಆಗುವ "ಬಳಲಿಕೆ " ಬಹಳ. ಸಂಪ್ರದಾಯ ಬದ್ಧ ಸಮಾಜವೂ ವಿಚಾರಶೀಲರನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಶೋಷಕರು ಪರಿವರ್ತನೆಯ ವಿರೋಧಿಗಳಾಗಿರುತ್ತಾರೆ. ಶೋಷಿತರು ಅಜ್ಞಾನಿಗಳಾಗಿ ಶೋಷಕರ ಕಾಲನ್ನೇ ಹಿಡಿಯುತ್ತಾರೆ.ಆದರೂ ಎದೆಗೆಡದೆ ಮುನ್ನಡೆಯುವಾಗ ತುಂಬಾ ಬಳಲಿಕೆ(Mental strain)ಯಾಗುತ್ತದೆ. "ನೀವು ಹಿಡಿದ ದಾರಿ ಸರಿ ಇದೆ' ಎಂದು ಹೇಳುವವರ ಅಗತ್ಯ ಬಹಳವಿರುತ್ತದೆ. ಚಿನ್ಮಯಜ್ಞಾನಿ ಚನ್ನಬಸವಣ್ಣನವರು ವಯಸ್ಸಿನಲ್ಲಿ ಕಿರಿಯರಾದರೂ ಜ್ಞಾನದಲ್ಲಿ ವಿಚಾರಶೀಲತೆಯಲ್ಲಿ ಮುಂದಿದ್ದರಿಂದ ಧರ್ಮಪಿತ ಬಸವಣ್ಣನವರ ಧ್ಯೇಯೋದ್ದೇಶ, ಮನಸ್ಸಿನ ಒಘವನ್ನು ಅರಿಯಬಲ್ಲವರಾಗಿದ್ದರು. ಇದರಿಂದಾಗಿ ಬಂದ ಮಾನಸಿಕ ವ್ಯಥೆ, ಬಳಲಿಕೆ ಪರಿಹಾರವಾಗುತ್ತಿತ್ತು. ಆದರೆ ಪ್ರಭುದೇವರಂತಹ ಉತ್ತುಂಗ ಜ್ಞಾನಿಯು ಬಂದಾಗಲಂತೂ ಬಸವಣ್ಣನವರ ಧೈರ್ಯ, ಆತ್ಮಬಲ ನೂರ್ಮಡಿಸಿತು. "ನಾನು ಹಿಡಿದ ಮಾರ್ಗ ನೂರಕ್ಕೆ ನೂರು ಸರಿಯಾಗಿದೆ ಎಂದೇ ಅಲ್ಲಮಪ್ರಭುವಿನಂತಹ ವಿಚಾರಶೀಲರು, ಪ್ರೌಢರು ನಮ್ಮ ಆಂದೋಲನದಲ್ಲಿ ಬಂದು ಸೇರಿದರು." ಎಂಬ ವಿಶ್ವಾಸ ಬಲಿತ ಧರ್ಮಪಿತರಿಗೆ ಮಾನಸಿಕ ಬಳಲಿಕೆಗೆ ಅವಕಾಶವೇ

ಇಲ್ಲದಂತಾಯಿತು. ಶಾಸಕಾಂಗ, (ಧರ್ಮಗುರು ಬಸವಣ್ಣನವರು) ನ್ಯಾಯಾಂಗ (ಅಲ್ಲಮಪ್ರಭು, ಚನ್ನಬಸವಣ್ಣ) ವೇನೋ ಸಿದ್ಧವಾಯಿತು. ಧೈರ್ಯದಿಂದ ಆಚರಣೆಗೆ ತರುವ ಕಾರ್ಯಾಂಗದ ಅಗತ್ಯವಿದ್ದು ಧರ್ಮ ಅಥವಾ ಒಳ್ಳೆಯ ಮೌಲ್ಯಗಳು ಸಂರಕ್ಷಿಸಲ್ಪಡಬೇಕಾದರೆ ವೀರತ್ವವೂ ಅಗತ್ಯ. ಅಂಥ ಸನ್ನಿವೇಶದಲ್ಲಿ ಮಡಿವಾಳ ಮಾಚಿದೇವರ ಆಗಮನವಾಗಿತ್ತು. ಅವರು ಧೈರ್ಯವಾಗಿ ಮೌಲ್ಯಗಳನ್ನು ಪ್ರತಿಪಾದಿಸುವುದೇ ಅಲ್ಲದೆ ಅವುಗಳ ಉಳಿವಿಗಾಗಿ ಹೋರಾಡಬಲ್ಲ ಧೈರ್ಯವಂತರು ಕೂಡ. ಹೀಗಾಗಿ ಮಡಿವಾಳ ಮಾಚಿದೇವರ ಬರುವು ಧರ್ಮಪಿತರಿಗೆ ಅದ್ಭುತ ಆತ್ಮಬಲವನ್ನು ನೀಡಿತು. ಅವರ ನಿರೀಕ್ಷೆಯಂತೆ ಮಾಚಿ ತಂದೆ ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರಲ್ಲವೇ ?

ಅಂದಿನ ಕಾರ್ಯವನ್ನು ಪುನಃ ಮುಂದುವರಿಸಬೇಕೆಂದು ಬಸವಧರ್ಮಪೀಠ, ರಾಷ್ಟ್ರೀಯ ಬಸವ ದಳಗಳನ್ನು ಸ್ಥಾಪಿಸಲಾಯಿತು. ರಾಷ್ಟ್ರೀಯ ಬಸವದಳ ಬಸವಧರ್ಮ ಪೀಠದ ಅಂಗ ಸಂಸ್ಥೆ, ಆದ್ದರಿಂದ ಅವು ಬಸವಧರ್ಮಪೀಠವು ಕೈಗೊಳ್ಳುವ ನಿರ್ಣಯಗಳಿಗೆ ಬದ್ಧವಾಗಬೇಕು. ಲಿಂಗದೇವ ಪ್ರಸಂಗದಲ್ಲಿ ಕೆಲವರು ಅಲ್ಲಾಡಿಬಿಟ್ಟರು.

'ಎಲ್ಲರೂ ವೀರರು ಎಲ್ಲರೂ ಧೀರರು. ಓಡುವ ಮುಖದಲ್ಲಿ ಕಾಣಬಹುದು.
ಕಾಳಗದ ಮುಖದಲ್ಲಿ ಕಾಣಬಾರದು '

ಧರ್ಮಪಿತರ ಈ ವಚನ ಬಹಳ ಮಾರ್ಮಿಕವಾಗಿದೆ. ಸ್ಕಾರ್ಫ್ ಹಾಕಿ ಪ್ರಾರ್ಥನೆ ಮಾಡುವವರೆಲ್ಲರೂ ರಾಷ್ಟ್ರೀಯ ಬಸವ ದಳದ ಸದಸ್ಯರೇ ಎಂದು ಒಳಗಿನವರು ಹೊರಗಿನವರು ಉಭಯತರೂ ಭಾವಿಸುತ್ತಾರೆ. ಸಾವಿರಾರು ಜನರು ಯುದ್ಧ ಮಾಡುವಾಗ ಎಲ್ಲರೂ ವೀರ ಸೈನಿಕರಾಗಿಯೇ ತೋರುತ್ತಾರೆ. ಶತ್ರುಗಳಿಗೆ ಹೆದರಿ ಹಿಮ್ಮೆಟ್ಟುವಾಗ (ಓಡುವಾಗ) ಮಾತ್ರ ಅವರ ಶೂರತನವು ಬಯಲಾಗುತ್ತದೆ. ಹಾಗೆ 'ಲಿಂಗದೇವ' ಪ್ರಸಂಗದಲ್ಲಿ ಅನೇಕರ ಶೂರತನ, ತತ್ತ್ವನಿಷ್ಠೆ ಬಯಲಾಯಿತು.

ರಾಷ್ಟ್ರೀಯ ಬಸವದಳದವರಲ್ಲಿ ತತ್ತ್ವನಿಷ್ಠೆ ಅಗತ್ಯ

ಹಿಂದೂ ಸಮಾಜದ ದೌರ್ಬಲ್ಯ, ದೋಷವಿರುವುದು ಬಹುದೇವತೋಪಾಸನೆ ಮತ್ತು ಬಹು ಗುರೂಪಾಸನೆಯಲ್ಲಿ . ನೂರಾರು ದೇವತೆಗಳು, ನೂರಾರು ಪಂಥಗಳು, ಹಾಗೆಯೇ ನೂರಾರು, ಸಾವಿರಾರು ಗುರುಗಳು; ಅವರ ಸುತ್ತ ಒಂದೊಂದು ಗುಂಪು. ಹಿಂದು ಸಮಾಜ ಗರ್ಭದಲ್ಲೆ ಹುಟ್ಟಿರುವ ಲಿಂಗಾಯತ ಸಮಾಜಕ್ಕೆ ಈ ವಂಶಪಾರಂಪರಿಕ ಕಾಯಿಲೆ ಬಳುವಳಿಯಾಗಿ ಬಂದಿದೆ. ದಿ 6-11-2005 ದೆಹಲಿಯ ಸೋಮನಾಥ ಬಿರಾದಾರ ಅವರ ಮನೆಯಲ್ಲಿ ಬಸವಜ್ಯೋತಿ ಕಾರ್ಯಕ್ರಮ ಏರ್ಪಡಿಸಿದ್ದರು. ಅನೇಕರ ಅಳಲು ಒಂದೇ "ಲಿಂಗಾಯತ ಸಮಾಜದಲ್ಲಿ ಒಬ್ಬೊಬ್ಬ ಮಠಾಧೀಶರು ಒಂದೊಂದು ರೀತಿ ಹೇಳುತ್ತಾರೆ. ನಮ್ಮ ತಲೆಯ ತುಂಬಾ ಗೊಂದಲಗಳೇ ಗೊಂದಲಗಳು." ಸುಡು ಸುಡು ಬಿಸಿ ಹಾಲಿನಲ್ಲಿ ಬಾಯಿಟ್ಟು ಸುಟ್ಟುಕೊಂಡ ತೆನಾಲಿ ರಾಮಕೃಷ್ಣನ ಬೆಕ್ಕಿನಂತೆ ಆಗಿರುವ ಲಿಂಗಾಯತರು ಗುರುಗಳು ಎಂದರೆ ಅಂಜುವಂತಾಗಿದೆ- ಆ ಬೆಕ್ಕು ಹಾಲನ್ನು ನೋಡಿ ಅಂಜಿದಂತೆ ! ಮಠಾಧೀಶರು ಎಲ್ಲರೂ ಕುಳಿತು ಒಟ್ಟಾಗಿ ಚಿಂತನೆಯನ್ನು ಮಾಡಿ ಒಂದು ನಿರ್ಧಾರಕ್ಕೆ ಬರುವುದಿಲ್ಲ, ಭಕ್ತರ ಮೇಲೆ, ತಮ್ಮದೇ ವೈಯಕ್ತಿಕ ಪ್ರಭಾವ ಬೀರಲು ಒಬ್ಬರಮೇಲೆ ಒಬ್ಬರು

ಸ್ಪರ್ಧಿಸುವರು. ಮಸೀದಿಗಳು ಜಾಸ್ತಿಯಾದಷ್ಟು ಮುಸ್ಲಿಂರ ಸಂಘಟನೆಯಾಗುವುದು, ಚರ್ಚ್ ಜಾಸ್ತಿಯಾದಷ್ಟು ಕ್ರೈಸ್ತ ಧರ್ಮ ಬೆಳೆಯುವುದು, ಲಿಂಗಾಯತ ಮಠಗಳು ಹೆಚ್ಚಿದಷ್ಟು ಸಮಾಜವು ಇನ್ನೂ ಹೆಚ್ಚು ಒಡೆಯುವುದು. ಇದು ನಿಜಕ್ಕೂ ಎಂಥಾ ದುರ್ದೈವ.

ಮಠಗಳ ಮೂಲಕ ಆಗಲಾರದ ಧರ್ಮ ಪ್ರಚಾರವನ್ನು ರಾಷ್ಟ್ರೀಯ ಬಸವ ದಳಗಳೆಂಬ ಸಾಮಾಜಿಕ, ಧಾರ್ಮಿಕ ಸಂಘಟನೆ ಮೂಲಕ, ಗೃಹಸ್ಥರಿಂದಲೇ ಮಾಡಿಸೋಣ ಎಂಬ ಆಕಾಂಕ್ಷೆಯಿಂದ ಆರಂಭಿಸಿದೆವು. ಯಶಸ್ವಿಯೂ ಆಯಿತು ಎಂದುಕೊಳ್ಳುವಷ್ಟರಲ್ಲಿ ಅದರ ಮೇಲೆ ಹಲವಾರು ಮಠಾಧೀಶರ ಕೆಂಗಣ್ಣುಗಳು ಬಿದ್ದವು. ಅನುಗ್ರಹದ ಕಣ್ಣಾದರೆ ಉದ್ಧಾರ ಸಾಧ್ಯ ; ಅವು ಉರಿಗಣ್ಣುಗಳು. ದುರ್ಬಲ ಮನದ ಕೆಲವು ಪದಾಧಿಕಾರಿಗಳಿಂದ ಕೂಡಿದ ರಾಷ್ಟ್ರೀಯ ಬಸವದಳಗಳು ಉರಿಗಣ್ಣಿನ ತಾಪ ತಾಳದೆ ಸುಟ್ಟೇ ಹೋದವು. ತತ್ತ್ವನಿಷ್ಠರು ಮಾತ್ರ ಅವುಗಳನ್ನು ಉಳಿಸಿಕೊಳ್ಳಲು, ಬೆಳೆಸಲು ಸಮರ್ಥರಾಗಿದ್ದಾರೆ. ಇನ್ನೂ ಚೆನ್ನಾಗಿ ಬೆಳೆಸಬೇಕಾದರೆ ಕೆಲವು ಸೂಚನೆಗಳನ್ನು ಇವು ಪಾಲಿಸಬೇಕು.

1. ತತ್ತ್ವ ನಿಷ್ಠರಲ್ಲದ(ವೀರಶೈವ)ಲಿಂಗಾಯತರನ್ನು ಬದಿಗಿಟ್ಟು ತತ್ತ್ವದಲ್ಲಿ ಗಟ್ಟಿಗೊಂಡವರನ್ನು ಒಳಗೆ ತೆಗೆದುಕೊಳ್ಳುತ್ತಾ ಹೋಗಬೇಕು.
2. ಬೇರೆ ಬೇರೆ ಹೊರಗಿನ ಉಪನ್ಯಾಸಕರನ್ನು ಕರೆಸಬಾರದು. ಅವರು ತಾತ್ತ್ವಿಕವಾಗಿ ಗಟ್ಟಿಗೊಂಡವರಿರದೆ ವೀರಶೈವ ಬಳಸುತ್ತಾರೆ. ಧರ್ಮಪಿತರನ್ನು ಏಕವಚನದಲ್ಲಿ ಸಂಬೋಧಿಸುತ್ತಾರೆ. ನಿಂದಿಸುತ್ತಾರೆ. ಧರ್ಮಪಿತರ ಜೀವನದ ಬಗ್ಗೆ ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮೇಶ್ವರ ಮುಂತಾದವರ ಕಥೆಯನ್ನು ತಿರುಚುತ್ತಾರೆ. ವೇದಿಕೆಯ ಮೇಲೆ ಕರೆಸಿ ಅವಮಾನ ಮಾಡಬಾರದೆಂದು ಸುಮ್ಮನೆ ಕುಳಿತರೆ ಬಸವಾದಿ ಪ್ರಮಥರಿಗೆ ಅವಮಾನವಾಗುತ್ತದೆ. ಅವರಿಗೆ ಪ್ರಶ್ನೆ ಕೇಳಿದರೆ ಘರ್ಷಣೆ, ವಾದ ವಿವಾದ ಉಂಟಾಗಿ ಭಾಕ್ತಿಕ ವಾತಾವರಣ ಕೆಡುತ್ತದೆ. ಆದ್ದರಿಂದ ರಾಷ್ಟ್ರೀಯ ಬಸವದಳಗಳ ಶರಣರೇ ಉಪನ್ಯಾಸ ಮಾಡಲು ತಯಾರಾಗಬೇಕು. ಪ್ರಾರ್ಥನೆಯ ನಂತರ ವಚನಗಳನ್ನು ಓದಿ ಪ್ರವಚನ ಮಾಡಬೇಕು. ಸಾಕಷ್ಟು ಬಸವಧರ್ಮ ಪೀಠದ ಪ್ರಕಟಣೆಗಳಿವೆ. ಅವನ್ನು ಪಠಣ ಮಾಡಬೇಕು. ಬೇರೆಯವರ ಕೃತಿಗಳನ್ನು ಓದಿ, ಚಿಂತನೆ ಚರ್ಚೆ ವಿಮರ್ಶೆ ತಾವು ತಾವೇ ಮಾಡಬೇಕು.
3. ರಾಷ್ಟ್ರೀಯ ಬಸವ ದಳದವರ ತತ್ತ್ವನಿಷ್ಠೆ, ಶಿಸ್ತಿನ ಬಗ್ಗೆ ಅನೇಕರಿಗೆ ಮೆಚ್ಚುಗೆ ಇದೆ. ಆದರೆ ಅಂತರಂಗದಲ್ಲಿ ಮತ್ಸರ ಪೂರ್ಣ ಅಸಹನೆ ಇದೆ. ಹೇಗಾದರೂ ಮಾಡಿ ರಾಷ್ಟ್ರೀಯ ಬಸವ ದಳದ ನಿಷ್ಠಾವಂತರನ್ನು ತಮ್ಮ ಕಡೆಗೆ ಎಳೆದುಕೊಳ್ಳಬೇಕೆಂಬ ಆಕಾಂಕ್ಷೆ ಇದೆ. ಇದಕ್ಕಾಗಿ ಹಲವಾರು ಬಗೆಯ ತಂತ್ರಗಳನ್ನು ಹೂಡುತ್ತಾರೆ. ಎಲ್ಲರೂ ಒಟ್ಟಾಗಿ ಬಂದು ಸಭೆಯನ್ನು ತುಂಬುತ್ತಾರೆ ಎಂದು ಆಹ್ವಾನಿಸುತ್ತಾರೆ. ಆದರೆ ಪ್ರಸಂಗ ಬಂದರೆ ಅವಮಾನ ಮಾಡುತ್ತಾರೆ. ಕೆಲವರು ಕೀರ್ತಿಪ್ರಿಯರಾದ ಬಸವ ದಳದ ಪದಾಧಿಕಾರಿಗಳು ದೊಡ್ಡ ಮನುಷ್ಯರು ಕರೆದರೆಂದು ವೇದಿಕೆ ಮೇಲೆ ಕುಳಿತು ಮಾಲೆ ಹಾಕಿಸಿಕೊಳ್ಳಲು ಉತ್ಸುಕರಾಗಿ ತಾವೂ ಹೋಗುವುದಲ್ಲದೆ ಇನ್ನಿತರರನ್ನು ಕರೆದೊಯ್ಯುತ್ತಾರೆ: ಮತ್ಸರಿಗರಿಂದ ಏನಾದರೂ ಅನ್ನಿಸಿಕೊಂಡು ಅವಮಾನ ಮಾಡಿಸಿಕೊಂಡು ಬರುತ್ತಾರೆ.

ಯಾವ ಯಾವ ಕಾರಣಗಳಿಗಾಗಿ ಲಿಂಗಾಯತ ಸಮಾಜದಲ್ಲಿ ಗುರುನಿಷ್ಠೆ, ಲಿಂಗನಿಷ್ಠೆ, ಸಮಾಜನಿಷ್ಠೆ, ಸಂಘಟನೆ ಬೆಳೆದಿಲ್ಲವೋ ಆ ಕಾರಣ ಹುಡುಕಿ ಈಗ ಪರಿಹಾರವೆಂಬಂತೆ ರಾಷ್ಟ್ರೀಯ ಬಸವ ದಳಗಳನ್ನು ಕಟ್ಟಲಾಗುತ್ತಿದೆ. ಪುನಃ ಅದೇ ದೋಷ ದೌರ್ಬಲ್ಯಗಳಿಗೆ ಈಗಿನವರೂ ಸಿಕ್ಕಿದರೆ ಪ್ರಯೋಜನವೇನು ?

ಕೇಂದ್ರ ಸಂಸ್ಥೆಯನ್ನು ಬಲಪಡಿಸುವಿಕೆ

ಯಾವಾಗಲೂ ಒಂದು ಕೇಂದ್ರೀಯ ಶಕ್ತಿ ಬಹುಮುಖ್ಯ. ಅತ್ಯುತ್ತಮ ಉದಾಹರಣೆ ಎಂದರೆ ಕ್ರೈಸ್ತರ ಕ್ಯಾಥೋಲಿಕ್ ವ್ಯವಸ್ಥೆ, ವ್ಯಾಟಿಕನ್‌ದಿಂದ ಕುಗ್ರಾಮದವರೆಗೆ ಅವರ ನೆಟ್‌ವರ್ಕ್ ಹಬ್ಬಿದೆ. ಆ ರೀತಿ ಒಬ್ಬ ಗುರು ಇಲ್ಲದಿದ್ದರೂ, ಮುಸಲೀಮರಲ್ಲಿ ಅಲ್ಲಹ, ಕುರಾನ್, ಮೆಕ್ಕಾ ಶಕ್ತಿ ಕೇಂದ್ರಗಳು. ಅದೇ ರೀತಿ ಸಿಖ್ಖರಲ್ಲಿ ಗುರುದ್ವಾರ, ಗುರುಗ್ರಂಥ. ಒಂದು ವೇಳೆ ಧರ್ಮಪಿತ ಬಸವಣ್ಣನವರ ಆಶಯದಂತೆ ಅಲ್ಲಿನ ಶೂನ್ಯಪೀಠ ಪರಂಪರೆಯು ಅಖಂಡವಾಗಿ ಮುಂದುವರಿದು ಅದರ ವಲಯದಲ್ಲೇ ವಿರಕ್ತ ಮಠಗಳು ಸಾಗಿಬಂದಿದ್ದರೆ ಲಿಂಗಾಯತ ಸಮಾಜ ಇಷ್ಟು ಕೆಟ್ಟು ಹೋಗುತ್ತಿರಲಿಲ್ಲ. ಗುರುವೂ ಇಲ್ಲ ಕೇಂದ್ರ ಶಕ್ತಿಯೂ ಇಲ್ಲ. ಇದರಿಂದಾಗಿ ಎಲ್ಲ ಮಠಗಳು ಪರಸ್ಪರ ಸಂಬಂಧವಿಲ್ಲದೇ ಸ್ವತಂತ್ರವಾಗಿ, ಮಠಾಧಿಕಾರಿಯನ್ನು ಮುನ್ನಡೆಸುವ ದಿಕ್ಸೂಚಿಯೇ ಇಲ್ಲವಾಯಿತು. ಕೆಲವು ವಿರಕ್ತಮಠಗಳು ಪಂಚಾಚಾರ್ಯ ವಾದಕ್ಕೆ ಜೋತು ಬಿದ್ದಿದ್ದರೆ, ಮತ್ತೆ ಕೆಲವು ಬಸವ ತತ್ತ್ವಕ್ಕೆ ತಿಲಾಂಜಲಿ ಕೊಟ್ಟು ವೇದಾಂತ ಬೋಧೆ ಮಾಡುತ್ತಿವೆ. ವಿರಕ್ತಮಠಗಳು ಅವಧೂತ ಮಾರ್ಗ ಹಿಡಿದವು ಮತ್ತೆ ಕೆಲವು, ಲಿಂಗರಹಿತ ಪಂಥಗಳು ಕೆಲವು; ಹೀಗೆಲ್ಲ ವಿರಕ್ತ ಮಠಗಳು ಸೂತ್ರ ತಪ್ಪಿದ ಗೊಂಬೆಗಳಂತಾಗಿವೆ. ಧರ್ಮಗುರು ಬಸವಣ್ಣನವರನ್ನು ಮರೆತ ಮೂಢ ಜನರು ಮಠಾಧಿಪತಿಗಳ ಹಿಂಬಾಲಕರಾಗುವುದು ಒಂದು ಕಡೆ; ಶ್ರೀಮಂತ ಮಠಗಳ ಸಂಪತ್ತನ್ನು ದೋಚಲು ಹೆಗ್ಗಣಗಳಾಗಿರುವ ಪ್ರಭಾವಶಾಲಿ ಮುಖಂಡರು ಮಠಾಧಿಶರನ್ನು ಉತ್ಸವ ಮೂರ್ತಿಯನ್ನಾಗಿ ಮಾಡಿ ಮೆರೆಸುವುದು ಮತ್ತೊಂದು ಕಡೆ. ಇದನ್ನೆಲ್ಲ ಅಧ್ಯಯನ ಮಾಡಲು ನಮ್ಮ ಹಲವಾರು ದಶಕಗಳೇ ವ್ಯರ್ಥವಾದವು. ಆದರೂ ಲಿಂಗಾಯತ ಧರ್ಮದ ಪುನರುತ್ಥಾನ ಮಾಡಲು 1) ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪಿಸಲಾಯಿತು. (ಪ್ರೇರಣೆ ಕ್ರೈಸ್ತ ಧರ್ಮ) 2) ಶರಣ ಮೇಳ ಆರಂಭಿಸಲಾಯಿತು (ಪ್ರೇರಣೆ ಹಜ್, ವಾರಕರಿ). 3) ಬಸವ ಮಂಟಪಗಳನ್ನು ನಿರ್ಮಿಸಲು ನಿರ್ಧರಿಸಲಾಯಿತು.(ಪ್ರೇರಣೆ ಮಸೀದಿ, ಚರ್ಚ್, ಗುರುದ್ವಾರ). ಹೀಗೆ ಒಂದೊಂದು ಹೆಜ್ಜೆಯನ್ನು ಇಡುತ್ತಾ ಹೊರಟಿರುವಾಗ, ಮತ್ತು ಇವು ವ್ಯರ್ಥ ಪ್ರಯತ್ನಗಳಾಗದೇ ಯಶಸ್ವಿ ಹೆಜ್ಜೆಗಳು ಎಂದು ಎಲ್ಲರಿಗೂ ಮನವರಿಕೆಯಾಗಿರುವಾಗ ಪ್ರತಿಯೊಬ್ಬರೂ ಮನಮುಟ್ಟಿ ದುಡಿಯಬೇಕೇ ವಿನಾ ಕೆಟ್ಟ ಆಲೋಚನೆ ಹೊಂದಿರುವ ವಿಚ್ಛಿದ್ರಕಾರಿ ಮನಸ್ಸುಗಳ ಮತ್ಸರಿಗರ ತಂತ್ರಗಳಿಗೆ ಬಲಿಯಾಗಬಾರದು. ಒಂದು ವೇದಿಕೆ, ಒಂದು ಮಾಲೆಯ ಆಮಿಷಕ್ಕೆ ಅಥವಾ ಯಾರದೋ ದಾಕ್ಷಿಣ್ಯಕ್ಕೆ ಒಳಗಾಗಬಾರದು.

ಕೆಲವು ವಿಷಯಗಳು ನಮ್ಮ ನೋವಿಗೆ, ನಿರಾಶೆಗೆ ಕಾರಣವಾಗುತ್ತವೆ.

1. ಶರಣ ಮೇಳ, ಕಲ್ಯಾಣ ಪರ್ವ ಸಮಾಜಕ್ಕೆ ಆಶಾ ಕಿರಣ. ಯಾಕೆ ಯಾರಿಗೆ ಹೊಳೆದಿರಲಿಲ್ಲವೊ ಇಂಥ ಧಾರ್ಮಿಕ ಸಮಾವೇಶ ಮಾಡುವ ಬಗ್ಗೆ! ಬರೀ ಅದ್ದೂರಿ ಸಮಾರಂಭ ಮಾಡಿ ಹಣದ ಅಪವ್ಯಯ ಮಾಡಿ ತಾವಷ್ಟು ಸಂಪಾದನೆ ಮಾಡಿಕೊಳ್ಳುವ ಮುಖಂಡರಿಗೆ ಒಂದು ಧಾರ್ಮಿಕ ಸಮಾಜಕ್ಕೆ ಎಲ್ಲರೂ ಸೇರುವ ಧಾರ್ಮಿಕ ಸಮಾವೇಶದ ಅಗತ್ಯ, ಒಂದು ಧರ್ಮಕ್ಷೇತ್ರದ ಅಗತ್ಯ ಎಂದು ಏಕೆ ಯಾರೂ ಪ್ರಯತ್ನಿಸಿರಲಿಲ್ಲವೊ !

   ಶರಣ ಮೇಳ ಇಂದು 5-6 ರಾಜ್ಯಗಳ ಜನರನ್ನು ಹತ್ತಿರ ತರಬಲ್ಲ ಶಕ್ತಿ ಪಡೆದಿದೆ. ಇದು ಹೀಗೇ ವಿಸ್ತಾರವಾದರೆ ತಡವಾದರೂ ಪರಸ್ಪರ ಭೇಟಿಯಾಗಲು ಜಗತ್ತಿನಾದ್ಯಂತ ಇರುವ ಲಿಂಗಾಯತರು ಶರಣಮೇಳಕ್ಕೆ ಬರತೊಡಗುತ್ತಾರೆ. ಅಂದಾಗ ಇದನ್ನು ಬಲ ಪಡಿಸುವುದು ಎಲ್ಲರ ಕರ್ತವ್ಯವಲ್ಲವೆ?

ಪ್ರತಿಯೊಬ್ಬರೂ ಶರಣ ಮೇಳದ ದಾಸೋಹಕ್ಕೆ ಕಾಣಿಕೆ ತೆಗೆದಿಟ್ಟು, ಕೊಡಲೇಬೇಕು. ತಮ್ಮ ಪರಿಚಿತರು, ಬಂಧು ಬಳಗ, ಮಿತ್ರರಿಂದ ಸಂಗ್ರಹಿಸಿ ತಂದು ಕೊಡಬೇಕು. ಅಕಸ್ಮಾತ್ ಬರಲು ಆಗದವರು ದಾಸೋಹಕ್ಕೆ ಕಾಣಿಕೆ ಸಲ್ಲಿಸಲು ಈ ಸಂಗ್ರಹ ಕಾರ್ಯದಿಂದ ಸಾಧ್ಯವಾಗುವುದು. ಧರ್ಮಕ್ಷೇತ್ರದ ಪ್ರಚಾರವಾಗುವುದಷ್ಟೇ ಅಲ್ಲ ಶ್ರದ್ಧೆಯೂ ಬೆಳೆಯುತ್ತಾ ಹೋಗುವುದು. ಸಂಗ್ರಹಿಸಿದ್ದನ್ನು ಪ್ರಾಮಾಣಿಕವಾಗಿ ಮುಟ್ಟಿಸಬೇಕು.

2. ಕೆಲವರು ದುರುಪಯೋಗ ಮಾಡಿಕೊಂಡ ಸುದ್ದಿ ಬಂದಿದೆ. ಒಂದು ವೇಳೆ ಬಡವರಿದ್ದು ತಾವೂ ಸಂಗ್ರಹಿಸಿಕೊಡಬೇಕೆಂಬ ಹಂಬಲವಿದ್ದರೆ, ಸಂಗ್ರಹ ಮಾಡಲು, ಹೋಗಲು ಆಗುವ ಪ್ರಯಾಣ ವೆಚ್ಚ ಮುರಿದುಕೊಂಡು ಲೆಕ್ಕದೊಡನೆ ಹಣವನ್ನು ಒಪ್ಪಿಸಬೇಕು. ಮೋಸ-ವಂಚನೆ ಮಾಡಬಾರದು. ಅರಮನೆ ದುಡ್ಡು (ಸಾರ್ವಜನಿಕ ಹಣ) ಗುರುಮನೆ ದುಡ್ಡು (ಮಠದ ಸಂಪತ್ತು) ಕೆಂಡದಂತೆ ಸುಡುತ್ತೆ ಎಂಬ ಗಾದೆ ಇದೆ.

ಧರ್ಮಪಿತರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ, " ಹಗಲೆಲ್ಲ ಒಟ್ಟಿದ ಬಣವೆಯನ್ನು ಒಂದು ಕಿಡಿಯು ಹೇಗೆ ಸುಡಬಲ್ಲದೋ ಹಾಗೆ ಅಧರ್ಮದಿಂದ ಗಳಿಸಿದ ತಂದೆಯ ಗಳಿಕೆಯನ್ನು ಮಕ್ಕಳು ಕೆಲವೇ ಸಮಯದಲ್ಲಿ ಕಳೆದು ಬಿಡುತ್ತಾರೆ." ಎಂದು. ಶರಣ ಮೇಳದ ಹೆಸರಿನಲ್ಲಿ ಸಂಗ್ರಹಿಸಿದ ಹಣವನ್ನು ಪೂರಾ ಒಪ್ಪಿಸದೆ ತಮ್ಮ ತಮ್ಮಲ್ಲೇ ಕೆಲವರು ಹಂಚಿಕೊಳ್ಳುತ್ತಾರೆ ಎಂಬುದು ತಿಳಿದು ಬಂದಿದೆ. ನಮ್ಮನ್ನು ಅವರು ವಂಚಿಸಬಹುದು, ದೇವರನ್ನು ವಂಚಿಸಲಾರರಷ್ಟೆ, ಅದರ ಪ್ರಾಯಶ್ಚಿತ್ತವನ್ನು ಅವರು ಅನುಭವಿಸುವರು.

3. ಮತ್ತೆ ಕೆಲವರು ಸಂಗ್ರಹಿಸಿದ ಹಣವನ್ನು ತಮ್ಮ ಸ್ವಂತಕ್ಕೇನು ಇಟ್ಟುಕೊಳ್ಳುವುದಿಲ್ಲ; ಆದರೆ ಸ್ಥಳೀಯ ರಾಷ್ಟ್ರೀಯ ಬಸವ ದಳಗಳಿಗೆಂದು ಇಟ್ಟು ಕೊಳ್ಳುವ ಪದ್ಧತಿ ರೂಢಿಸಿಕೊಳ್ಳುತ್ತಿದ್ದಾರೆ. ಇದು ತಪ್ಪಲ್ಲವೇ ?

ಶರಣ ಮೇಳದ ಹೆಸರಿನಲ್ಲಿ ಸಂಗ್ರಹಿಸಿದ ಮೇಲೆ ಅದಕ್ಕೆ ಮುಟ್ಟಿಸುವುದು ಅವರ ಆದ್ಯ ಕರ್ತವ್ಯ. ಎರಡನೆಯದಾಗಿ, ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡುವ ಸಂಘ-ಸಂಸ್ಥೆ ರಾಷ್ಟ್ರೀಯ ಬಸವ ದಳಗಳಿಗೆ ಜನರು ಸ್ವಯಂ ಸಂತೋಷದಿಂದ ಕೊಡುತ್ತಾರೆ. ಬೇರೆ ಬೇರೆ ಯೋಜನೆ, ಕಾರ್ಯಕ್ರಮ ಹಮ್ಮಿಕೊಂಡು ಸಂಗ್ರಹಿಸಬೇಕೇ ವಿನಾ ಶರಣ ಮೇಳಕ್ಕೆಂದು ಸಂಗ್ರಹಿಸಿದ ಹಣವನ್ನು ಬಳಸಿ ಕೊಳ್ಳುವುದು ಯಾವ ನ್ಯಾಯ ?

4. ಒಂದು ವೇಳೆ ಎಲ್ಲರೂ ಹೀಗೇ ಮಾಡಿದರೆ ಆಗ ನಾವು ಬೃಹತ್ತಾದ ಖರ್ಚು ವೆಚ್ಚದ ಶರಣ ಮೇಳವನ್ನು ನಡೆಸಲಾಗುವುದಿಲ್ಲ, ಆಗ ಆಗುವುದೇನು? ಹಿಂದಿನ ಇತಿಹಾಸದ ಪುನರಾವರ್ತನೆ, ಮನುಷ್ಯ ದೊಡ್ಡವನಾದ ಮೇಲೆ ತಾನೇ ನಡೆಯುತ್ತಾನೆ. ಮಗುವಿದ್ದಾಗ ಕೈ ಹಿಡಿದು ನಡೆಸಬೇಕಾಗುತ್ತದಷ್ಟೆ ಅದೇ ರೀತಿ ಕೆಲವಾರು ದಶಕಗಳು ಕಳೆದ ಮೇಲೆ ಜನರು ಶ್ರದ್ಧೆಯಿಂದ ತಾವೇ ಬರುತ್ತಾರೆ, ಕಾಣಿಕೆ ಸಲ್ಲಿಸುತ್ತಾರೆ, ಶರಣ ಮೇಳ ನಡೆಯುತ್ತದೆ. ಪ್ರತಿಯೊಬ್ಬ ಲಿಂಗಾಯತನು, ಬಸವ ಭಕ್ತನು ಶರಣ ಮೇಳಕ್ಕೆ ಬರುವುದು ತನ್ನ ಆದ್ಯ ಕರ್ತವ್ಯ ಎಂಬ ಶ್ರದ್ಧೆ ಬೆಳೆಸಿಕೊಳ್ಳುವವರೆಗೆ ನಾವು ಶ್ರಮ ಪಡಬೇಕು. ಎಲ್ಲರೂ ದುಡಿಯಬೇಕು, ದೇಣಿಗೆ ಸಂಗ್ರಹಿಸಬೇಕು. ಕೇವಲ ಶರಣ ಮೇಳ ನಡೆಸಿ ನಾವು ಕೈ ಬಿಡುವುದಿಲ್ಲ, ವೈವಿಧ್ಯಮಯ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಿ, ಖರ್ಚು ಕಳೆದು ಉಳಿದರೆ ಆ ಯೋಜನೆಗಳಿಗೆ ಶರಣರು ಸಂಗ್ರಹಿಸಿದ ಹಣ ವಿನಿಯೋಗವಾಗುತ್ತದೆ.

5. ಬಸವ ಮಂಟಪಗಳು ಅನೇಕ ಕಡೆ ನಿರ್ಮಾಣವಾಗುತ್ತಿರುವುದು ಅತ್ಯಂತ ಆನಂದದ ಸಂಗತಿ. ಆದರೆ ಸ್ಥಳೀಯ ಬಸವ ಮಂಟಪಗಳ ಕಡೆಗೆ ಮಾತ್ರ ಗಮನಕೊಟ್ಟು ಬಸವ ಧರ್ಮಪೀಠ, ಶರಣ ಮೇಳದಂತಹ ಹೃದಯ, ಮೆದುಳನ್ನು ದುರ್ಬಲಗೊಳಿಸಿದರೆ ನಂತರ ಆ ಬಸವ ಮಂಟಪಗಳು ಸೂತ್ರ ತಪ್ಪಿದ ಗೊಂಬೆಗಳಂತೆ ನಿರ್ಜೀವ ಕಟ್ಟಡಗಳಾಗಿ ಉಳಿಯುತ್ತವೆ. ಆದ್ದರಿಂದ ಈ ಬಗ್ಗೆ ರಾಷ್ಟ್ರೀಯ ಬಸವ ದಳದವರು ಮಾತ್ರವಲ್ಲ ಪ್ರತಿಯೊಬ್ಬ ಲಿಂಗಾಯತರೂ, ಬಸವಾನುಯಾಯಿಗಳು ಜಾಗ್ರತೆ ವಹಿಸಿ ಕಾರ್ಯಮಾಡಬೇಕು. ಶರಣ ಮೇಳ / ಕಲ್ಯಾಣ ಪರ್ವಗಳಿಗೆ ಹೆಚ್ಚು ಜನರನ್ನು ಪ್ರೇರೇಪಿಸಿ ಕರೆತಂದು ಶರಣ ಸಮಾಜದ ಸೂತ್ರದೊಳಗೆ ಪೋಣಿಸಲ್ಪಡುವಂತೆ ಮಾಡಬೇಕು.

6. ಬಸವ ಧರ್ಮ ಪೀಠ ಮತ್ತು ಇದರ ಅಂಗಸಂಸ್ಥೆಗಳಿಗೆ ಜನರು ಕೊಡುವ ದೇಣಿಗೆಯೇ ಆದಾಯ ಮೂಲವಲ್ಲದೆ ಬೇರೇನು ಆದಾಯವಿಲ್ಲ. ಇಲ್ಲಿ ದುಡ್ಡು ಉದುರಿಸುವ ಗಿಡಗಳಾದ ವೃತ್ತಿಪರ ಶಿಕ್ಷಣ ಸಂಸ್ಥೆಗಳಾಗಲಿ, ಬಾಡಿಗೆ - ಬಡ್ಡಿ ಬರುವ ವ್ಯವಹಾರವಾಗಲಿ ಇಲ್ಲ. ಕೆಲವರು ನಮಗೆ ಸಾಹಿತ್ಯ ಬೇಕು; ಶರಣರ ಫೋಟೋ ಬೇಕು ಮಾಡಿಸಿಕೊಡಿ ಎನ್ನುತ್ತಾರೆ. ನಮ್ಮವರು ತಾನೆ, ಹಣ ನಂತರ ಕೊಡುತ್ತಾರೆ ಎಂದು ಮಾಡಿಸಿ ಕಳಿಸಿದರೆ ಅದರ ಹಣವನ್ನೇ ಸಂದಾಯ ಮಾಡುವುದಿಲ್ಲ, ವೈಯಕ್ತಿಕಕ್ಕೆಂದು ಸಾಮಾನು ತರಿಸಿಕೊಳ್ಳುತ್ತಾರೆ. ಅದರ ಹಣ ಕಳಿಸುವುದಿಲ್ಲ, ಇದನ್ನು ಬಡವರು ಮಾಡುವುದಿಲ್ಲ.

ಇವೆಲ್ಲ ರಾಷ್ಟ್ರೀಯ ಬಸವ ದಳದ ಶರಣರಿಗೆ ಸಲ್ಲದ ನಡೆ - ನುಡಿ. ಧರ್ಮ ಸಂಸ್ಥೆಗಳಿಗೆ ಇನ್ನಷ್ಟು ಮತ್ತಷ್ಟು ಉಳಿಸಿಕೊಡಬೇಕೇ ವಿನಾ ಧರ್ಮ ಸಂಸ್ಥೆಗಳ ಹಣ ತಿನ್ನಬಾರದು.

ಪ್ರತಿಯೊಬ್ಬರ ಕರ್ತವ್ಯ :

ಸಂದರ್ಶಿಸಲೇಬೇಕಾದ ಎಂತೆಂತಹ ಕ್ಷೇತ್ರಗಳನ್ನು, ಕಟ್ಟಡಗಳನ್ನು ಅನ್ಯ ಧರ್ಮೀಯರು ನಿರ್ಮಾಣ ಮಾಡಿದ್ದಾರೆ. 850 ವರ್ಷಗಳ ಇತಿಹಾಸದಲ್ಲಿ (1988ರ ನಂತರದ ಕೂಡಲ ಸಂಗಮ ಬಿಟ್ಟರೆ) ಒಂದಾದರೂ ಅಂತಹ ದರ್ಶನೀಯ ಸ್ಥಳ, ಸ್ಮಾರಕಗಳು ಆಗದಿರುವುದು ನಿಜಕ್ಕೂ ಶೋಚನೀಯ. ಆದ್ದರಿಂದ ಪ್ರತಿಯೊಬ್ಬರೂ ಸಂಕಲ್ಪಿಸಿರಿ.

1. ಪ್ರತಿ ಹಳ್ಳಿಯಲ್ಲೂ ರಾಷ್ಟ್ರೀಯ ಬಸವದಳ, ವಾರದ ಪ್ರಾರ್ಥನಾ ಕೂಟ, ಶರಣ ಸಂಗಮ ನಡೆಯಬೇಕು. ನಿಮ್ಮ ಸಮಯವನ್ನು ಹಾಳು ಹರಟೆಗೆ ಕಳೆಯದೆ, ಧರ್ಮ ಪ್ರಚಾರಕ್ಕೆ ವಿನಿಯೋಗಿಸಿರಿ.

3. ಅತ್ಯಂತ ಸರಳವಾದ ಜೀವನ ನಡೆಸಿ, ಖರ್ಚನ್ನು ಕಡಿಮೆ ಮಾಡಿ, ಅನವಶ್ಯಕವಾಗಿ ಬಟ್ಟೆಗಳನ್ನು, ಆಭರಣಗಳನ್ನು ಖರೀದಿಸದೆ ಹಣ ಉಳಿತಾಯ ಮಾಡಿ ಕೂಡಲ ಸಂಗಮ, ಬಸವ ಕಲ್ಯಾಣದಲ್ಲಿ ಬಸವ ಧರ್ಮ ಪೀಠವು ಕೈಗೊಂಡಿರುವ ಬೃಹತ್ ಯೋಜನೆಗಳಿಗೆ ನಿಮ್ಮ ಶಕ್ತ್ಯಾನುಸಾರ ಕಾಣಿಕೆ ನೀಡಿರಿ.

- ಜಗದ್ಗುರು ಮಾತೆ ಮಹಾದೇವಿ

ಬಸವಧರ್ಮ ಪೀಠಾಧ್ಯಕ್ಷೆ, ಕೂಡಲಸಂಗಮ.

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು, ಇತ್ತೀಚೆಗೆ ಬಂದಿರಬಹುದು. ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ್ಯ ಇವು ನನ್ನ ತತ್ತ್ವದ ಮುಖ್ಯ-ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನೂ ಕಾಣಬಹುದು. ಆದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಜನತೆಯನ್ನು ಅನುಗ್ರಹಿಸಿ, ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು

ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ, ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವನು ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು.

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?

ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ನೆನಹು : ಪ್ರತಿದಿನ ಸಂಜೆ 7 ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ - ಶರಣ ಸಂಗಮ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದು ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು

ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲಸಂಗಮಕ್ಕೆ ಧಾವಿಸಿ ಬಂದು ಜನವರಿ 11 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಕಲ್ಯಾಣ ಪರ್ವ : 36 ವರ್ಷಗಳ ಕಾಲ ನನ್ನ ಕಾರ್ಯಕ್ಷೇತ್ರವಾಗಿದ್ದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಪ್ರದೇಶಗಳಿಂದೆಲ್ಲ ಶರಣರನ್ನು ಆಕರ್ಷಿಸಿದ ಬಸವ ಕಲ್ಯಾಣದಲ್ಲಿ ಪ್ರತಿವರ್ಷದ ಮೇ 1,2 ಮತ್ತು 3ರಂದು ನಡೆಯುವ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗಿ ಶರಣ ವಂದನೆಯನ್ನು ಮಾಡಿ ಧನ್ಯರಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ-ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ-ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು; ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ ಬಸವಣ್ಣ
(ಗ್ರಹಿಸಿದವರು- ಬಸವಾತ್ಮಜೆ ಮಾತಾಜಿ)

ಕಾಡುತ್ತಿರುವ ಚಿಂತೆ

- ಮಾತಾಜಿ

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಆಗಸ ನೀರೊಳಗಿದ್ದು ಬಾಯಾರಿ ಸತ್ತಂತೆ
ತನ್ನೊಳಗಿದ್ದ ಮಹಾ ಘನವ ಅರಿಯದೇ ಹೋದರು ನೋಡಾ.
ನಿನ್ನ ಒಲುಮೆ ನಟ್ಟು ಹಸಿವು ತೃಷೆ ನಿದ್ರೆಗಳ ಮರೆದೆನು ಕಾಣಾ ಚೆನ್ನಮಲ್ಲಿಕಾರ್ಜುನ.

- ಅಕ್ಕಮಹಾದೇವಿ

ಲೌಕಿಕರಾದ ಜನ ಇಡೀ ಹಗಲನ್ನು ಹೊಟ್ಟೆ ಪಾಡಿಗೆ ದುಡಿಯಲಿಕ್ಕೆ ಕಳೆಯುತ್ತಾರೆ. ಇನ್ನಷ್ಟು ಮತ್ತಷ್ಟು ಸಂಪಾದಿಸಲು ಹೆಣಗುತ್ತಾರೆ. ರಾತ್ರಿಯಾಗುತ್ತಲೆ ವ್ಯಸನಗಳ ದಾಸರಾಗುತ್ತಾರೆ. ಹಣವು ಮಿತಿ ಮೀರಿ ಗಳಿಕೆಯಾಗುತ್ತಲೇ ಸಾತ್ವಿಕರು, ಸಜ್ಜನರು, ತಮ್ಮ ಗಳಿಕೆಯನ್ನು ಮತ್ತು ಸಮಯವನ್ನು ದಾನ ಧರ್ಮ ಸಮಾಜ ಸೇವೆಗಳಿಗೆ ಮೀಸಲಿಟ್ಟರೆ ಸ್ವಾರ್ಥಿಗಳು, ಭೋಗ ಲಾಲಸರು, ಹಣವನ್ನು ಸಮಯವನ್ನು ದುರ್ವ್ಯಸನಗಳಲ್ಲಿ ಕಳೆಯುತ್ತಾರೆ. ಪರಮಾತ್ಮನ ವಿರಹದಿಂದಾಗಿ ಅಕ್ಕ ಮಹಾದೇವಿಗೆ ಹಸಿವು ತೃಷೆ ನಿದ್ರೆಗಳು ಗಮನಕ್ಕೆ ಬಾರದೆ ಹಗಲು-ಇರುಳು ಅವ್ಯಾಹತವಾಗಿ ಲಿಂಗದೇವನ ಚಿಂತನೆ, ನೆನಹು, ಧ್ಯಾನದಲ್ಲೇ ಕಾಲವನ್ನು ಕಳೆಯುತ್ತಿದ್ದಾಳೆ. ನಿಜ ಸಾಧಕರಿಗೆ ಅಂಥದೊಂದು ಮಾನಸಿಕ ಸ್ಥಿತಿ ಬರುತ್ತದೆ. ಗುರು ಬಸವಣ್ಣನವರು, ಅಕ್ಕಮಹಾದೇವಿ, ಸಿದ್ಧರಾಮೇಶ್ವರ, ಉರಿಲಿಂಗದೇವ, ಷಣ್ಮುಖ ಶಿವಯೋಗಿಗಳು ಅಂಥ ಸ್ಥಿತಿಯಲ್ಲಿ ನಿಂತು ಬರೆದ ವಚನಗಳು ದೇವ ವಿರಹದ ಪರಾಕಾಷ್ಠೆ ತಲ್ಪಿವೆ. ನಂತರ ಕೆಲವು ಅನುಭವಗಳು ಆಗುತ್ತಾ ಹೋಗಿ ಮೊದಲಿಗೆ ಆತ್ಮಮುಖಿಯಾಗಿದ್ದವರು ನಂತರ ಸಮಾಜ ಮುಖಿಗಳಾಗಿ ಸಮಾಜ (ಜಂಗಮ) ಕುರಿತು ಚಿಂತನೆಯನ್ನು ಮಾಡತೊಡಗುವರು. ಅಕ್ಕಮಹಾದೇವಿಯಂತಹ ಅಂತರ್ಮುಖ ಸ್ವಭಾವದವರಿಗೆ ಸಮಾಜ ಸುಧಾರಣೆಯ ಚಿಂತೆ ಕಡೆಯವರೆಗೂ ಬರುವುದಿಲ್ಲವಾದರೂ ಗುರು ಬಸವಣ್ಣ ಲಿಂಗಾಂಗಯೋಗಿ ಸಿದ್ಧರಾಮೇಶ್ವರ ಮುಂತಾದವರು ಸಮಾಜ ಸೇವೆಗೆ ಮಹತ್ವ ನೀಡಿದರು. ಮದುವೆಯಾದ ಹೊಸದರಲ್ಲಿ ಅಥವಾ ಮದುವೆ ಗೊತ್ತಾದ ನಂತರದ ದಿನಗಳಲ್ಲಿ ಹುಡುಗಿ ಬಹಳ ತಪಿಸುವಳು. ಮುಂದೆ ಮದುವೆಯಾಗಿ ಮಕ್ಕಳಾಗಿ ಅವನ್ನು ಶಾಲೆಗೆ ಕಳಿಸುವಾಗ "ಮಗೂನ ಶಾಲೆಗೆ ಕಳಿಸಬೇಕು. ನೀವೇ ತಟ್ಟೆಯಲ್ಲಿಟ್ಟುಕೊಂಡು ತಿಂಡಿ ತಿಂದು ಹೋಗಬಾರದೆ ?" ಎಂದು ಗದರಿ ಹೇಳುವಳು. ಅದನ್ನು ಗಂಡನೂ ತಪ್ಪಾಗಿ ಭಾವಿಸನು. ಏಕೆಂದರೆ ಮಗುವಿನ ಬಗ್ಗೆ ಮಮತೆ ಇಬ್ಬರಿಗೂ ಇರುತ್ತದೆ ಮತ್ತು ಹೊಣೆಗಾರಿಕೆ ಸಹ ಇಬ್ಬರದೂ ಆಗಿರುತ್ತದೆ.

ಹಾಗೆ ದಾರ್ಶನಿಕರು ಮೊದ ಮೊದಲು ಸಮಾಜ ಬೇಡ, ಏನೂ ಬೇಡ ದೇವರು ಬೇಕು, ದೇವರೇ ಬೇಕು ಎಂದು ಉತ್ಕಟವಾಗಿ ಹಂಬಲಿಸುತ್ತ ಅನೇಕ ಅನುಭವ ಮತ್ತು ದೇವಾದೇಶಗಳ ನಂತರ ಸಮಾಜದ ಹಿತಾಸಕ್ತಿಗೆ ಗಮನ ಕೊಡುತ್ತಾರೆ. ಇದನ್ನು ಬುದ್ಧ, ಬಸವಣ್ಣ ಗುರುನಾನಕ ಮುಂತಾದ ಎಲ್ಲ ಮಹಾನುಭಾವಿಗಳ ಜೀವನದಲ್ಲಿ ಕಾಣಬಹುದು.

ಅದೇ ರೀತಿ ಅಧ್ಯಾತ್ಮಿಕ ಆಕಾಂಕ್ಷೆಯಿಂದ ಅಂತರ್ಮುಖ ಪ್ರವೃತ್ತಿಯವಳಾದ ನಾನು ಈ ಪಾರಮಾರ್ಥಿಕ ಪಥಕ್ಕೆ ಬಂದೆ. ಬಂದಾಗ ದೇವರು, ಆಧ್ಯಾತ್ಮಿಕ ಸಾಧನೆಯ ಹೊರತು ಬೇರೆ ಏನೇನೂ

ಬೇಕಾಗಿರಲಿಲ್ಲ. ಪೂಜ್ಯ ಅಪ್ಪಾಜಿಯವರು ವಚನ ಸಾಹಿತ್ಯದ ತರಬೇತಿ ನೀಡುತ್ತ ಸಮಾಜ ಜಾಗೃತಿಗಾಗಿ ದುಡಿಯುವುದು ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಿದರು. "ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮ ಸೇವೆ" "ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೆ, ಜಂಗಮದೊಳಗೆ ಲಿಂಗಯ್ಯನಿದ್ದಾನೆ." ಎಂಬುದನ್ನು ತಿಳಿಸಿದರು. ಹೀಗಾಗಿ ಸಮಾಜ ಕುರಿತು ಚಿಂತಿಸುವುದು ಅಗತ್ಯವೆನಿಸುತ್ತದೆ. ಇಲ್ಲಿ ಸಮಾಜ ಎಂದರೆ ಮಾನವ ಸಮಾಜ, ಭಾರತೀಯ, ಹಿಂದು, ಲಿಂಗಾಯತ ಹೀಗೆಲ್ಲ ಇಟ್ಟುಕೊಂಡು ಚಿಂತಿಸಬಹುದು. ಹಿಂದು ಸಮಾಜದ ಬಗ್ಗೆ ಕಳಕಳಿ ಹೊಂದಿ ಚಿಂತನೆ ಮಾಡುವುದೆಂದರೆ ದಾರಿಯೇ ಸಿಗದಂತಾಗುತ್ತದೆ. ಏಕೆಂದರೆ ಅಷ್ಟೊಂದು ಜಾತಿಗಳು ಮೂಢನಂಬಿಕೆಗಳು ಶೋಷಕರು - ಶೋಷಣೆ, ಅಜ್ಞಾನ ತುಂಬಿ ತುಳುಕುತ್ತವೆ. ಬುದ್ಧ, ಬಸವಣ್ಣ, ಗುರುನಾನಕ್ ಮುಂತಾದ ಧರ್ಮ ಸಂಸ್ಥಾಪಕರು, ರಾಜಾರಾಮ್ ಮೋಹನ್‌ರಾಯ್, ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ, ಅರವಿಂದ, ನಾರಾಯಣ ಗುರು, ಮಹಾತ್ಮ ಫುಲೆ, ಡಾ|| ಅಂಬೇಡ್ಕರ್ ಮುಂತಾದ ಸಮಾಜ ಸುಧಾರಕರು ಹರ ಸಾಹಸ ಮಾಡಿದರೂ ಬಹುಪಾಲು ಹಿಂದುಗಳು ಮಹಾಪುರುಷರ ಕಳಕಳಿ ಅರ್ಥಮಾಡಿಕೊಳ್ಳದೆ ತಾವು ಅದೇ ಅಜ್ಞಾನದಲ್ಲಿ ಉಳಿದರೆ ವಿನಾ ಸುಧಾರಣೆಗೊಳ್ಳಲಿಲ್ಲ.

ದಿನಾಂಕ 13-11-2005 ರಂದು ದೆಹಲಿಯಲ್ಲಿ ಶರಣ ಬಸವರಾಜ ಬಿರಾದಾರ ಮತ್ತು ಶರಣೆ ಸುರೇಖಾ ಅವರ ಮನೆಯಲ್ಲಿ ಬಸವ ಜ್ಯೋತಿ ಇತ್ತು. ಅವರು ಕನ್ನಡೇತರ ಹಿಂದಿ ಮಿತ್ರರನ್ನು ಆಹ್ವಾನಿಸಿದ್ದರು. ಬಂದವರಲ್ಲಿ ಒಬ್ಬರು ಪ್ರಶ್ನಿಸಿದರು "ಗುರುವಿನ ಕೃಪೆ, ಮಾರ್ಗದರ್ಶನ ಬಹಳ ಮುಖ್ಯ. ಆದರೆ ಗುರು ಎಂದು ಯಾರನ್ನು ಹೇಗೆ ನಂಬುವುದು ? ಮೋಸಗಾರರೇ ಇರುತ್ತಾರೆ."

ಇದು ಹಿಂದುಗಳ ದೊಡ್ಡ ಸಮಸ್ಯೆ. ಗುರು ಎಂದು ಪುರೋಹಿತ, ಪೂಜಾರಿಗಳನ್ನು ಸಾಮಾನ್ಯ ಜನ ನಂಬುತ್ತಾರೆ. ಅವರು ಜನರಿಗೆ ಜ್ಞಾನವನ್ನೇ ಕೊಡದೆ ಯಾವ ರೀತಿ ಶೋಷಿಸಿ ಹಣ ಸೆಳೆದುಕೊಳ್ಳಬೇಕು ಆ ರೀತಿ ಸೆಳೆದುಕೊಳ್ಳುತ್ತಾರೆ. ಇನ್ನು ಕೆಲವು ಬಾಬಾಗಳು, ಸಾಧುಗಳು ಅಲ್ಲಿ ವಿಪುಲವಾಗಿ ಸಿಗುತ್ತಾರೆ. ಗಾಂಜಾ ಸೇದುವುದು, ಮದ್ಯಪಾನ ಮಾಡುವುದು ಮುಂತಾದ ಅಸಹ್ಯ ಆಚರಣೆ ಮಾಡುತ್ತಾರೆ. ಆದರೆ ಇಂಥವರನ್ನು ವೈಭವೀಕರಿಸಿ ಅವರ ಬಗ್ಗೆ ಪವಾಡಗಳ ಕಥೆ ಕಟ್ಟಿ ಕೆಲವು ವ್ಯಾಪಾರಸ್ಥರು ಮತ್ತು ರಾಜಕೀಯ ಪುಢಾರಿಗಳು ಹೇರಳವಾಗಿ ಸಂಪಾದಿಸಿಕೊಳ್ಳುತ್ತಾರೆ.ಮತ್ತೆ ಆಗಾಗ ದಿಢೀರ್ ಅಂತ ಧೂಮಕೇತುಗಳಂತೆ ಕೆಲವರು ಅವತಾರ ಪುರುಷರು ಹುಟ್ಟುತ್ತಾರೆ. ಕಲ್ಕಿ ಭಗವಾನ್, ಅಮೃತಾನಂದಮಯಿ ಮುಂತಾದವರು. ಒಬ್ಬರು ಹೇಳುತ್ತಿದ್ದರು "ಆಧುನಿಕ ಭಗವಾನ್ ಒಬ್ಬರು ಇದ್ದಕ್ಕಿದ್ದಂತೆಯೇ ಪ್ರಭಾವಶಾಲಿಗಳಾಗಿ ರಾಜಕೀಯ ಪುಢಾರಿಗಳ ಕೃಪಾ ಕಟಾಕ್ಷದಿಂದ ಬೆಳೆದರು. ಅವರ ಕುಮ್ಮಕ್ಕಿನಿಂದ ದಿಲ್ಲಿಯಲ್ಲಿ ಆರ್ಮಿ (ಸೈನ್ಯ)ಗೆ ಸೇರಿದ ಭೂ ಪ್ರದೇಶವನ್ನು ಆಕ್ರಮಿಸಿಕೊಂಡು ದೊಡ್ಡ ಆಶ್ರಮ ಕಟ್ಟಿದ್ದಾರೆ. ಸರ್ಕಾರವು ಬದಲಾಗಿದೆ, ಈಗ ಸೈನ್ಯಾಧಿಕಾರಿಗಳು ಕೇಸ್ ಮಾಡಿದ್ದಾರೆ. ಅವರು ಗೃಹಸ್ಥರು, ತಮ್ಮ ಹೆಂಡತಿಯನ್ನು ಜೊತೆಗೆ ಕೂಡಿಸಿಕೊಳ್ಳುತ್ತಾರೆ. ಆಕೆಯೋ ಬೆಲೆ ಬಾಳುವ ಬಟ್ಟೆಯುಟ್ಟು, ಆಭರಣ ಹೇರಿಕೊಂಡು ಕುಳಿತರೆ ಜನರು ದುಡ್ಡನ್ನು ದಂಪತಿಗಳ ಪಾದಕ್ಕೆ ಸುರಿಯುತ್ತಾರಂತೆ. ಕೋಟಿಗಟ್ಟಲೆ ಆಸ್ತಿ ಮಾಡಿ ಆ ಟ್ರಸ್ಟಿಗೆ ಮಗನನ್ನೆ ಉತ್ತರಾಧಿಕಾರಿಯನ್ನಾಗಿ ಮಾಡಿದ್ದಾರಂತೆ. ಕಲ್ಕಿ ಭಗವಾನ್‌ದೂ ಇದೇ ಕಥೆ. ಬಹಳ ಮಜ ಎಂದರೆ ಗುರು ಎಂದರೆ ಯಾರು ? ಅವನ ಕರ್ತವ್ಯವೇನು ? ಎಂಬ ಬಗ್ಗೆ ಮೂರ್ಖ ಜನರು ಸ್ವಲ್ಪವೂ

ಆಲೋಚಿಸುವುದಿಲ್ಲ, ದೂರದಿಂದ ದರ್ಶನಕ್ಕೆ 10,000 ರೂ, ಪಾದ ಮುಟ್ಟಲು ಅವಕಾಶ ಬೇಕಾದರೆ 25,000 ರೂ. ಅಂಥವರ ಬಳಿಗೆ ಕರೆದುಕೊಂಡು ಹೋಗಲು ಏಜೆಂಟರು ಬೇರೆ (ರಾಷ್ಟ್ರೀಯ ಬಸವದಳದಲ್ಲಿ ಸೇರಿಕೊಂಡ ಕೆಲವರು ಅಂಥ ಏಜೆಂಟರು ಆಗಿದ್ದಾರೆ ಎಂದು ತಿಳಿದು ನಮಗೆ ತುಂಬಾ ಆಘಾತವಾಗಿದೆ.) ಕೆಲವರಿಗೆ ಅದೆಷ್ಟು ಜನ ಗುರುಗಳೊ ದೇವರಿಗೇ ಗೊತ್ತು . ಒಬ್ಬರಾದ ಮೇಲೆ ಒಬ್ಬರ ಬೆನ್ನು ಹತ್ತಿರುತ್ತಾರೆ. ಕೆಲವರನ್ನು ಪವಾಡ ಪುರುಷರು, ಸಿದ್ಧಪುರುಷರು ಎಂದು ಪ್ರಚಾರ ಮಾಡುತ್ತಾರೆ. ಅವರ ಕೊಳಕುತನ ನೋಡುತ್ತಲೇ ಅಸಹ್ಯ ಎನಿಸುತ್ತದೆ.

ಅಮೃತಾನಂದಮಯಿ ಸದ್ಯ ಓಡುತ್ತಿರುವ ಕುದುರೆ, ಬಾಲ್ಯದಲ್ಲೆ ಆಧ್ಯಾತ್ಮ ಜೀವಿಯಾಗಿದ್ದುದು, ಅದಕ್ಕಾಗಿ ಅವರ ಮನೆಯವರು, ಸುತ್ತಲಿನವರು, ಕಿರುಕುಳ ಕೊಟ್ಟದ್ದು; ಇದೆಲ್ಲವೂ ಮಹಾತ್ಮರ ಜೀವನದಲ್ಲಿ ನಡೆಯುವಂತಹವು. ಆದರೆ ಅವರು ಎಲ್ಲರನ್ನೂ ಅಪ್ಪಿಕೊಳ್ಳುವ ಆಚರಣೆ ತುಂಬಾ ಅಸಹ್ಯಕರ. ತಾಯಿಯ ಪ್ರೀತಿಯನ್ನು ತೋರಿಸುವ ಬಗೆಯಂತೆ ಇದು. ಗುರು ಶಿಷ್ಯರನ್ನು ಅನುಗ್ರಹಿಸುವ ವಿಧಾನ ಮೂರು. 1) ಹಸ್ತಮಸ್ತಕ ಸಂಯೋಗ 2) ದೃಷ್ಟಿ 3) ಸಂಕಲ್ಪ. ಹೀಗೆ ಹಿಂದುಗಳು ಹಲವು ದೇವತೆಗಳನ್ನು ಆರಾಧಿಸುವಂತೆ ಒಬ್ಬರಾದಮೇಲೆ ಒಬ್ಬರು ಗುರುಗಳನ್ನು ಆಶ್ರಯಿಸುವರು. ಈ ಜೀವಂತ ಗುರುಗಳ ಸಹವಾಸವೇ ಬೇಡ ಎಂದು ಅನೇಕರು ಶಿರಡಿ ಸಾಯಿಬಾಬಾರಂತಹವರ ಫೋಟೋ ಇಟ್ಟು ಕೊಳ್ಳುತ್ತಾರೆ. ಪ್ರಯೋಜನವೇನು ? ಅವರಿಂದ ಒಂದು ಜ್ಞಾನದ ಸಂದೇಶವೂ ಇಲ್ಲ. ಶ್ರದ್ಧಾಕೇಂದ್ರವಾಗಿ ನಂಬಿರುವ ವ್ಯಕ್ತಿ ಜ್ಞಾನದ ಸಂದೇಶ ನೀಡಿದ ವ್ಯಕ್ತಿಯಾಗಿದ್ದರೆ ಮಾತ್ರ ಅವರ ವಾಣಿಯನ್ನು ಓದಿ, ಕೇಳಿ ವ್ಯಕ್ತಿಯು ತನ್ನ ಬದುಕನ್ನು ರೂಪಿಸಿಕೊಳ್ಳಬಲ್ಲನು. ಧರ್ಮ ಗುರು ಬಸವಣ್ಣನವರನ್ನು ಕುರಿತು ಕವಿಗಳು ಹೇಳುತ್ತಾರೆ, "ನಡೆಯ ಕಲಿಸಿದ ಬಸವ, ನುಡಿಯ ಕಲಿಸಿದ ಬಸವ ; ಉಣಲು ಕಲಿಸಿದ ಬಸವ ; ಉಡಲು ಕಲಿಸಿದ ಬಸವ' ಎಂದು. ಅಂದರೆ ಮಹಾತ್ಮರು ತಾವು ಜೀವಂತವಿದ್ದಾಗ ತಮ್ಮ ಜೀವನದಲ್ಲಿ ನಡೆ ನುಡಿಯ ಮೂಲಕ ಕಲಿಸುತ್ತಾರೆ ; ನಂತರ ಸಂದೇಶದ ಮೂಲಕ ಸದಾ ಕಲಿಸುತ್ತಾರೆ. ಹಾಗಾಗಿಯೇ ಸಂದೇಶಗಳನ್ನು ನೀಡಿದ ಬುದ್ಧ, ಬಸವಣ್ಣ, ಗುರುನಾನಕ್, ಸ್ವಾಮಿ ವಿವೇಕಾನಂದ, ಮಹಾತ್ಮ ಫುಲೆ ಮುಂತಾದವರು ನಿಜವಾಗಿಯೂ ಮಾರ್ಗದರ್ಶಕ ಗುರುಗಳಾಗುತ್ತಾರೆ.

ಹಿಂದುಗಳು ಸದಾ ಗುರುಗಳ ಹುಡುಕಾಟದಲ್ಲಿಯೇ ಇರುತ್ತಾರೆ. ಅದಕ್ಕೆ ಫುಲ್‌ಸ್ಟಾಪ್ ಇಲ್ಲವೇ ಇಲ್ಲ. "ಬೆರಣಿಯನಾಯಲು ತೆರಹಿಲ್ಲವೆನಗೆ, ಅಟ್ಟುಣ್ಣುವುದು ಯಾವಾಗ ?" ಎಂಬಂತೆ ಹುಟುಕಾಟದಲ್ಲಿಯೇ ಬದುಕು ಮುಗಿದರೆ ಇನ್ನು ಸಾಧಿಸುವುದು ಏನನ್ನು? ಈಗ ಬೌದ್ಧ, ಜೈನ, ಕ್ರೈಸ್ತ ಮುಸ್ಲಿಂ, ಸಿಖ್ಖ ಧರ್ಮಿಯರು ತಮ್ಮ ಗುರುವನ್ನು, ದಾರಿಯನ್ನು, ಸಾಧನವನ್ನು ಗುರುತಿಸಿಕೊಂಡು ಅತ್ತಿತ್ತ ಸರಿದಾಡದೆ ಗುರಿಯ ಕಡೆಗೆ ಸಾಗುತ್ತಲಿದ್ದಾರೆ. ಅವರಲ್ಲಿ ಹುಡುಕಾಟ, ಪರದಾಟ ಇಲ್ಲ. ವ್ಯವಸ್ಥಿತ ಧಾರ್ಮಿಕ ಸಮಾಜಗಳಾಗಿ ವ್ಯವಸ್ಥಿತ ಆಚರಣೆಯಲ್ಲಿ ನಿರತರಾಗಿದ್ದಾರೆ.

ಲಿಂಗಾಯತ ಸಮಾಜದ ದುರ್ದೈವ

ಧರ್ಮಪಿತ ಬಸವಣ್ಣನವರಂತಹ ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವವಿರುವ ಗುರುವುಂಟು, ಸಮಾನತೆ - ಪ್ರಗತಿಪರ ತತ್ತ್ವ ಚಿಂತನೆ ಬೋಧಿಸುವ ವಚನ ಸಾಹಿತ್ಯದ ಧಾರ್ಮಿಕ ಸಂವಿಧಾನವುಂಟು, ಇಷ್ಟಲಿಂಗದಂತಹ ದೇವರ ಕುರುಹು ಉಂಟು. ಅದ್ಭುತವಾದ ಅಧ್ಯಾತ್ಮಿಕ ಸಾಧನೆ ಮಾಡಿದ ಬಸವಣ್ಣನವರೇ ಆದಿ ಪ್ರಮಥರಾಗಿ ಸಾಗಿ ಬಂದ ಶರಣರ ಪರಂಪರೆಯುಂಟು. ಇಷ್ಟಿದ್ದೂ

ಲಿಂಗಾಯತರು ಪರಮ ಅಜ್ಞಾನಿಗಳೂ, ಅಜಾಗೃತರೂ, ಅಸಂಘಟಿತರು, ಅಧಾರ್ಮಿಕರು ಆಗಿದ್ದಾರೆ ಎಂಬುದು ನನಗೆ ತುಂಬಾ ನೋವನ್ನು ಉಂಟು ಮಾಡುತ್ತಿರುವ ಸಂಗತಿ. ದೆಹಲಿಯಲ್ಲಿ ಒಬ್ಬರ ಮನೆಯಲ್ಲಿ ಬಸವಜ್ಯೋತಿಯಿತ್ತು. ಇಲ್ಲಿರುವ ಲಿಂಗಾಯತರಿಗೆ ಅವರ ಧಾರ್ಮಿಕ ಸಾಹಿತ್ಯ ಸಿಕ್ಕರೆ ಬಹುಶಃ ಮರಳುಗಾಡಿನಲ್ಲಿ ಓಯಸಿಸ್ ಸಿಕ್ಕಂತೆ ಆಗಬಹುದು ಎಂದು ಸಾಹಿತ್ಯವನ್ನು ಜೊತೆಗೆ ಒಯ್ದಿದ್ದೆವು. ಅಲ್ಲಿಗೆ ಹೋಗಿರುವ ಎಲ್ಲರೂ ಸಾಮಾನ್ಯವಾಗಿ ಉನ್ನತ ಹುದ್ದೆಗಳಲ್ಲಿ ಇರುವವರು, ಉತ್ತಮ ಸಂಬಳ ಇರುವವರು. ಆದರೆ ಸಾಹಿತ್ಯವನ್ನಾಗಲಿ, ಧರ್ಮಗುರು ಬಸವಣ್ಣನವರ ಇತರ ಶರಣರ ಫೋಟೋಗಳನ್ನಾಗಲೀ ಕಣ್ಣೆತ್ತಿ ನೋಡಿದ್ದರೆ ಕೇಳಿರಿ. ಆ ರೀತಿ ಬಂದ ಓರ್ವ ದೊಡ್ಡ ಮನುಷ್ಯ ಕೇಳಿದ, "ಮಠಾಧೀಶರು ನಮ್ಮ ಸಮಾಜಕ್ಕೆ ಏನು ಮಾಡಿದ್ದಾರೆ ?" "ಆ ವಿಷಯ ಅಲ್ಲಿರಲಿ ; ನೀವು ಸಂಘಟಿತರಾಗಲು ಒಂದೆಡೆ ಸೇರಲು ಕಲಿಯಿರಿ" ಎಂದು ಅವರಿಗೆ ಹೇಳಿದೆನಾದರೂ ಮನಸ್ಸಿನಲ್ಲಿ ಅಂದುಕೊಂಡೆ "ನಿಮ್ಮಂತಹ ಧರ್ಮ (ಅ) ಶ್ರದ್ಧೆಯು ಇರುವುದರಿಂದಲೇ ಕೆಲವು ಮಠಾಧೀಶರು ಧರ್ಮ ಪ್ರಚಾರದ ಗೊಡವೆ ಬಿಟ್ಟು ಮೆಡಿಕಲ್, ಇಂಜನಿಯರಿಂಗ್ ಕಾಲೇಜ್ ತೆರೆದು ನಿಮ್ಮಂತಹವರಿಂದ ನಿರ್ದಾಕ್ಷಿಣ್ಯವಾಗಿ ದುಡ್ಡು ಕೀಳುವುದು. ನಿಮ್ಮ ಮನೆ ಬಾಗಿಲಿಗೆ ಬಂದು ಧರ್ಮಬೋಧೆ ಮಾಡಿದರೂ ನಿಮಗೆ ಅದರಲ್ಲಿ ಆಸಕ್ತಿ ಇಲ್ಲದ ದುರ್ದೈವಿಗಳು."

1997 ರಲ್ಲಿ ಸಮ್ಮೇಳನ ಮಾಡಲು 1996 ರಲ್ಲಿಯೇ ಕಾರ್ಯಾಲಯ ತೆರೆದು ಒಂದು ವರ್ಷ ನಡೆಸಿದೆವು. ಸಮ್ಮೇಳನದ ನಂತರವೂ ನಮ್ಮ ಕಾರ್ಯಕರ್ತರು ಇದ್ದರು. ಜನಗಣತಿ ಸಮಯದಲ್ಲಿ ಪ್ರಚಾರಕರು ಎಲ್ಲ ರಾಜ್ಯಗಳಲ್ಲಿ ಸಂಚರಿಸಲು ಬೇಕೆಂದು ಕರೆಸಿಕೊಂಡೆವು. ಮೊನ್ನೆ ನಾನು ಹೋದಾಗ ಓರ್ವರು ಕೇಳಿದರು "ನಿಮ್ಮ ಕಾರ್ಯಾಲಯ ಇದ್ದಿರಬೇಕೆಂದು ಎಂದುಕೊಂಡೆ ಮುಚ್ಚಿದ್ದುಗೊತ್ತಿಲ್ಲ" ಅಂದರೆ ನಮ್ಮ ಜನ ಎಷ್ಟು ಸಂವೇದನಾಶೀಲರು, ಜಾಗೃತರು ಎಂಬುದು ಇದರಿಂದ ಅರ್ಥವಾಗುತ್ತದೆ. ಸುಮಾರು 8-9 ವರ್ಷಗಳಾದವು. ನಮ್ಮವರು ಹೋದುದೂ ಗೊತ್ತಾಗಲಿಲ್ಲ. ಏನು ಮಾಡಿಕೊಂಡರು, ಹೇಗೆ ನಡೆಸುತ್ತಾರೆ ಎಂಬ ಕುತೂಹಲವಾದರೂ ಬೇಡವೆ ? ಸಹಾಯ ಮಾಡುವುದು ಒತ್ತಟ್ಟಿಗಿರಲಿ ವಿಚಾರಿಸುವ ಸೌಜನ್ಯವೂ ಇರಬಾರದೆ ?

ಮತ್ತೊಬ್ಬರು ಹೇಳಿದರು "ನಮ್ಮವರಿಗೆ ಪುಸ್ತಕಗಳನ್ನು, ಸಿ.ಡಿ.ಗಳನ್ನು ಉಚಿತವಾಗಿ ಕೊಟ್ಟರೆ ಒಳ್ಳೆಯದು ಓದುತ್ತಾರೆ, ಕೇಳಿ ತಿಳಿದುಕೊಳ್ಳುತ್ತಾರೆ." ಸಾಹಿತ್ಯದ ಸಂಗ್ರಹವನ್ನು ಬಿಚ್ಚಿಟ್ಟುಕೊಂಡು ಕೂತಾಗ ಕಣ್ಣೆತ್ತಿಯೂ ನೋಡದವರು ಉಚಿತವಾಗಿ ಕೊಟ್ಟರೆ ಓದುವರೇ ? ಅಂಥವರಿಗೆ ಕೊಡುವುದರಲ್ಲಿ ಏನೂ ಅರ್ಥವಿಲ್ಲ. ಕನಿಷ್ಟವೆಂದರೂ ತಿಂಗಳಿಗೆ ಹದಿನೈದು ಇಪ್ಪತ್ತು ಸಾವಿರ ಖರ್ಚುಮಾಡಿಕೊಂಡು ಧರ್ಮ ಪ್ರಚಾರಕರು ಅಲ್ಲಿ ಇದ್ದು ಕೆಲಸ ಮಾಡಬೇಕಾಗುತ್ತದೆ. ಈ ಸಲ ಮಾತ್ರ ಕರ್ನಾಟಕದ ಶರಣ ಬಂಧುಗಳಿಂದ ದೇಣಿಗೆ ಎತ್ತಿಯಾದರೂ ದೆಹಲಿಯಲ್ಲಿ ಕಾರ್ಯಾಲಯವನ್ನು ಹಾಗೇ ಇಡುವುದಲ್ಲದೇ ಪೂಜ್ಯ ಚನ್ನಬಸವಾನಂದ ಸ್ವಾಮಿಗಳ ಹಿಂದಿ ಪ್ರವಚನ ಮಾಡಿಸಬೇಕೆಂಬ ಸಂಕಲ್ಪ ಹೊಂದಿದ್ದೇವೆ.

ಪಾರ್ಶ್ವವಾಯು ಪೀಡಿತ ಸಮಾಜ

ಧಾರ್ಮಿಕ ಸಂಘಟನೆ, ಉತ್ಸಾಹದ ದೃಷ್ಟಿಯಿಂದ ಸಿಖ್ಖ ಸಮಾಜವು ಯೌವ್ವನೋತ್ಸಾಹದಿಂದ ತುಂಬಿ ತುಳುಕುವ ಓರ್ವ ಕ್ರೀಡಾಪಟುವಿನ ಶರೀರದಂತೆ ಇದ್ದರೆ, ಲಿಂಗಾಯತ ಸಮಾಜವು

ಪಾರ್ಶ್ವವಾಯು ಪೀಡಿತ ಶರೀರದಂತೆ ಇದೆ. ಇದಕ್ಕೆ ಚೈತನ್ಯ ತುಂಬಲು ಸಾಧ್ಯವೇ ? ಕ್ರಿಯಾಶೀಲಗೊಳಿಸಲು ಸಾಧ್ಯವೇ ? ಎಂದು ಚಿಂತೆಯಾಗುತ್ತದೆ. ಜೊತೆಗೆ ಸಾದರು, ನೊಳಂಬರು, ಬಣಜಿಗರು, ಜಂಗಮರು, ರೆಡ್ಡಿ, ಪಂಚಮಸಾಲಿ ಎಂದು ಲಿಂಗಾಯತ ಸಮಾಜ ಪುರುಷನ ಅಂಗಾಂಗಗಳನ್ನು ಕತ್ತರಿಸುತ್ತಿರುವ ಮಠಾಧೀಶರ ಮತ್ತು ರಾಜಕಾರಣಿಗಳ ಹಾವಳಿ ಬೇರೆ. ಒಮ್ಮೊಮ್ಮೆ ಲಿಂಗಾಯತ ಸಮಾಜದ ಬಗ್ಗೆ ಏಕೆ ಚಿಂತಿಸಬೇಕು ಇಡೀ ಹಿಂದೂ ಸಮಾಜದ ಬಗ್ಗೆ ಆಲೋಚಿಸೋಣ ಎಂದರೆ ಅವರಂತೂ ವೈದಿಕ ಪುರೋಹಿತ ಶಾಹಿಯ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದ ಅಭಿಮನ್ಯುವಿನಂತೆ; ಮೂಢನಂಬಿಕೆ ಜ್ಯೋತಿಷ್ಯಗಳ ಕೆಸರಿನಲ್ಲಿ ಸಿಕ್ಕಿ ಒದ್ದಾಡುತ್ತಿರುವವರು. ಅದರಲ್ಲೇ ಅವರು ಪರಮ ಸುಖವನ್ನು ಕಾಣುತ್ತಿರುವ ಅಂಧಶ್ರದ್ಧೆಯವರು. ಲಿಂಗಾಯತರು ದಾರಿ ತಪ್ಪಿದ ಮಕ್ಕಳು; ಇವರನ್ನು ಬಯ್ಯಲು ನಮಗೆ ಹಕ್ಕಿದೆ. ''ನಮ್ಮ ಧರ್ಮಗುರು ಧರ್ಮಶಾಸ್ತ್ರ ಹೀಗೆ ಹೇಳುತ್ತವೆ. ನೀವೇಕೆ ಹೀಗೆ ಮಾಡುತ್ತೀರಿ?'' ಎಂದು ಕಟುವಾಗಿ ಬೈದರೂ ತಿದ್ದಿಕೊಳ್ಳಲಾಗದಿದ್ದರೂ ಪಾಪ, ನಮ್ಮ ಹಿತಾಸಕ್ತಿಗೆ ಹೇಳುತ್ತಾರೆ ಎಂದುಕೊಳ್ಳುತ್ತಾರೆ. ಧರ್ಮಪಿತ ಬಸವಣ್ಣನವರು ಇಷ್ಟು ಜನರನ್ನು ಲಿಂಗಾಯತರನ್ನಾಗಿ ಮಾಡಿ ಹೋಗಿದ್ದಾರೆ. ಇವರನ್ನು ಕೈ ಬಿಡುವುದೇಕೆ ? ಇಂದಲ್ಲ ನಾಳೆ ಬುದ್ಧಿ ಬರಬಹುದು ; ಎಲ್ಲರಿಗೂ ಬರದಿದ್ದರೂ ಕೆಲವರಾದರೂ ಎಚ್ಚರಗೊಳ್ಳಬಹುದು ಎಂದು ಆಲೋಚಿಸುತ್ತೇನೆ.

ಲಿಂಗಾಯತೇತರರಲ್ಲಿ ವಿನಂತಿ :

ಮಹಾತ್ಮ ಗಾಂಧೀಜಿಯವರ ಪ್ರಭಾವ ಭಾರತೀಯರಲ್ಲಿ ಮೂಲೆಗುಂಪಾಗುತ್ತಿದೆ, ಆಧುನಿಕ ಚೋಟಾ-ಮೋಟಾ ಗಾಂಧಿ ಕುಟುಂಬದ ಆರ್ಭಟದಲ್ಲಿ. ಏಕೆಂದರೆ ಕಾಂಗ್ರೆಸಿಗರಿಗೆ ಶ್ರೀಮತಿ ಸೋನಿಯಾಗಾಂಧಿ ವರ ಕೊಡುವ ದೇವತೆ; ಕಲ್ಪವೃಕ್ಷ. ಮಹಾತ್ಮ ಗಾಂಧೀಜಿ ಒಣಗಿ ಹೋದ ಮರ ಶಾಲೆಯ ಪಠ್ಯ ಪುಸ್ತಕದಲ್ಲಿ, ರಸ್ತೆಗಳ ಹೆಸರಿನಲ್ಲಿ ಉಳಿಯುವ ಹೆಸರಾಗಿ ವರ್ಷಕ್ಕೊಮ್ಮೆ ಶಾಲಾ ಮಕ್ಕಳಿಂದ - ಅದೂ ಕಾಲೇಜ್ ವಿದ್ಯಾರ್ಥಿಗಳಿಂದಲ್ಲ, ಜಯಂತಿ ಆಚರಿಸಿಕೊಳ್ಳಲ್ಪಡುವ ವ್ಯಕ್ತಿಯಾಗುವರು ಮಹಾತ್ಮಾ ಗಾಂಧೀಜಿ. ಅದೇ ರೀತಿ ಇಂದು ಧರ್ಮ ಗುರು ಬಸವಣ್ಣನವರ ಪರಿಸ್ಥಿತಿ ಕೂಡ. ಮೊಹಮ್ಮದಿಯರು ಇಬ್ರಾಹಿಂ, ಮೊಹಮ್ಮದ್ ಪೈಗಂಬರ್ ಮುಂತಾದವರ ತತ್ತ್ವ ಸಂದೇಶಗಳನ್ನು, ಕ್ರೈಸ್ತರು ಏಸು ಕ್ರಿಸ್ತರ ತ್ಯಾಗ-ಬಲಿದಾನಗಳನ್ನು, ಬೌದ್ಧರು ಬುದ್ಧನ ಆದರ್ಶಗಳನ್ನು, ಸಿಖ್ಖರು ತಮ್ಮ ಗುರುಗಳ, ಸಂದೇಶಗಳನ್ನು, ಹೋರಾಟವನ್ನು ತ್ಯಾಗ ಬಲಿದಾನಗಳನ್ನು ಅರ್ಥ ಮಾಡಿಕೊಂಡು ಪ್ರತಿ ಕ್ಷಣದಲ್ಲೂ ಸ್ಮರಿಸುತ್ತಾರೆ. ಆದರೆ ಹೆಚ್ಚಿನ ಲಿಂಗಾಯತರು ಧರ್ಮಪಿತ ಬಸವಣ್ಣನವರ ವ್ಯಕ್ತಿತ್ವವನ್ನಾಗಲೀ, ಸಂದೇಶವನ್ನಾಗಲೀ ಅರ್ಥ ಮಾಡಿಕೊಂಡಿಲ್ಲ, ತೋರಿಕೆಗಾಗಿ ಮತ್ತು ಧನ ಸಂಪಾದನೆಯ ದೃಷ್ಟಿಯಿಂದ ಅದ್ದೂರಿಯಾಗಿ ಬಸವ ಜಯಂತಿಗಳನ್ನು ಆಚರಿಸುತ್ತಾರೆ. ಅವರ ಜೀವನದಲ್ಲಿ ಧರ್ಮಪಿತರು ಬೋಧಿಸಿದ ಸಮಾನತೆ, ಏಕದೇವೋಪಾಸನೆ ಮುಂತಾದವುಗಳನ್ನು ಅಳವಡಿಸಿಕೊಳ್ಳುವುದೇ ಇಲ್ಲ. ಕೆ. ಎಲ್. ಇ ಸೊಸೈಟಿಯವರು ಬಸವಾ ಇಂಟರ್‌ನ್ಯಾಷನಲ್ ಸ್ಕೂಲ್ ಎಂಬ ಶಾಲೆಯನ್ನು ದೆಹಲಿಯಲ್ಲಿ ತೆರೆದಿದ್ದಾರೆ. ಅದರ ಪ್ರಾರಂಭೋತ್ಸವಕ್ಕೆ ಅನೇಕ ಸ್ವಾಮಿಗಳು ಕರ್ನಾಟಕದಿಂದ ಬಂದಿದ್ದರಂತೆ. ಆ ದಿನ ದೊಡ್ಡದಾಗಿ ಹೋಮ ಹವನವನ್ನು ಮಾಡಲಾಯಿತಂತೆ. ತತ್ತ್ವ ತಿಳಿಯದ ಲಿಂಗಾಯತರಿಗೆ ಸಹಿತ ತುಂಬಾ ವ್ಯಥೆಯಾಯಿತಂತೆ. ಪೂಜ್ಯ ಗದಗಿನ ತೋಂಟದಾರ್ಯ ಜಗದ್ಗುರುಗಳು ಆಕ್ಷೇಪ ವ್ಯಕ್ತಪಡಿಸಿದರಂತೆ "ಏಕಿಂತಹ ತಪ್ಪು ಮಾಡಿದಿರಿ ? ಇಂಥದನ್ನೆಲ್ಲ ಮಾಡುವುದಿದ್ದರೆ ನಮ್ಮನ್ನು ಕರೆಸುವ ಅಗತ್ಯವೇನಿತ್ತು ?''ಎಂದು ಕೇಳಿದರಂತೆ. ಪರವಾಗಿಲ್ಲ ಪೂಜ್ಯ ಗದುಗಿನ ತೋಂಟದಾರ್ಯ

ಜಗದ್ಗುರುಗಳು ಪ್ರತಿಭಟನೆಯ ಧ್ವನಿ ಎತ್ತಿದುದು ಅಭಿನಂದನಾರ್ಹ. ನನ್ನ ವ್ಯಾಕುಲತೆ ಏನೆಂದರೆ, ತಮ್ಮ ಮುದ್ರಿಕೆ (Logo)ಯಲ್ಲಿ ಕೆ.ಎಲ್. ಇ. ಸೊಸೈಟಿಯವರು ಎತ್ತು(ನಂದಿ)ಇಟ್ಟುಕೊಂಡಿದ್ದಾರೆ. ಇದರಲ್ಲೆ ಅವರ ಉದ್ದೇಶ / ಚಿಂತನೆಯ ಮಟ್ಟ ತಿಳಿಯುತ್ತದೆ. ದೆಹಲಿಯಲ್ಲಿ ನಡೆಸುವ ಶಾಲೆಗೆ ನಂದಿಯ ಹೆಸರೇ ಇಡಬಹುದಿತ್ತು. ಬಸವ ಎಂದು ಹೆಸರಿಟ್ಟು ಹೋಮ ಹವನ ಮಾಡಿ ಉದ್ಘಾಟಿಸಿ, ಬಸವ ತತ್ತ್ವಕ್ಕೆ ಅಪಮಾನ ಮಾಡುವ ಅಗತ್ಯ ಏನಿತ್ತು.? ಲಿಂಗಾಯತ ಸಮಾಜದಲ್ಲಿ ಯಾರಿಗೂ ಯಾರನ್ನೂ ಕೇಳುವ ಹಕ್ಕು ಇಲ್ಲದ್ದರಿಂದ ನಂದಿಯ ಹೆಸರಿಟ್ಟಿದ್ದರೂ ಯಾರೂ ಕೇಳುತ್ತಿರಲಿಲ್ಲ. ಯಾರೋ ವಿವೇಕಿಗಳು ಪ್ರಶ್ನಿಸಿದಾಗ ಶ್ರೀ ಪ್ರಭಾಕರ ಕೋರೆಯವರು " ನನಗೆ ಗೊತ್ತಿಲ್ಲ, ಇಲ್ಲಿಯ ಜನರೇ ಎಲ್ಲ ವ್ಯವಸ್ಥೆ ಮಾಡಿದ್ದಾರೆ.'' ಎಂದು ಜಾರಿ ಕೊಂಡರಂತೆ. ಯಾವುದೇ ರೀತಿಯಲ್ಲಿ ಬಸವ ತತ್ತ್ವವನ್ನು ಶರಣ ಸಂಸ್ಕೃತಿಯನ್ನು ಪ್ರಚಾರ ಅಥವಾ ಪ್ರದರ್ಶನ ಮಾಡುವ ಉದ್ದೇಶ ಇಲ್ಲದ ಮೇಲೆ ಶಾಲೆಗೆ ಬಸವಣ್ಣನವರ ಹೆಸರನ್ನು ಇಡುವ ಆವಶ್ಯಕತೆ ಏನೂ ಇರಲಿಲ್ಲ. ಪೂಜ್ಯ ತೋಂಟದಾರ್ಯ ಜಗದ್ಗುರುಗಳು ಬಸವೇಶ್ವರ ಕಂಪ್ಯೂಟರ್ ಸೆಂಟರ್ ಒಂದನ್ನು ಕರೋಲ್ ಬಾಗ್‌ದಲ್ಲಿ ತೆರೆದು, ಅಲ್ಲಿ ಅತ್ಯಂತ ಕಡಿಮೆ ಶುಲ್ಕದಲ್ಲಿ ಕೇವಲ ಒಬ್ಬರಿಗೆ ತಿಂಗಳಿಗೆ ನೂರು ರೂಪಾಯಿ ತೆಗೆದುಕೊಂಡು ಕಂಪ್ಯೂಟರ್ ಶಿಕ್ಷಣ ಕೊಡಿಸುತ್ತಿದ್ದಾರೆ. ಜಾಟವ್ ಮತ್ತು ರಾಯಗರ್ ಎಂಬ ಹರಳಯ್ಯ ಸಮಾಜದವರಿಗೆ ಮುಖ್ಯವಾಗಿ ಈ ಸವಲತ್ತು ಕಲ್ಪಿಸಿದ್ದಾರೆ. ಅವರು ಆ ಜನರಿಗೆ ಇಷ್ಟಲಿಂಗ ದೀಕ್ಷೆ ಸಹ ಕೊಟ್ಟ ಬಗ್ಗೆ ವಾರ್ತಾಪತ್ರಿಕೆಗಳಲ್ಲಿ ಎಲ್ಲರೂ ಓದಿದ್ದೀರಿ. ಅವರಲ್ಲಿ ಒಬ್ಬರು ನಮ್ಮ ಸಮ್ಮೇಳನದ ವೇದಿಕೆಯ ಮೇಲಿಂದ ಭಾಷಣಮಾಡುತ್ತಾ ಹೇಳಿದರು, " ದೆಹಲಿಯಲ್ಲಿ ಒಬ್ಬ ಲಿಂಗಾಯತ ಸ್ವಾಮಿಗಳು ಬಹುದೊಡ್ಡ ಕಾರ್ಯಕ್ರಮ ಮಾಡಿದರು, ವೇದಿಕೆಯ ಮೇಲೆ ಧರ್ಮಗುರು ಬಸವಣ್ಣನವರ ಒಂದು ಭಾವಚಿತ್ರ ಇರಲಿಲ್ಲ. ಬಸವ ಮಂತ್ರ ಇರಲಿಲ್ಲ. ನಮಗೆ ಆಶ್ಚರ್ಯವೆನಿಸಿತು. ಮಠದ ಸ್ವಾಮಿಗಳಾಗಲೀ ಅವರ ಅನುಯಾಯಿಗಳಾಗಲೀ ಬಸವಣ್ಣನವರ ಹೆಸರನ್ನು ಸಹ ಎತ್ತಲಿಲ್ಲ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಬೇರೊಂದು ರಾಜ್ಯದ ಗವರ್ನರ್ (ಶ್ರೀ ರಾಮಾ ಜೋಯಿಸ್)ಅವರು ಬಸವಣ್ಣನವರ ಹೆಸರು ಹೇಳಿ ಕೊಂಡಾಡಿದಾಗ ನಮಗೆ ಸಮಾಧಾನ ವಾಯಿತು. ಹೀಗೇಕೆ ?ಎಂದು ಆಶ್ಚರ್ಯವಾಯಿತು.'' ಎಂದರು.

ಹೊಸದಾಗಿ ದೀಕ್ಷಿತರಾದ ಈ ಜನರಿಗೆ ಸಹ ಲಿಂಗಾಯತ ಸಮಾಜದೊಳಗಿನ ಹುಳುಕು ತಿಳಿಯಿತಲ್ಲ ಎಂದು ನನಗೆ ಕಳವಳವಾಯಿತಾದರೂ ನವ ದೀಕ್ಷಿತರಲ್ಲಾದರೂ ಈ ಪ್ರಜ್ಞೆ ಬಂದಿದೆಯಲ್ಲ ಎಂದು ಸಂತೋಷವೆನಿಸಿತು.

ಇದನ್ನೆಲ್ಲ ನಾನು ಏಕೆ ಬರೆಯುತ್ತಿದ್ದೇನೆ ಎಂದರೆ, ಅನೇಕ ಲಿಂಗಾಯತರಿಗೆ ಕ್ರಾಂತಿ ಪುರುಷ ಬಸವಣ್ಣನವರು ಬೇಕಾಗಿಲ್ಲ, ವೀರಶೈವರಿಗಂತೂ ಮೊದಲೇ ಬೇಕಾಗಿಲ್ಲ, ಲಿಂಗಾಯತೇತರರಲ್ಲಿರುವ ಪ್ರಜ್ಞಾವಂತರಾದರೂ ಸಮತಾವಾದಿ ಬಸವಣ್ಣನವರನ್ನು ಕುರಿತು ಅಧ್ಯಯನ ಮಾಡಬೇಕು ಮಾತ್ರವಲ್ಲ ತಮ್ಮ ಶ್ರದ್ಧಾಕೇಂದ್ರವನ್ನಾಗಿ ಭಾವಿಸಬೇಕು ಎಂದು ನನ್ನ ಕಳಕಳಿಯ ಬಿನ್ನಹ. ಅನೇಕ ಸಾಹಿತಿಗಳು ಈಗ ಅಧ್ಯಯನ ಮಾಡುತ್ತಿದ್ದಾರೆ. ಕೃತಿಗಳನ್ನು ರಚಿಸಿದ್ದಾರೆ, ರಚಿಸುತ್ತಿದ್ದಾರೆ; ಚಿಂತನ ಗೋಷ್ಠಿ ನಡೆಸುತ್ತಾರೆ. ಇದಿಷ್ಟೇ ಸಾಲದು. ಏಕೆಂದರೆ ಕೇವಲ ಬೌದ್ಧಿಕ ಜ್ಞಾನದಿಂದ ಸಂಘಟನೆ ಬೆಳೆಯದು. ಪೂಜಿಸುವುದು ಒಂದು ವಸ್ತುವನ್ನು ಅಥವಾ ಒಬ್ಬ ವ್ಯಕ್ತಿಯನ್ನು, ಓದುವ ಸಾಹಿತ್ಯ ಮತ್ತೊಬ್ಬರದು. ಹೀಗಾಗಿಯೇ ಹಿಂದು ಸಮಾಜದಲ್ಲಿ ಗೊಂದಲವೋ ಗೊಂದಲ. ಪ್ರವಚನವನ್ನು ನಮ್ಮಿಂದಲಾಗಲಿ, ನಮ್ಮ ಶಿಷ್ಯರಿಂದಾಗಲೀ,

ಕೇಳಿದಾಗ ಲಿಂಗಾಯತೇತರರಲ್ಲಿಯೂ ಬಹಳ ಅಭಿಮಾನ. ಧರ್ಮಗುರು ಬಸವಣ್ಣನವರ ಬಗ್ಗೆ ಮತ್ತು ವಚನ ಸಾಹಿತ್ಯದ ಬಗ್ಗೆ ಬೆಳೆಯುತ್ತದೆ. ಪ್ರಾರ್ಥನಾ ಸಭೆ-ಶರಣ ಸಂಗಮ ನಡೆಯುತ್ತದೆ. ರಾಷ್ಟ್ರೀಯ ಬಸವ ದಳಗಳು ಎಲ್ಲ ಜಾತಿ ಮತ ಪಂಥದವರನ್ನು ಇಂಬಿಟ್ಟುಕೊಂಡು ನಮಗೆ ಅತೀವ ಸಂತೋಷ ವಾಗುವಂತೆ ಕಾರ್ಯವನ್ನು ನಿರ್ವಹಿಸುತ್ತಿವೆ.ಮತ್ತೆ ಕೆಲವು ರಾಷ್ಟ್ರೀಯ ಬಸವದಳಗಳು ಮಡಿವಂತರಿಂದ ಕೂಡಿದ್ದು ಪ್ರವಚನ ಕೇಳಿ ಪ್ರಭಾವಿತರಾಗಿ ಬಂದ ಲಿಂಗಾಯತೇತರರೊಡನೆ ಆತ್ಮೀಯ ವರ್ತನೆ ಮಾಡುವುದಿಲ್ಲ. ಆಗ ಅವರಿಗೆ ಬರಲು ಮುಜುಗರ ಎನಿಸುತ್ತದೆ. ಪ್ರಾರ್ಥನೆಗೆ ಬರುವುದನ್ನೇ ನಿಲ್ಲಿಸುತ್ತಾರೆ.ಮತ್ತೆ ಕೆಲವು ಕಡೆ ರಾಜಕೀಯ ಸಂಘರ್ಷವಿದೆ. ಲಿಂಗಾಯತರು- ಒಕ್ಕಲಿಗರು, ಲಿಂಗಾಯತರು - ದಲಿತರು, ಲಿಂಗಾಯತರು - ಕುರುಬರು ಹೀಗೆ ರಾಜಕೀಯ ಸಂಘರ್ಷವಿದ್ದಾಗಲೂ ಸಂಘಟನೆಗೆ, ಆಧ್ಯಾತ್ಮಿಕ ಸಾಧನೆಗೆ ಅಡ್ಡಿ ಬರುತ್ತದೆ. ಪ್ರಜ್ಞಾವಂತರು, ಆಧ್ಯಾತ್ಮ ಜೀವಿಗಳು ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳಬೇಕು. ಏಕೆಂದರೆ ನಮ್ಮ ದೇಶದಲ್ಲಿ ರಾಜಕೀಯ ಸಂಘರ್ಷ ಮತ್ತು ಜಾತಿ ಸಂಘರ್ಷ ವಿಪರೀತವಾಗಿ ವಾತಾವರಣವನ್ನು ಕೆಡಿಸುತ್ತಲಿವೆ.

ಅನೇಕರು ಗಣಪತಿಯ ಮಂದಿರಗಳನ್ನು ಜಾತಿಯ ತಾರತಮ್ಯವಿಲ್ಲದೆ ಕಟ್ಟುತ್ತಾರೆ. ಗಣಪತಿಯ ತತ್ತ್ವ ಸಿದ್ಧಾಂತಗಳು ಏನಿವೆ ? ದೇವರು ಎನ್ನೋಣವೆ ದೇವರಿಗೆ ಆಕಾರವೇ ಇರದು. ಗಣಪತಿ ಮಾನವನೆ ?ಮಹಾತ್ಮ ಎನ್ನೋಣವೇ? ಆನೆಯ ಮುಖ, ಸೊಂಡಿಲು ಮೊರದಗಲ ಕಿವಿ ಮಾನವರಿಗೆ ಇರುವುದೇ ? ಜೀವನದಲ್ಲಿ ಯಾವ ಆದರ್ಶವನ್ನು ಗಣಪತಿ ಪಾಲಿಸಿದ, ಬೋಧಿಸಿದ ? ಶ್ರೀಲಂಕಾ ಚಕ್ರಾಧಿಪತಿಯಾದ ರಾವಣೇಶ್ವರನು ಸಾವಿರಾರು ಮೈಲು ದೂರ ಕ್ರಮಿಸಿ, ಕೈಲಾಸ ಪರ್ವತಕ್ಕೆ ಹೋಗಿ ಅಲ್ಲಿದ್ದ ಪೀಠಾಧಿಪತಿಯಿಂದ ಒಂದು ಲಿಂಗವನ್ನು ಪಡೆದು ಬರುವಾಗ, ಪುರೋಹಿತಶಾಹಿಯ ಪ್ರತಿನಿಧಿಯಂತೆ ವರ್ತಿಸಿ ಗಣಪತಿಯು ಆ ಶಿವಲಿಂಗವು ಗೋಕರ್ಣದ ಮರಳಿನಲ್ಲಿ ಹುಗಿದು ಕಳೆದು ಹೋಗುವಂತೆ ಮಾಡಿದವನು. ವಿಘ್ನ ನಿವಾರಕ ಎಂದು ಮೂಢರು ಭಾವಿಸುತ್ತಾರೆ. ತಾನೇ ಜಾರಿಬಿದ್ದು ಹಲ್ಲು ಮುರಿದುಕೊಂಡ, ಹೊಟ್ಟೆ ಒಡೆದು ಹೋದಂತಹವನು. ಮಹಾನ್ ಜ್ಞಾನಿಯೂ, ಯೋಗಿಯೂ, ವೈದ್ಯ ರಾಜನೂ, ಭಾರತೀಯ ಪರಂಪರೆಯ ಮೂಲ ಪುರುಷನೂ ಆದ ಶಿವನನ್ನು ಮರೆಸುವಂತೆ ಪುರೋಹಿತಶಾಹಿ ಜನರು ಗಣಪತಿಯ ಆರಾಧನೆಯನ್ನು ಬಳಕೆಗೆ ತಂದಿದ್ದಾರೆ.

ಶಿರ್ಡಿ ಸಾಯಿಬಾಬಾರ ಮಂದಿರಗಳನ್ನು ಜಾತ್ಯತೀತವಾಗಿ ಕಟ್ಟುತ್ತಾರೆ. ಅವರು ಒಬ್ಬರು ಮಹಾತ್ಮರು ಎನ್ನುವುದರಲ್ಲಿ ತಪ್ಪೇನಿಲ್ಲ. ತಮ್ಮ ಪಾಡಿಗೆ ತಾವು ಆಧ್ಯಾತ್ಮಿಕವಾಗಿ ಸಾಧನೆ ಮಾಡಿದವರು. ಆದರೆ ಜಗತ್ತಿಗೆ ಅವರ ಸಾಹಿತ್ಯಿಕ ಕೊಡುಗೆ ಏನಿದೆ? ಜೀವಂತವಾಗಿರುವ ಗುರು ಮತ್ತು ಭಕ್ತರ ನಡುವೆ ಬೋಧೆ, ಪ್ರವಚನ ಸಂವಹನ ಸಾಧನವಾದರೆ ದಿವಂಗತವಾಗಿರುವ ಗುರು ಮತ್ತು ಭಕ್ತರ ನಡುವೆ ಆ ಗುರು ಕೊಟ್ಟಿರುವ ವಾಣಿಯೇ ಸಂಪರ್ಕ ಸಾಧನ. ಸಂದೇಶದ ಮೂಲಕ ಅವರು ಭಕ್ತರೊಡನೆ ಮಾತನಾಡುತ್ತಾರೆ, ಅನುಗ್ರಹಿಸುತ್ತಾರೆ. ಹಿಂದು ಸಮಾಜದಲ್ಲಿ ವಿಪರೀತವಾದ ಪ್ರಚಾರ ಪಡೆದ ವ್ಯಕ್ತಿಯ ಹಿಂದೆ ಜನರು ಗೊತ್ತು ಗುರಿ ಇಲ್ಲದೆ ಸಾಗುತ್ತಾರೆ. ಈ ರೀತಿ ಕ್ರೈಸ್ತರಾಗಲೀ, ಮುಸ್ಲೀಮರಾಗಲೀ, ಸಿಖ್ಖರಾಗಲೀ ನುಗ್ಗುವುದಿಲ್ಲ. ತಮ್ಮ ಗುರು, ತಮ್ಮ ಧರ್ಮಶಾಸ್ತ್ರ ಹಿಡಿದು ಶಿಸ್ತಿನಿಂದ ಸಾಗುತ್ತಾರೆ. ಆದ್ದರಿಂದ ಲಿಂಗಾಯತರಲ್ಲದಿದ್ದರೂ ಉಳಿದ ಪ್ರಜ್ಞಾವಂತ, ಆಧ್ಯಾತ್ಮ ಜೀವಿಗಳು ಪರದಾಡಿ ಆಯುಷ್ಯವನ್ನು ವ್ಯರ್ಥಮಾಡಿಕೊಳ್ಳುವ ಬದಲಿಗೆ ಬಸವಾಯತ ದೀಕ್ಷೆ ಪಡೆದುಕೊಂಡು ಸಾಧನೆ ಮಾಡುತ್ತ ಬಸವಣ್ಣನವರ ಹೆಸರಿನಲ್ಲಿ "ಬಸವೇಶ್ವರ ದಿವ್ಯಜ್ಞಾನ ಸಂಘ" ನಿರ್ಮಾಣಮಾಡಿ ಅದರ

ಮತಿಯಿಂದ ಅದರೊಳಗೆ ವಿಶ್ವಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅಥವಾ ಬಸವ ಭಾವಚಿತ್ರವನ್ನು ಇಟ್ಟುಕೊಂಡು ವಚನ ಸಾಹಿತ್ಯವನ್ನು ಪಾರಾಯಣ, ಪಠಣ, ಪ್ರವಚನ ಮಾಡುತ್ತ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಮತ್ತು ಪ್ರಜ್ಞಾವಂತರ ಸಂಘಟನೆಯನ್ನು ಮಾಡುತ್ತಾ ಹೋಗಬೇಕು. ಈ ವಿಧಾನವು ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ.

1. ವಿಶ್ವಗುರು ಬಸವಣ್ಣನವರು ಯಾವ ಕಳಕಳಿಯಿಂದ ಎಲ್ಲರ ಉದ್ಧಾರಕ್ಕೆ ಹೋರಾಡಿದರೋ ಆ ಕಳಕಳಿಯನ್ನು ಲಿಂಗಾಯತೇತರರು ಅರ್ಥಮಾಡಿಕೊಂಡಂತೆ ಆಗುತ್ತದೆ.
2. ಧಾರ್ಮಿಕ ಸಂಸ್ಕಾರದಿಂದ ವಂಚಿತರಾದ ಅನೇಕ ಶೂದ್ರ, ದಲಿತ ಜನಾಂಗಕ್ಕೆ ಸಂಸ್ಕಾರ ಮತ್ತು ಶರಣರ ಸಂಗವನ್ನು ಒದಗಿಸಿಕೊಟ್ಟಂತೆ ಆಗುತ್ತದೆ.
3. ಮಾಂಸಾಹಾರಿಗಳಾದ ಅನೇಕ ಜನರಿಗೆ ಇಷ್ಟಲಿಂಗ ದೀಕ್ಷೆ ತೆಗೆದುಕೊಂಡು ಮಾಂಸಾಹಾರ ಬಿಡಲು ಸಾಧ್ಯವಾಗದಾಗಿದೆ. ಅವರೊಬ್ಬರು ಮನಸ್ಸು ಮಾಡಿದರೂ ಕುಟುಂಬದ ಇತರರಿಗೆ ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಬಸವಾಯತ ದೀಕ್ಷೆ ಪಡೆದು ಧಾರ್ಮಿಕ ಸಾಧನೆ ಮಾಡಬಹುದು. ಇದರಿಂದ ಆಹಾರದ ಸಮಸ್ಯೆ ಎದುರಾಗದು.
4. ಕೆಲವರು ಆಹಾರದ ವಿಷಯದಲ್ಲಿಯೂ ಸಂಯಮ ಹೊಂದಿ ದೀಕ್ಷೆ ಪಡೆದು ಸಸ್ಯಾಹಾರಿಗಳು, ಆಚಾರ-ವಿಚಾರ ಸಂಪನ್ನರೂ ಆಗಿರುವರು. ಆಗ ಅವರಿಗೆ ಒಂದು ಸಮಸ್ಯೆ ಎದುರಾಗುತ್ತದೆ. ಮಾಂಸಾಹಾರಿ ಜಾತಿಗಳಿಂದ ಹೊರಬಂದು ಸಸ್ಯಾಹಾರಿಗಳಾಗಿ ಮಕ್ಕಳಿಗೆ ಅದೇ ಸಂಸ್ಕಾರ ರೂಢಿಸುತ್ತಾರೆ. ಮುಂದೆ ಮಕ್ಕಳ ಮದುವೆ ಮಾಡುವಾಗ ತಮ್ಮ ಪೂರ್ವದ ಜಾತಿಯಲ್ಲಿ ಹೆಣ್ಣು / ಗಂಡು ಹುಡುಕಬಯಸದೆ ಲಿಂಗಾಯತರೊಡನೆ ಬೀಗತನ ಮಾಡಲು ಇಷ್ಟಪಡುತ್ತಾರೆ. ಆದರೆ ಈ ಜನರು ವಿಶಾಲ ಮನಸ್ಸು ಹೊಂದಿ ಸ್ವೀಕರಿಸುವುದಿಲ್ಲ. ಕೆಲವೇ ಕೆಲವರು ನಮ್ಮ ಮಾತಿಗೆ ಮನ್ನಣೆ ನೀಡಿ ನವ ದೀಕ್ಷಿತರೊಡನೆ ವಿವಾಹ ಸಂಬಂಧ ಬೆಳೆಸಿದ್ದಾರೆ. ನವದೀಕ್ಷಿತರಿಗೆ ಎಂತಹ ಸಂದಿಗ್ಧ ಪರಿಸ್ಥಿತಿ ಊಹಿಸಿರಿ. ಅನ್ಯ ಜಾತಿಯವರ ಪೂರ್ವದ ಜಾತಿಗಳವರು, "ಅವರು ದೀಕ್ಷೆ ಪಡೆದಿದ್ದಾರೆ; ಮಾಂಸಾಹಾರ ಮಾಡುವುದಿಲ್ಲ ಇಂಥವರ ಮಕ್ಕಳೊಡನೆ ಹೇಗೆ ಸಂಬಂಧ ಬೆಳೆಸುವುದು?" ಎಂದು ಹೆದರುತ್ತಾರೆ.. ಹೀಗೆ ನವದೀಕ್ಷಿತರಿಗೆ ಸಂದಿಗ್ಧ ಪರಿಸ್ಥಿತಿ.

ಆದ್ದರಿಂದ ನಾನು ಈ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದೇನೆ. ಸಾಧಕರು, ಸನ್ಯಾಸಿಗಳಾಗಲು ಯಾವ ತೊಂದರೆ ಇಲ್ಲ. ಅವರ ಪೂರ್ವಾಶ್ರಮ ನೋಡದೆ ಗೌರವಿಸುವಷ್ಟು ಬಸವ ತತ್ತ್ವದವರು ಪಕ್ವವಾಗುತ್ತಿದ್ದಾರೆ. ಮಕ್ಕಳಿರುವ ಗೃಹಸ್ಥರದೇ ಬಗೆ ಹರಿಯಲಾರದ ಸಮಸ್ಯೆ. ಪ್ರೇಮ ವಿವಾಹಗಳಾದರೆ ಯಾರಿಗೂ ಹೆದರದೆ ಅವರು ವಿವಾಹವಾಗುತ್ತಾರೆ.

ಲಿಂಗಾಯತೇತರರು ಬಸವಾಯತರಾಗಿ ಮಂತ್ರೋಪದೇಶ ಪಡೆದು ದಿನ ನಿತ್ಯ ಜಪ ತಪ ಮಾಡುತ್ತಾ ವಾರಕ್ಕೊಮ್ಮೆ ಪ್ರಾರ್ಥನೆಯಲ್ಲಿ ಭಾಗಿಗಳಾಗುತ್ತಾ ವಚನ ಸಾಹಿತ್ಯವನ್ನು ಅಧ್ಯಯನ ಮಾಡಿ, ಅನುಸರಿಸುತ್ತಾ ಹೋದರೆ ಉತ್ತಮ ವಾತಾವರಣದ ಸಮಾಜ ನಿರ್ಮಾಣ ಸಾಧ್ಯ.

ಬಸವ ತತ್ತ್ವವನ್ನು 'ಕಿತ್ತುಕೊಳ್ಳಲು' ಕರೆ

ಲಿಂಗಾಯತರು ಐತಿಹಾಸಿಕ ಬಸವಣ್ಣನವರನ್ನು ಎತ್ತನ್ನಾಗಿ ಜಡಗಟ್ಟಿಸಿ, ಜಾತಿವಾದಿಗಳಾಗಿ ವರ್ಷಕ್ಕೊಮ್ಮೆ ಬಸವಜಯಂತಿ ಮಾಡುವುದರಿಂದ ಲಿಂಗಾಯತೇತರರು "ಬಸವಣ್ಣನವರು ನಮ್ಮವರಲ್ಲ" ಎಂದುಕೊಳ್ಳುತ್ತಾರೆ. ಧರ್ಮಗುರು ಬಸವಣ್ಣನವರು ಎಲ್ಲರನ್ನು ಸಮಾನರು ಎಂದು

ಹೇಳುವ ಕಾರಣ ಜಾತಿವಾದಿ ಲಿಂಗಾಯತರು ಅಂತರ್ಯದಲ್ಲಿ ದ್ವೇಷಿಸುತ್ತಾರೆ. ವಿಶ್ವಗುರುವಾಗಿ ಮೆರೆಯಬೇಕಿದ್ದ ಮಹಾನುಭಾವರು ಹೀಗೆ ಜನರ ಅಜ್ಞಾನದಿಂದ ದ್ವೇಷ-ತಿರಸ್ಕಾರಕ್ಕೆ ಒಳಗಾಗುತ್ತಿರುವುದು ನನಗೆ ತುಂಬಾ ಚಿಂತೆಯನ್ನುಂಟು ಮಾಡಿದೆ. ಹಿಂದು-ಮುಸ್ಲಿಂ ಭಾವೈಕ್ಯತೆಗಾಗಿ ಶ್ರಮಿಸಿದ ಮಹಾತ್ಮ ಗಾಂಧೀಜಿಯವರನ್ನು ಜಾತಿವಾದಿ ಹಿಂದುಗಳು ಮತಾಂಧ ಮುಸ್ಲೀಮರು ಉಭಯತರೂ ದ್ವೇಷಿಸುವಂತೆ ಈ ಪರಿಸ್ಥಿತಿ ಇದೆ.

ಓರ್ವ ದಲಿತರ ತರುಣ ದೆಹಲಿಯಲ್ಲಿ ಒಂದು ಪ್ರಶ್ನೆ ಕೇಳಿದ "ಅಹಲ್ಯೆ ಕಲ್ಲಾಗಿ ಬಿದ್ದಿದ್ದಳು ಶ್ರೀರಾಮನು ಪಾದದಿಂದ ಮುಟ್ಟಿದ ಆಕೆ ಜೀವಂತಗೊಂಡಳು. ಆತ ಕೈಯಿಂದ ಅನುಗ್ರಹಿಸಲಿಲ್ಲವೇಕೆ?" ಅವನ ಜಾಗೃತ ಸ್ಥಿತಿ ನನಗೆ ಸಂತೋಷವುಂಟುಮಾಡಿತು. ಆದರೆ ಅದನ್ನು ವಿಮರ್ಶೆ ಮಾಡದೆ ನಾನು ಹೇಳಿದೆ, 'ನಮ್ಮದೂ ಅದೇ ಪ್ರಶ್ನೆ. ಅದಕ್ಕೆ ಧರ್ಮಗುರು ಬಸವಣ್ಣನವರು ಹಸ್ತವನ್ನು ತಲೆಯಮೇಲಿಟ್ಟು ಅನುಗ್ರಹಿಸಿ 12 ಸಾವಿರ ಪತಿತೆಯರನ್ನು ಶರಣೆಯರನ್ನಾಗಿ ಮಾಡಿದರು.' ಎಂದು ಹೇಳಿದೆ. ಯಾರಿಂದ ವರ್ಣಾಶ್ರಮ ಜಾತಿ ಪದ್ಧತಿ ಬಲಗೊಂಡಿತೊ ಯಾರ ತತ್ತ್ವಸಿದ್ಧಾಂತಗಳಿಂದ ಕೆಲವರು ಶೂದ್ರರು, ದಲಿತ ಅಸ್ಪೃಶ್ಯರೂ ಆಗಬೇಕಾಯಿತೋ ಅವರನ್ನೇ ಇಂದು ಶೂದ್ರರು, ದಲಿತರು ಆರಾಧಿಸುತ್ತಿದ್ದಾರೆ. ಎಲ್ಲ ಕಡೆಯಲ್ಲಿಯೂ ಒಂದು ವಿಶೇಷವನ್ನು ನಾನು ಗುರುತಿಸುತ್ತಿದ್ದೇನೆ. ಉಳಿದ ಹಿಂದೂಗಳಿಗಿಂತಲೂ ದಲಿತರು ಹೆಚ್ಚು ಪ್ರಜ್ಞಾವಂತರಾಗುತ್ತಿದ್ದಾರೆ, ವೈಚಾರಿಕತೆಯತ್ತ ಸಾಗುತ್ತಿದ್ದಾರೆ. ಅದಕ್ಕೆ ಕಾರಣ ಅವರೇ ಎಲ್ಲರಿಗಿಂತಲೂ ಹೆಚ್ಚು ನೋವು, ಸಾಮಾಜಿಕ ತಿರಸ್ಕಾರಗಳಿಗೆ ಒಳಗಾಗಿರುವುದರಿಂದ ಇರಬಹುದು. ಬುದ್ಧ-ಬಸವ-ಅಂಬೇಡ್ಕರ್ ಮೂವರನ್ನೂ ಅವರ ಉದ್ಧಾರಕರೆಂದು ಅರ್ಥಮಾಡಿಕೊಳ್ಳುತ್ತಿದ್ದಾರೆ.

ಭಾರತೀಯ ಧರ್ಮಗಳ ಮಹಾಸಂಘ (Federation of Indian Religions) ವನ್ನು ರಚಿಸಿರುವ, ಇದಕ್ಕೆ ಪ್ರೇರಣೆ ನೀಡಿರುವ ನನ್ನ ಉದ್ದೇಶವಾದರೂ ಇದೇ ಆಗಿದೆ. ಭಾರತೀಯ ಧರ್ಮಗಳಾಗಿರುವ ಹಿಂದು, ಬೌದ್ಧ, ಜೈನ, ಲಿಂಗಾಯತ, ಸಿಖ್ಖ ಈ ಐವರೂ ಒಟ್ಟಾಗಿ ದಲಿತರು, ಹಿಂದುಳಿದ ವರ್ಗಗಳು, ಆದಿವಾಸಿಗಳು, ಮುಂತಾದವರನ್ನು ಆದರದಿಂದ ಕಂಡು ಭಾರತೀಯ ಧಾರ್ಮಿಕ ಪರಂಪರೆಯಿಂದ ಮತಾಂತರದ ಮೂಲಕ ಹೊರಗೆ ಹೋಗದಂತೆ ತಡೆಯಬೇಕು. ಅವರ ಸ್ವಾಭಿಮಾನಕ್ಕೆ ಚ್ಯುತಿಬರದಂತೆ ನಡೆಸಿಕೊಳ್ಳಲು ಅನುವಾಗಬೇಕು.

ಓರ್ವ ದಲಿತ ನೇತಾರರು ಹೇಳಿದರು. ಅವರು ರಾಯಗರ್ (ರಾಜಸ್ಥಾನದ ಸಮಗಾರ) ಸಮಾಜದವರು. ರಾಜಸ್ಥಾನದ ಅವರ ಒಂದು ಹಳ್ಳಿಯಲ್ಲಿ ಮಗಳ ಮದುವೆ ಇಟ್ಟುಕೊಂಡಿದ್ದರು. ಅಳಿಯನನ್ನು ಕುದುರೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮೂಲಕ ಸ್ವಾಗತಿಸಲು ಬಯಸಿದ್ದರು. ಆದರೆ ಸವರ್ಣೀಯರು ಒಪ್ಪಿಗೆ ಕೊಡಲಿಲ್ಲ. ಇವರು ಪೋಲೀಸ್ ರಕ್ಷಣೆಯಲ್ಲಿ ಮಾಡಲು ಬಯಸಿದರು. ಆದರೆ ಡಿ.ಸಿ., ಎಸ್.ಪಿ. ಬಂದು ಇವರ ಮುಂದೆ ಕೈಜೋಡಿಸಿ ಬೇಡಿಕೊಂಡರಂತೆ. "ಹಠ ಮಾಡಬೇಡಿ, ಮೆರವಣಿಗೆ ಮಾಡಬೇಡಿ." ಪ್ರಜಾಪ್ರಭುತ್ವ, ಸಂವಿಧಾನ ಏನು ಹೇಳಿದರೇನು ಇಂದು ನಮ್ಮ ದೇಶದಲ್ಲಿ ಕಾರ್ಯಾಂಗವೂ ಸಂಪ್ರದಾಯ ಪಾಲನೆಗೆ ಸೋತು ಶರಣಾಗಿದೆ.

ಕ್ರಾಂತಿ ಪುರುಷ ಬಸವಣ್ಣನವರು ಎಲ್ಲರಿಗೂ ಆಶಾಕಿರಣವಾಗಿದ್ದಾರೆ. ಆದ್ದರಿಂದ ಎಲ್ಲರ ಹಕ್ಕು ಬಾಧ್ಯತೆ ರಕ್ಷಿಸುವ ಬಸವಣ್ಣನವರ ಆಲಯಗಳು ಎಲ್ಲ ಜಾತಿಯವರಲ್ಲಿ ಆಗಬೇಕು. ಪ್ರತಿಯೊಬ್ಬರೂ ಅವರನ್ನು ಪೂಜಿಸಿ, ವಚನಗಳನ್ನು ಓದಿ ಮನಬುದ್ಧಿಗಳನ್ನು ಪಕ್ವಗೊಳಿಸಿಕೊಳ್ಳಬೇಕು. ಪೂಜೆಯ ಹಕ್ಕುಗಳು ಪುರೋಹಿತ ಪೂಜಾರಿಗಳ ಹಿಡಿತದಲ್ಲಿ ಕೇಂದ್ರೀಕೃತವಾಗಿದ್ದಾಗ ಹೇಗೆ ಇಷ್ಟಲಿಂಗದ

ಆವಿಷ್ಕಾರ, ವಿತರಣೆ ಮತ್ತು ಪೂಜೆಯ ಮೂಲಕ ಅರ್ಚನೆಯ ಅವಕಾಶವನ್ನು ಎಲ್ಲರಿಗೂ ಕೊಟ್ಟರೋ ಹಾಗೆ ಇಂದು, ವಿಶ್ವಗುರು ಬಸವಣ್ಣನವರನ್ನು ಎಲ್ಲರ ಬಳಿಗೆ ಒಯ್ಯಬೇಕು. ಏಕೆಂದರೆ ಅವರ ದಿವ್ಯ ಸಂದೇಶಗಳಿಂದ ಮಾನವನು ಪರಿಪೂರ್ಣನಾಗಬಲ್ಲ, ಅರ್ಥಾತ್ ಶರಣನಾಗಬಲ್ಲ; ಸಮಾಜವು ಸುಂದರ ಬಂಧುರ ಪರಿಪೂರ್ಣವಾಗಬಲ್ಲದು ಅರ್ಥಾತ್ ಕಲ್ಯಾಣರಾಜ್ಯ ನಿರ್ಮಾಣವಾಗಬಲ್ಲುದು. ಇದನ್ನರಿತು ಲಿಂಗಾಯತರು ಮತ್ತು ಲಿಂಗಾಯತೇತರರು ವಿಶ್ವಗುರು ಬಸವಣ್ಣನವರನ್ನು ಉಳಿಸಿಕೊಳ್ಳಬೇಕಾಗಿದೆ. ಹೆತ್ತ ಮಕ್ಕಳು ರಕ್ಷಿಸದಿದ್ದಾಗ ತಾಯಿ ತಂದೆ ಬೇರೆಯವರನ್ನು ದತ್ತು ತೆಗೆದುಕೊಂಡು ಸೇವೆ ಮಾಡಿಸಿಕೊಳ್ಳುವಂತೆ ಲಿಂಗಾಯತರು ಕ್ರಾಂತಿಪುರುಷ ಬಸವಣ್ಣನವರನ್ನು ಅರ್ಥಮಾಡಿಕೊಂಡು ಆರಾಧಿಸಿ ಅನುಸರಿಸದಿದ್ದರೇನಂತೆ ಇನ್ನಿತರ ಮಾನವ ಕುಲಕೋಟಿ ಬಸವಣ್ಣನವರನ್ನು ಅರಿತು, ಆರಾಧಿಸಿ, ಅನುಸರಿಸಿದರೆ ಸಾಕು. ಈ ಜಾಗೃತಿಯ ಕಾರ್ಯವನ್ನು ಎಲ್ಲರೂ ಮಾಡಬೇಕಾಗಿದೆ.

ಬಸವಾಯತ ದೀಕ್ಷೆ ಪಡೆಯಿರಿ

ಗುರು ಬಸವಣ್ಣನವರನ್ನು ದೇವನ ಪ್ರತಿನಿಧಿ ಎಂದು, ಗುರುವೆಂದು ನಂಬಿ, ಸುಪ್ರಭಾತದಲ್ಲಿ ಸ್ನಾನ ಮಾಡಿ, ಪೂಜಿಸಿ, 108 ಮಂತ್ರ ಪಠಣ ಮಾಡಬೇಕು. ವಚನ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ, ಪಾರಾಯಣ ಮಾಡಬೇಕು. ಆಹಾರದ ವಿಷಯದಲ್ಲಿ ಕಡ್ಡಾಯತೆ ಇರುವುದಿಲ್ಲ. ಸ್ವಯಂ ಪ್ರೇರಣೆಯಿಂದ ಸಸ್ಯಾಹಾರ ಜೀವನ ವಿಧಾನವನ್ನು ಅಳವಡಿಸಿಕೊಳ್ಳಬಹುದು. ಮಾಂಸಾಹಾರವನ್ನು ವರ್ಜಿಸುವ ಇಚ್ಛೆ ಪ್ರಬಲಗೊಂಡಾಗ ಇಷ್ಟಲಿಂಗದೀಕ್ಷೆಯನ್ನು ಪಡೆಯಬಹುದು. ಆವರೆಗೂ "ಬಸವಾಯತ" ದೀಕ್ಷೆ ಪಡೆದು ಆಧ್ಯಾತ್ಮಿಕ ಸಾಧನೆ ಮಾಡಲು ಎಲ್ಲ ಜಾತಿ ಮತ ಪಂಥಗಳವರಿಗೂ ವಿಪುಲ ಅವಕಾಶವಿರುತ್ತದೆ.

ಶರಣ ಮೇಳದ ಸಮಯದಲ್ಲಿ ಬಸವಾಯತ, ಲಿಂಗಾಯತ ಮತ್ತು ಕ್ರಿಯಾ ಮೂರ್ತಿ ದೀಕ್ಷೆ ಪಡೆಯುವವರಿಗೆ ಅವಕಾಶವಿರುತ್ತದೆ.

ಮರ ಮರ ಮಥನದಿಂದ ಅಗ್ನಿ ಹುಟ್ಟಿ
ಆ ಮರವನೆಲ್ಲವ ಸುಡದಿಪ್ಪುದೆ ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ,
ಎನ್ನ ತನುಗುಣವೆಲ್ಲವ ಸುಡದಿಪ್ಪುದೆ ?
ಇದು ಕಾರಣ, ಮಹಾನುಭಾವರ ತೋರಿಸು ಲಿಂಗದೇವಾ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನದ ವಿಡಿಯೋ ಸಿ.ಡಿ. ಮತ್ತು ಆಡಿಯೋ ಕೆಸೆಟ್ ಶರಣಮೇಳದಲ್ಲಿ ಬಿಡುಗಡೆಯಾಗಲಿವೆ.

1) ಪ್ರವಚನ ಎಂದರೇನು ?
- 1 ಭಾಗ 1 ಪ್ರವಚನ ಎಂದರೇನು ?
- 2. ಭಾಗ 2 ಪ್ರವಚನದ ವೈಶಿಷ್ಟ್ಯ
- 3. ಭಾಗ 3 ವಿಜ್ಞಾನಯುಗದಲ್ಲಿ ಧರ್ಮ ಬೋಧೆಯ ಅಗತ್ಯ

2) ಧರ್ಮದಗುರಿ
- 4. ಭಾಗ 1. ಧರ್ಮದ ಗುರಿ
- 5. ಭಾಗ 2. ಧರ್ಮ ಎಂದರೇನು ?
- 6. ಭಾಗ 3. ಧರ್ಮದ ಸ್ವರೂಪ
- 7. ಭಾಗ 4. ವಿಜ್ಞಾನ ಯುಗದಲ್ಲಿ ಧರ್ಮದ ಆವಶ್ಯಕತೆ ಇದೆಯೆ ?
- 8. ಭಾಗ 5. ಧರ್ಮದ ವಿವಿಧ ಆಯಾಮುಗಳು

3) ಅವತಾರ ಸಿದ್ಧಾಂತ
- 9. ಭಾಗ 1 ಅವತಾರ ಸಿದ್ಧಾಂತದ ವ್ಯಾಖ್ಯಾನ
- 10. ಭಾಗ 2 ಅವತಾರ ಸಿದ್ಧಾಂತ -ವಿವಿಧ ಪರಿಕಲ್ಪನೆ
- 11. ಭಾಗ 3 ಬಸವಣ್ಣನವರು ಅವತಾರ ಪುರುಷರು

4) ಮಾನವ ಜೀವನದ ಸಾರ್ಥಕತೆ.
- 12. ಭಾಗ 1 ಮಾನವ ಜೀವನದ ಸಾರ್ಥಕತೆ
- 13. ಭಾಗ 2 ಸಂಸಾರ - ಪಾರಮಾರ್ಥ ಸಂಯೋಗ

5) 14. ಬಸವಣ್ಣನವರ ಜನನ

6) 15. ಭಾಗ 1 ಬಸವಣ್ಣನವರ ಬಾಲ್ಯ
- 16. ಭಾಗ 2 ಬಸವಣ್ಣನವರ ಬಾಲ್ಯ ಉದಯರವಿ

7) ಆದರ್ಶ ಶಿಕ್ಷಣ
- 17. ಶಿಕ್ಷಣ ಎಂದರೇನು ?
- 18. ಸಮಗ್ರ ಶಿಕ್ಷಣ
- 19 ಶಿಕ್ಷಣದ ಗುರಿ

8) 20 ಬಸವಣ್ಣನವರ ಪವಾಡಗಳು
- 21 ಪವಾಡಗಳ ಹಿಂದಿನ ತತ್ತ್ವದರ್ಶನ

9) 22. ದೇವರ ಅಸ್ತಿತ್ವ

ಮೊದಲು ಬಿಡುಗಡೆಯಾಗಿರುವ ಆಡಿಯೋ ಸಿ.ಡಿ.ಗಳು

ಭಾಗ - 1

1. ಲಿಂಗಾಗ ಯೋಗ
2. ಲಿಂಗಾಯತ -ವೀರಶೈವ ಬೇರೆ ಬೇರೆ (ಎರಡು ಭಾಗ ಇರುವವು)
3. ಪಂಚ ಸಂಜ್ಞೆಗಳು
4. ಷಟ್‌ಸ್ಥಲ
5. ಅವತಾರ ಸಿದ್ಧಾಂತ
6. ಲಿಂಗಾಯತ ಧರ್ಮ ಸ್ವತಂತ್ರ ಧರ್ಮ
7. ಲಿಂಗದೇವನ ಲೀಲಾ ವಿಶೇಷ
8. ಲಿಂಗಾಯತ ಧರ್ಮದ ಷಟ್‌ಸೂತ್ರಗಳು
9. ವಿಶ್ವಗುರು ಬಸವಣ್ಣನವರ ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವ (3ಭಾಗ ಇರುವವು)
10. ಪಂಚ ಆಚಾರಗಳು
11. ಅಷ್ಟಾವರಣ
12. ಪ್ರಗತಿಪರ ಧರ್ಮ
13. ವಿಶ್ವಗುರು ಬಸವಣ್ಣನವರ ಸಮಗ್ರ ಜೀವನ ಚರಿತ್ರೆ
14. ಶ್ರೀ ಬಸವೇಶ್ವರ ಪೂಜಾ ವ್ರತ

★★★★★★★★★★

ಪೂಜ್ಯ ಮಾತಾಜಿಯವರ ವೀಡಿಯೋ ಸಿ.ಡಿ

1. ಅರ್ಚನಾ (ಇಷ್ಟಲಿಂಗ ಪೂಜೆ)
2. ವಿಶ್ವಗುರು ಬಸವಣ್ಣನವರ ಸಮಗ್ರ ಜೀವನ ಚರಿತ್ರೆ

ಷಟ್ ಶೀಲಗಳಲ್ಲಿ ಒಂದು -ಶರಣ ಮೇಳ ನಿಷ್ಠೆ

ಷಟ್ ಸಂಜ್ಞೆಗಳು 866666. ಇದರಲ್ಲಿ 5ನೆಯ ಸಂಖ್ಯೆಯು 6 ಶೀಲಗಳನ್ನು ಪ್ರತಿನಿಧಿಸುತ್ತದೆ. ಅದರಲ್ಲಿ ಶರಣ ಮೇಳ ನಿಷ್ಠೆ 6ನೆಯದು. ಇದನ್ನು ಆಚರಣೆಗೆ ತರಲು ನನಗೆ ಪ್ರೇರಣೆ ನೀಡಿದ್ದು ಮುಸಲೀಮರ ಹಜ್ ಮತ್ತು ವಾರಕರಿ ಪಂಥದವರ ದಿಂಡಿಯಾತ್ರೆ. ಮುಸಲೀಮರ ಹಜ್ ಬಗ್ಗೆ ವಾರ್ತಾಪತ್ರಿಕೆ ಮತ್ತು ಪುಸ್ತಕ ಮೂಲಕ ಬಹಳ ಮೊದಲೇ ತಿಳಿದಿತ್ತು. ಆದರೆ ಆ ನಿಷ್ಠೆ ನಮ್ಮ ಜನರಲ್ಲಿ ಎಲ್ಲಿ ಬರುವುದು ಎಂದು ಪ್ರಯತ್ನ ಮಾಡಿರಲಿಲ್ಲ. 1987 ಜುಲೈದಲ್ಲಿ (24ನೇ ದಿನಾಂಕ ಇರಬಹುದು) ಬೆಂಗಳೂರಿನಿಂದ ಬಾಗಲಕೋಟೆಗೆ ಟ್ರೇನಿನಲ್ಲಿ ಹೋಗುತ್ತಿರುವಾಗ ಭೇಟಿಯಾದ ವಾರಕರಿ ಸಂತರಾದ ಭದ್ರಾವತಿಯ ಶ್ರೀ ನಾಮದೇವ ಸ್ವಾಮೀಜಿಯವರು ದರ್ಶನ ಪಡೆಯಲು ಒಂದು ಪ್ರತಿವರ್ಷವೂ ವರ್ಷದಲ್ಲಿ 2ಸಲ ಪಂಢರಾಪುರಕ್ಕೆ ಹೀಗೆ ಹೋಗುವುದಾಗಿ ಹೇಳಿದಾಗ ನಾವೂ ಒಂದು ಪ್ರಯತ್ನ ಮಾಡಬಾರದೇಕೆ ಎಂದು ಪ್ರೇರಣೆಯಾಗಿ 1988 ರಲ್ಲಿ ಮೊದಲ ಶರಣ ಮೇಳವನ್ನು ಮಾಡಲು ನಿಶ್ಚಯಿಸಿದೆವು. ಈ ವರೆಗೆ 18 ಶರಣ ಮೇಳಗಳು ಯಶಸ್ವಿಯಾಗಿ ನಡೆದು ಈಗ 19ನೆಯ ಶರಣ ಮೇಳಕ್ಕೆ ಸಿದ್ಧರಾಗುತ್ತಿದ್ದೇವೆ.

ಶರಣ ಮೇಳವು ಒಂದು ರೀತಿಯಲ್ಲಿ ಪುನಶ್ಚೇತನ ಶಿಬಿರವಿದ್ದಂತೆ. ಎಷ್ಟೇ ಕೆಲಸ ಕಾರ್ಯಗಳಿರಲಿ 5 ದಿವಸಗಳನ್ನು ಶರಣ ಬಂಧುಗಳು ಇದಕ್ಕಾಗಿ ಮೀಸಲಿಡಬೇಕು. ಬರಲು-ಹೋಗಲು ಎರಡು ದಿವಸ. ಹೀಗೆ ಜನವರಿ 10ರಿಂದ 16ರವರೆಗೆ ಆ ಸಮಯ ಶರಣ ಮೇಳ ಸಪ್ತಾಹ. ದೆಹಲಿ, ಉತ್ತರದ ರಾಜ್ಯ, ಮುಸಲೀಮರ ಮೆಕ್ಕಾ ಹವಾಮಾನದ ವೈಪರೀತ್ಯಗಳಿರುವ ಭೂ ಪ್ರದೇಶಗಳು. ಆ ದೃಷ್ಟಿಯಿಂದ ಕರ್ನಾಟಕದ ಕೂಡಲಸಂಗಮ ಕ್ಷೇತ್ರವು ಉತ್ತಮ ಹವಾಮಾನ ಹೊಂದಿದೆ.

ತಾವೊಬ್ಬರೇ ಬರುವುದಲ್ಲ ಪ್ರತಿಯೊಬ್ಬರೂ ತಮ್ಮೊಡನೆ ಕನಿಷ್ಠ ಒಬ್ಬೊಬ್ಬರನ್ನಾದರೂ ಪ್ರೇರೇಪಿಸಿ ಕರೆತರಬೇಕು. ನಾವು ಇನ್ನು ಮೇಲೆ ಹೆಚ್ಚು ಹೆಚ್ಚು ಲೌಕಿಕ ಅತಿಥಿಗಳನ್ನು ಆಹ್ವಾನಿಸದೆ ಧಾರ್ಮಿಕ, ಅಧ್ಯಾತ್ಮಿಕ, ವಿಷಯಗಳ ನಿರೂಪಣೆಗೆ ಹೆಚ್ಚಿನ ಸಮಯ ಕೊಡಲು ನಿರ್ಧರಿಸಿದ್ದೇವೆ. ಸಾಂಕೇತಿಕವಾಗಿ ಕೆಲವರನ್ನು ಆಹ್ವಾನಿಸಿ ವಿಷಯ ನಿರೂಪಣೆಗೆ ನಮ್ಮ ಶರಣ ಸಮೂಹದಲ್ಲಿ ಇರುವವರನ್ನೇ ಆಯ್ಕೆ ಮಾಡಲಾಗುವುದು.

ಸ್ಪರ್ಧೆಗಳು :

1. ಹಿಂದಿನ ಶರಣ ಮೇಳದಲ್ಲಿ ಆರಂಭಿಸಿದ ಧಾರ್ಮಿಕ ರಸ ಪ್ರಶ್ನೆಯ ಸ್ಪರ್ಧಾ ಕಾರ್ಯಕ್ರಮವನ್ನು ಈ ವರ್ಷವೂ ಮುಂದುವರಿಸಿ ಶೀಲ್ಡ್ ಮತ್ತು ನಗದು ಬಹುಮಾನವನ್ನು ಕೊಡಲಾಗುವುದು.
2. 19ನೆಯ ಶರಣಮೇಳದಿಂದ ವಚನ ಭಜನಾ ಪಂಚ ದಿನೋತ್ಸವದೊಡನೆ ವಚನ ಭಜನಾ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಶೀಲ್ಡ್ ಮತ್ತು ನಗದು ಬಹುಮಾನವನ್ನು ವಿತರಿಸಲಾಗುವುದು.
3. ರಾಷ್ಟ್ರೀಯ ಬಸವ ದಳದವರ ಸೇವಾಸ್ಪರ್ಧೆಯನ್ನು ಏರ್ಪಡಿಸಲಾಗುವುದು. ವಿವಿಧ ರಾಷ್ಟ್ರೀಯ ಬಸವದಳದ ಘಟಕಗಳಿಗೆ ವಿವಿಧ ಸೇವಾ ಕಾರ್ಯಗಳನ್ನು ವಹಿಸಿಕೊಟ್ಟು ಉತ್ತಮ ರೀತಿಯಲ್ಲಿ ಸೇವೆಮಾಡಿದ ಘಟಕಗಳಿಗೆ ಶೀಲ್ಡ್ ಮತ್ತು ನಗದು ಬಹುಮಾನವನ್ನು ನೀಡಲಾಗುವುದು.

ಎಲ್ಲಾ ಶರಣ ಬಂಧುಗಳು ತಪ್ಪದೆ ಎಲ್ಲಾ ಕಾರ್ಯಕ್ರಮಗಳಲ್ಲಿ ನಿಷ್ಠೆಯಿಂದ ಭಾಗವಹಿಸಬೇಕು.

– ಮಾತಾಜಿ

ಜನವರಿ ೧೪ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದಂದು ಸಮುದಾಯ ಪ್ರಾರ್ಥನೆ-ಕೆಲವು ನಿಯಮಗಳು

ಶರಣ ಮೇಳದ ೫ ದಿವಸಗಳ ಕಾಲ ಜನವರಿ ೧೧ ರಿಂದ ೧೫ ರ ವರೆಗೆ ಪೂರಾ ಭಾಗವಹಿಸಲು ಆಗದೆ ಇದ್ದವರು ಸಹ ಮಕರ ಸಂಕ್ರಾಂತಿ ಲಿಂಗಾಯತ ಧರ್ಮ ಸಂಸ್ಥಾಪನ ದಿನದಂದು ಬೆಳಿಗ್ಗೆ ೧೦ ರಿಂದ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವ ನೇಮ, ರೂಢಿಯನ್ನು ಬೆಳೆಸಿಕೊಳ್ಳಬೇಕು.

ದಿ. ೧೪ ರಂದು ಪೆಂಡಾಲಿನಲ್ಲಿ ಎರಡು ವಿಭಾಗಗಳನ್ನು ಮಾಡಲಾಗುವುದು. ವೇದಿಕೆಯ ಸಮೀಪ ಮುಂದಿನ ಭಾಗದಲ್ಲಿ ಕುಳಿತುಕೊಳ್ಳುವವರು ಕಡ್ಡಾಯವಾಗಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು. ಕಾವಿಯ ಸ್ಕಾರ್ಫ್ ಹೊದ್ದಿರಬೇಕು. ಬಣ್ಣದ ಬಟ್ಟೆ ತೊಟ್ಟವರನ್ನು ಸ್ಕಾರ್ಫ್ ಹೊದ್ದಿದ್ದರೂ ಸಹ ಪೆಂಡಾಲಿನೊಳಗೆ ಹೊರಗಿನ ಸುತ್ತಿನಲ್ಲಿ ಕುಳ್ಳಿರಿಸಲಾಗುವುದು. ಕೆಲವಾರು ವರ್ಷಗಳ ಬಳಿಕ ಪ್ರವೇಶವನ್ನು ಕೊಡಲಾಗುವದಿಲ್ಲ. ಬಿಳಿಯ ವಸ್ತ್ರ ಗೃಹಸ್ಥರಿಗೆ, ಕಾವಿಯ ವಸ್ತ್ರ ಸನ್ಯಾಸಿಗಳಿಗೆ ಕಡ್ಡಾಯವಾಗಿ ಮಾಡಲ್ಪಡುವುದು.

ಇಷ್ಟಲಿಂಗ ಧಾರಣೆ ಕಡ್ಡಾಯ: ಒಳಸುತ್ತಿನಲ್ಲಿ ಪ್ರಾರ್ಥನೆಗೆ ಕುಳಿತು ಕೊಂಡವರು ಇಷ್ಟಲಿಂಗವನ್ನು ಎದೆಯ ಮೇಲೆ ಹೊರಗೆ ಕಾಣುವಂತೆ ಹಾಕಿಕೊಳ್ಳಬೇಕು. ಆದ್ದರಿಂದ ಬಟ್ಟೆಯಲ್ಲಿ ಕಟ್ಟಿಕೊಳ್ಳುವವರು ಹೊಸ ಬಟ್ಟೆಯಲ್ಲಿ, ಬಟ್ಟೆಯ ಚೀಲದಲ್ಲಿ ಹಾಕಿಕೊಳ್ಳುವವರು ಅಂದು ಹೊಸ ಚೀಲವನ್ನು ಖರೀದಿಸಿ ಹಾಕಿಕೊಳ್ಳಬೇಕು. ಶರಣ ಮೇಳ ಉತ್ಸವ ಸಮಿತಿಯ ಬುಕ್ ಸ್ಟಾಲಿನಲ್ಲಿ ಬಟ್ಟೆಯ ಚೀಲಗಳು ಮಾರಾಟಕ್ಕೆ ಲಭ್ಯವಿರುತ್ತವೆ. ಬೆಳ್ಳಿಯ, ಕಟ್ಟಿಗೆಯ ಕರಡಿಗೆಗಳಲ್ಲಿ ಕಟ್ಟಿಕೊಳ್ಳುವವರು ಶಿವದಾರವನ್ನು ಬದಲಿಸಿ, ವಿಭೂತಿ ಪುಡಿಯಿಂದ ಕರಡಿಗೆಗಳನ್ನು ತಿಕ್ಕಿ ತೊಳೆದು ಚೆನ್ನಾಗಿ ಮಾಡಿಕೊಳ್ಳಬೇಕು.

[ವರ್ಷಕ್ಕೊಮ್ಮೆ ವೈದಿಕರು ಜನಿವಾರವನ್ನು ಬದಲಿಸುವ ಹಬ್ಬವನ್ನು ಆಚರಿಸುವರು. ಅನೇಕ ಲಿಂಗಾಯತರನ್ನು ಒಮ್ಮೆಗೇ ಪರೀಕ್ಷಿಸಿದಾಗ ಇಷ್ಟಲಿಂಗ ಕಟ್ಟಿರದೇ ಸಿಕ್ಕಿ ಬೀಳುವರು. ಆಗ ಅವರು ಕೊಡುವ ಕಾರಣ ಶಿವದಾರ ಹರಿದು ಹೋಗಿದೆ; ತಂದು ಹಾಕಿಕೊಳ್ಳಲು ಆಗಿಲ್ಲ. ಆದ್ದರಿಂದ ಲಿಂಗಾಯತ ಧರ್ಮ ಸಂಸ್ಥಾಪನೆಯ ದಿವಸ ಹೊಸ ಶಿವದಾರವನ್ನು ಹಾಕಿಕೊಳ್ಳುವುದನ್ನು ರೂಢಿಗೆ ತಂದರೆ ಶಿವದಾರ ಹರಿದ ನೆಪ ಹೇಳಲು ಆಗದು. ಬಹಳ ಸಮಯದಿಂದ, ಹರಿಯದೇ ಇದ್ದರೂ ವೈದಿಕರು ಜನಿವಾರವನ್ನು ಬದಲಿಸುವಂತೆ ಲಿಂಗಾಯತರು ಶಿವದಾರವನ್ನು ಬದಲಾಯಿಸಲು ಒಂದು ನಿಶ್ಚಿತ ದಿನವಿದ್ದರೆ ಒಳ್ಳೆಯದು ಎಂಬ ಆಲೋಚನೆ ನನಗಿತ್ತು. ಬಹುಶಃ ಲಿಂಗಾಯತ ಧರ್ಮವು ಹುಟ್ಟಿದ ದಿನವೇ ಆದಕ್ಕೆ ಸೂಕ್ತ.

ಸಮುದಾಯ ಪ್ರಾರ್ಥನೆಯ ನಂತರ ಪ್ರತಿಯೊಬ್ಬರೂ "ಲಿಂಗಾಯತ ಧರ್ಮವು ಹಬ್ಬಿ ಹಸರಿಸಲಿ; ಬಸವಾದಿ ಪ್ರಮಥರ ತತ್ವ ಸಂದೇಶ ಎಲ್ಲೆಡೆ ಹರಡಲಿ. ಇದಕ್ಕೆ ನನ್ನ ಕೊಡುಗೆ ನಿರಂತರವಾಗಿರಲಿ." ಎಂದು ಸಂಕಲ್ಪಿಸಿ ಗುರು ಕಾಣಿಕೆಯನ್ನು ತಮ್ಮ ಶಕ್ತ್ಯಾನುಸಾರ ಸಾಧಕರು ತರುವ ಬಿಂದಿಗೆಗಳಲ್ಲಿ ಹಾಕಬೇಕು. ಮತ್ತು ವಿತರಿಸಲಾಗುವ ಕುಸುರೆಳ್ಳನ್ನು ಪ್ರಸಾದವಾಗಿ ಸ್ವೀಕರಿಸಬೇಕು.

ಭಾರತೀಯ ಧರ್ಮಗಳ ಮಹಾಸಂಘ(ಒಕ್ಕೂಟ)
Federation of Indian Religions

ಬಹಳ ದಿನಗಳ ಒಂದು ಅಪೇಕ್ಷೆ ದಿ.25-11-2005 ಶುಕ್ರವಾರದಂದು ಪೂರೈಸಿತು. ಅದು ಭಾರತೀಯ ಧರ್ಮಗಳ ಮಹಾಸಂಘ, Federation of Indian Religions -ಇದರ ಸ್ಥಾಪನೆ. ಆಧ್ಯಾತ್ಮಿಕ ಸಂಪತ್ತಿನಿಂದ ಕೂಡಿದ ದೇಶ ಭಾರತ. ಈ ದೇಶವು ಹಲವಾರು ಧರ್ಮಗಳಿಗೆ ಮುಖ್ಯವಾಗಿ ಶೈವ-ವೈದಿಕ ಪರಂಪರೆಯ ಮಿಶ್ರಣವಾದ ಹಿಂದು, ಜೈನ, ಬೌದ್ಧ ಲಿಂಗಾಯತ ಮತ್ತು ಸಿಖ್(ಐತಿಹಾಸಿಕ ಕಾಲಾನುಕ್ರಮದ ಪ್ರಕಾರ ಬರೆಯಲಾಗಿದೆ) ಧರ್ಮಗಳಿಗೆ ಜನ್ಮ ನೀಡಿದೆ. ಈ ಐದೂ ಧರ್ಮಗಳವರಿಗೆ ಭಾರತವು ಧರ್ಮಭೂಮಿ. ಈ ಧರ್ಮಗಳ ಅನುಯಾಯಿಗಳು ಬೇರೆಬೇರೆ ರಾಷ್ಟ್ರಗಳಲ್ಲಿ ನೆಲೆಸಿ ಅಲ್ಲಿಯ ನಾಗರಿಕತ್ವ ಸ್ವೀಕರಿಸಬಹುದು; ಆದರೆ ಈ ಎಲ್ಲ ಧರ್ಮಾನುಯಾಯಿಗಳಿಗೆ ಭಾರತವೇ ಧರ್ಮಭೂಮಿ. ಈ ಐದೂ ಧರ್ಮಗಳು ಸ್ವತಂತ್ರ ಧರ್ಮಗಳು ಮಾತ್ರವಲ್ಲ ಭಾರತದ ಸಮಗ್ರತೆ, ಭಾರತೀಯ ಸಂಸ್ಕೃತಿಯ ರಕ್ಷಣೆಯ ಬಗ್ಗೆ ಕಾಳಜಿಯುಳ್ಳವು. ಪರಸ್ಪರ ಕೆಲವೊಂದು ವಿಚಾರ ಭಿನ್ನಾಭಿಪ್ರಾಯ, ಸೈದ್ಧಾಂತಿಕ ವ್ಯತ್ಯಾಸ ಇದ್ದರೂ ಸಮಾನ ಅಂಶಗಳನ್ನೂ ಹೊಂದಿವೆ. ಆದ್ದರಿಂದ ಎಲ್ಲರೂ ಒಟ್ಟಾಗಿ ಭಾರತೀಯ ಮೌಲ್ಯಗಳನ್ನು ರಕ್ಷಿಸಲು, ಮುಂದಿನ ಪೀಳಿಗೆಗೆ ಸಂವಹನ ಮಾಡುವ ಉದ್ದೇಶದಿಂದ "ಭಾರತೀಯ ಧರ್ಮೀಂಕಾ ಮಹಾ ಸಂಘ"ವನ್ನು ನೋಂದಾಯಿಸಲಾಗಿದೆ. ಸಧ್ಯದಲ್ಲಿ ಕೆಳಕಂಡ ಸದಸ್ಯರನ್ನು ಹೊಂದಿದ್ದು ಇನ್ನೂ ಹೆಚ್ಚಿನ ಸದಸ್ಯರನ್ನು ಆಹ್ವಾನಿಸುವ ಅಪೇಕ್ಷೆ ಹೊಂದಿದೆ.

1. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ - ಸಂಸ್ಥಾಪಕ ಅಧ್ಯಕ್ಷರು
2. ಶ್ರೀ ಸತ್ ನಾಮ್ ಸಿಂಗ್ ಉಪ್ಪಲ್ - ಸೆಕ್ರೆಟರಿ ಜನರಲ್
3. ಪೂಜ್ಯ ಶ್ರೀ ಗೌರವಾನ್ವಿತ ಲಾಮಾ ಲೋಬ್ ಜಂಗ್, ಬೌದ್ಧ ಸಮಾಜ ನೇತಾರರು - ಉಪಾಧ್ಯಕ್ಷರು
4. ಪೂಜ್ಯ ಆಚಾರ್ಯಾ ಡಾ॥ಸಾಧ್ವಿ ಸಾಧನಾಜಿ, ಶ್ರೀ ಸುಶೀಲ್ ಮುನೀಜಿ ಆಶ್ರಮ - ಉಪಾಧ್ಯಕ್ಷರು
5. ಪೂಜ್ಯ ಚನ್ನಬಸವಾನಂದ ಸ್ವಾಮಿಗಳು - ಕಾರ್ಯದರ್ಶಿ
6. ಶ್ರೀ ರಾಮ್‌ಪಾಲ್‌ಸಿಂಗ್ ಮೀರಟ್, ಹಿಂದೂ ಸಮಾಜದ ಮುಖಂಡರು - ಸಂಘಟಕರು
7. ಶ್ರೀಮತಿ ಎಸ್.ಜಿ.ಸುಶೀಲಮ್ಮ, ಅಧ್ಯಕ್ಷೆ, ಸುಮಂಗಲಿ ಸೇವಾಶ್ರಮ - ಸದಸ್ಯರು
8. ಶ್ರೀ ಪೂರಣ್ ಚಂದ್ ದೌಲತ್ ರಾಮ್, ದಲಿತ ನೇತಾರರು - ಸಂಘಟಕರು
9. ಶ್ರೀ ಗುರು ಮಹಾಂತೇಶಯ್ಯ ಹಿರೇಮಠ್, ದೆಹಲಿ - ಕೋಶಾಧ್ಯಕ್ಷರು

ವಿವಿಧ ಧರ್ಮಗಳಲ್ಲಿರುವ ತಾತ್ತ್ವಿಕ ವಿಷಯಗಳನ್ನು ಚರ್ಚಿಸುವ ವಿಚಾರಗೋಷ್ಠಿ ಏರ್ಪಡಿಸುವುದು; ಭಾರತೀಯ ಸಂಸ್ಕೃತಿಗೆ ವಿಮುಖರಾಗುತ್ತಿರುವ ಸ್ವಧರ್ಮೀಯ ಯುವ ಜನಾಂಗದಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸುವುದು, ಸಾಮಾಜಿಕ ದೌರ್ಜನ್ಯ ತಿರಸ್ಕಾರದಿಂದ ಭಾರತೀಯ ಸಂಸ್ಕೃತಿಯಿಂದ ಮತಾಂತರದ ಮೂಲಕ ಹೊರಹೋಗುತ್ತಿರುವ ದಲಿತ, ಶೂದ್ರಾದಿಗಳನ್ನು ಆದರದಿಂದ ಕಂಡು ದೇಶೀಯ ಪರಂಪರೆಯ ಬಗ್ಗೆ ಅಭಿಮಾನ ಮೂಡಿಸುವುದು; ಮತಾಂತರಗೊಳ್ಳದಂತೆ, ಮತಾಂತರದಿಂದ ಹೊರ ಹೋದವರನ್ನು ಒಳಗೆ ಬರುವಂತೆ ಪ್ರೇರೇಪಿಸುವುದು; ಅಜ್ಞಾನ ಮೌಢ್ಯತೆಯಿಂದ ಘಾಸಿಯಾಗುತ್ತಿರುವ ಭಾರತೀಯರಲ್ಲಿ ವೈಚಾರಿಕತೆ ಬೆಳೆಸುವುದು ಮುಂತಾದ ಧ್ಯೇಯ ಹೊಂದಿ ಈ ಟ್ರಸ್ಟ್ ರಚನೆಯಾಗಿರುವುದು ಒಂದು ವಿಶೇಷ

ಬಸವ ಧರ್ಮ ಸಂಸತ್-ಪುನಶ್ಚೇತನ

ಇದೇ ಕಲ್ಯಾಣ ಕಿರಣದಲ್ಲಿ "ಬಸವ ಧರ್ಮ ಸಂಸತ್" ದ ಪರಿಕಲ್ಪನೆಯನ್ನು ಅನೇಕರು ಲೇಖನ ಬರೆದಿದ್ದೇನೆ. ತತ್ತ್ವ ಅರ್ಥ ಮಾಡಿಕೊಳ್ಳಲಿಲ್ಲ ಎಂಬ ನಿರಾಶೆಯನ್ನು ವ್ಯಕ್ತಪಡಿಸಿ ನಾನು ಲೇಖನ ಬರೆದಿದ್ದೇನೆ. ನಿಷ್ಠರಲ್ಲದ ಅನೇಕರನ್ನು ಅವರಿವರ ಒತ್ತಾಯದಿಂದ ದಾಕ್ಷಿಣ್ಯಕ್ಕೆ ಒಳಗಾಗಿ ನಾವು ತೆಗೆದುಕೊಂಡದ್ದು ಆ ಪರಿಕಲ್ಪನೆ ಅಪೂರ್ಣವಾಗಲು ಕಾರಣವಾಯಿತು. ಈ ಲೋಪವನ್ನು ತಿದ್ದಿಕೊಂಡು ಬಸವ ಧರ್ಮ ಸಂಸತ್ತನ್ನು ಪುನಃ ರಚಿಸುವ ಸಂಕಲ್ಪ ಮಾಡಲಾಗಿದೆ. ಎಲ್ಲರೂ ತಮ್ಮ ತಮ್ಮ ಮನೆಯ ಚಿಂತೆಯನ್ನೇ ಮಾಡಿದರೆ ಇಡೀ ಸಮಾಜದ, ಧರ್ಮದ ಚಿಂತನೆಯನ್ನು ಯಾರು ಮಾಡಬೇಕು ? ಕ್ರೈಸ್ತರಲ್ಲಿ ವ್ಯಾಟಿಕನ್‌ದ ಪೋಪರಿಂದ ಹಿಡಿದು ಕುಗ್ರಾಮದ ಓರ್ವ ಪಾದ್ರಿಯವರೆಗೆ ಧರ್ಮದ ಜಾಲ ಹರಡಿದ್ದು ಅವರು ತಮ್ಮ ಸಮಾಜ-ಧರ್ಮಗಳ ಆಗು ಹೋಗಿನ ಬಗ್ಗೆ ಚಿಂತಿಸಬಲ್ಲವರಾಗಿದ್ದಾರೆ. ಸಿಖ್ಖರಲ್ಲಿ ಗುರುದ್ವಾರಗಳ ಮುಖ್ಯಸ್ಥರು ಅಮೃತ ಸರದ ಪ್ರಬಂಧಕ ಸಮಿತಿ ಇಡೀ ಸಮಾಜದ ಜವಾಬ್ದಾರಿ ಹೊತ್ತಿದೆ. ಹೀಗಾಗಿ ಚಿಂತನ ಶೀಲರ ಒಂದು ಸಮಿತಿ ಅತ್ಯಗತ್ಯವಿದೆ. ಈ ಸಂಸತ್ತಿನ ಸದಸ್ಯರು ಕೆಲವು ನಿಯಮ-ನಿಬಂಧನೆಗಳಿಗೆ ಒಳಪಡಬೇಕಾಗುತ್ತದೆ.

1. ಬಸವ ಧರ್ಮ ಪೀಠದ ಆದರ್ಶ, ಆದೇಶಗಳಿಗೆ ಬದ್ಧರಾಗಿರಬೇಕು.

ಕೆಲವೊಂದು ನಿರ್ಣಯಗಳನ್ನು ಶರಣರ ಜೊತೆಗೆ ಚರ್ಚಿಸಿದ ನಂತರ ತೆಗೆದುಕೊಳ್ಳಲಾಗುತ್ತದೆ, ಕೆಲವನ್ನು ಪರಿಸ್ಥಿತಿಯ ಒತ್ತಡದಿಂದಲೋ ಅಥವಾ ಮೊದಲೇ ಬಹಿರಂಗ ಪಡಿಸಬಾರದು ಎಂಬ ಉದ್ದೇಶದಿಂದಲೋ ಘೋಷಿಸಿ, ಬಹಿರಂಗ ಪಡಿಸಲಾಗುತ್ತದೆ. ಅಂಥ ವಿಷಯಗಳ ಬಗ್ಗೆ ಸಂದೇಹ ಪಡದೆ, ಗದ್ದಲ ಎಬ್ಬಿಸದೆ ಸಂದೇಹ ಉಂಟಾದರೆ ಮುಂದಿನ ಸಭೆ ಸೇರಿದಾಗಲೋ ಅಥವಾ ವೈಯಕ್ತಿಕವಾಗಿ ಬಂದು ನೇರವಾಗಿ ಪೀಠಾಧೀಶರನ್ನು ಕಂಡು ಚರ್ಚಿಸಬೇಕು. ಇದಕ್ಕೆ ಲಿಂಗದೇವ ಪ್ರಸಂಗ ಜ್ವಲಂತ ಉದಾಹರಣೆ. ಹಗಲು ನಾಲ್ಕು ಜಾವ ಇರುಳು ನಾಲ್ಕು ಜಾವ ಎಷ್ಟೋ ಜನರು ಅಶನ, ವ್ಯಸನ, ಧನ ಸಂಪಾದನೆಗೆ ಚಿಂತಿಸುವಾಗ ಧರ್ಮ-ಸಮಾಜಗಳ ಪುನಶ್ಚೇತನಕ್ಕೆಂದೇ ತನು-ಮನ-ಧನ-ಸಮಯ-ಅಭಿಮಾನ- ಪ್ರಾಣ ಎಂಬ ಷಡಂಗಗಳನ್ನು ಮೀಸಲಿಟ್ಟವರ ಬಗ್ಗೆ ಸಂದೇಹ ಪಡುವ ಮೂರ್ಖತನವನ್ನು ಕೆಲವರು ಮಾಡಿದರು. ಒಂದು ದೃಷ್ಟಿಯಿಂದ "ಜೋ ಕುಚ್ ಹುವಾ ಅಚ್ಛಾ ಕೇ ಲಿಯೇ ಹುವಾ." ಆಗುವುದೆಲ್ಲ ಒಳ್ಳೆಯದಕ್ಕೆ ಎಂಬಂತೆ ಭಿನ್ನ ವಿಚಾರದವರು ದೂರವಾಗಿ ಒಂದು ವಿಚಾರದವರ ಸಂಘಟನೆ ಆದುದು ಬಸವಾದಿ ಪ್ರಮಥರ ಸಂಕಲ್ಪವೇ ಇರಬಹುದು ಎನಿಸುತ್ತದೆ. ಮುಂದೆ ಈ ರೀತಿ ಆಗಬಾರದು ಎಂದಿದ್ದರೆ ಬಸವ ಧರ್ಮಪೀಠದ ನಿರ್ಣಯ, ಆದೇಶಗಳಲ್ಲಿ ನಂಬಿಕೆ ಇಡಬೇಕು.

2. ಶರಣ ಮೇಳ ಮತ್ತು ಕಲ್ಯಾಣ ಪರ್ವಗಳಲ್ಲಿ ಭಾಗವಹಿಸುವುದು

ಇದು ಸದಸ್ಯರಿಗೆ ಕಡ್ಡಾಯವಾಗಿರುತ್ತದೆ. ದೆಹಲಿ ಅಥವಾ ಇನ್ನಿತರ ನಗರಗಳಲ್ಲಿ ನಡೆಯಬಹುದಾದ ಸಮ್ಮೇಳನದಲ್ಲಿ ಭಾಗಿಗಳಾಗುವುದು ಐಚ್ಛಿಕ (optional). ಅವರ ಅನುಕೂಲತೆ ಪ್ರಕಾರ ಭಾಗವಹಿಸಬಹುದು ಆದರೆ ಶರಣ ಮೇಳ ಮತ್ತು ಕಲ್ಯಾಣಪರ್ವಗಳಲ್ಲಿ ಪೂರ್ಣ ಸಮಯದವರೆಗೆ ಭಾಗವಹಿಸಲೇಬೇಕು.

3. ಶರಣ ಮೇಳ, ಕಲ್ಯಾಣ ಪರ್ವ ನಿರ್ವಹಣೆ

ತಾವು ವೈಯಕ್ತಿಕವಾಗಿ ಕಾಣಿಕೆ ಕೊಡುವುದೇ ಅಲ್ಲದೆ ದೇಣಿಗೆ ಸಂಗ್ರಹ ಮಾಡಲು ಪ್ರಯತ್ನಿಸಬೇಕು. ಏಕೆಂದರೆ ಇವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಬಸವ ಧರ್ಮ ಸಂಸತ್ ಸದಸ್ಯರು ಹೊರುವಂತೆ ಆಗಬೇಕು. ಇಷ್ಟೇ ಸಂಗ್ರಹಿಸಬೇಕೆಂಬ ಕಡ್ಡಾಯತೆ ಇಲ್ಲ.

4. ಗುರು-ಲಿಂಗ-ಜಂಗಮ ನಿಷ್ಠೆ

ಗುರು(ಬಸವಣ್ಣ), ಲಿಂಗದೇವ(ಇಷ್ಟಲಿಂಗ), ಜಂಗಮ(ಬಸವರೇ ಆದಿ ಪ್ರಮಥರಾಗಿ ಸಾಗಿ ಬಂದಿರುವ ಶರಣ ಪರಂಪರೆಯ ಜಂಗಮ ಜ್ಯೋತಿಗಳು (ಲಿಂಗೈಕ್ಯ ಶರಣರು) ಮತ್ತು ಜಂಗಮ ಮೂರ್ತಿಗಳು (ಬಸವ ಧರ್ಮಾನುಸಾರ ನಡೆಯುವ ತ್ಯಾಗಿಗಳು) ಹೊರತಾಗಿ ಅನ್ಯ ದೇವತೆಗಳ ಅರ್ಚನೆ ಮಾಡಬಾರದು. ಪೂಜಾಗೃಹದಲ್ಲಿ ಮತ್ತು ಜಗುಲಿಗಳ ಮೇಲೆ ಅನ್ಯ ದೇವತೆಗಳ ಭಾವಚಿತ್ರ, ಮೂರ್ತಿಗಳನ್ನು ಇಡಬಾರದು. ಇಷ್ಟಲಿಂಗಾರ್ಚನೆಗೆ ಕುಳಿತುಕೊಳ್ಳುವ ಪೂಜಾ ಸ್ಥಳದಲ್ಲಿ ಎದುರಿಗೆ ಇರುವ ಕಟ್ಟೆಯ(ಪೀಠದ) ಮೇಲೆ ಕೇವಲ ಧರ್ಮಪಿತ ಬಸವಣ್ಣನವರ ಭಾವಚಿತ್ರ, ಧರ್ಮಪಿತರ ವಚನಗಳ ಒಂದು ಗ್ರಂಥ (ಬಸವ ವಚನ ದೀಪ್ತಿ) ಮಾತ್ರ ಇರಬೇಕು.

5. ಶರಣ ಪಥ ಆಚರಣೆ.

ವಿವಾಹ, ಗೃಹ ಪ್ರವೇಶ, ಅಂಗಡಿ ಪ್ರಾರಂಭೋತ್ಸವ, ಶವ ಸಂಸ್ಕಾರ ಇತ್ಯಾದಿ ಕ್ರಿಯೆಗಳನ್ನು "ಶರಣ ಪಥ" ದ ಪ್ರಕಾರವೇ ನಡೆಸಬೇಕೇ ವಿನಾ ಯಾರ ಒತ್ತಡಕ್ಕೋ ಬಲಿಯಾಗಿ, ಸಂಸ್ಕಾರವಿಲ್ಲದ ಬೀಗರ ಇಚ್ಛೆಯಂತೆ ಶರಣ ಪಥಕ್ಕೆ ಹೊರತಾಗಿ ಮಾಡಬಾರದು.

6. ವಾರದ ಶರಣ ಸಂಗಮ.

ದೇವ(ರವಿ)ವಾರ ಸಾಮೂಹಿಕ ಪ್ರಾರ್ಥನೆ ನಡೆಸಬೇಕಾದುದು ಇವರ ಕರ್ತವ್ಯ. ಆದ್ದರಿಂದ ದೇವವಾರದಂದು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಲೇಬೇಕು. ತೀರಾ ಅನಿವಾರ್ಯವಾದ ತುರ್ತು ಪ್ರಸಂಗಗಳಿದ್ದರೆ ಗೈರು ಹಾಜರಾದರೂ ಮರುವಾರ ವಿವರವನ್ನು ನೀಡಿ ಹನ್ನೊಂದು ರೂ.ದಿಂದ ನೂರಾ ಒಂದು ರೂಪಾಯಿಯವರೆಗೆ ಅವರ ಆರ್ಥಿಕ ಶಕ್ತ್ಯಾನುಸಾರ ತಪ್ಪುದಂಡವನ್ನು (Penalty) ಶರಣ ಸಂಘಕ್ಕೆ ಕಟ್ಟಬೇಕು.

7. ಲಿಂಗದೇವ ವಚನಾಂಕಿತ ಬಳಕೆ

ಸೃಷ್ಟಿಕರ್ತ ಲಿಂಗದೇವನೊಬ್ಬನನ್ನೇ ಆರಾಧಿಸಬೇಕೆಂಬ ಏಕದೇವೋಪಾಸನೆಯನ್ನು ಧರ್ಮಪಿತರು ಬೋಧಿಸಿರುವುದರಿಂದ ಪ್ರಾರ್ಥನೆ, ಪ್ರವಚನ ಉಪನ್ಯಾಸಗಳಲ್ಲಿ ಧರ್ಮಪಿತ ಬಸವಣ್ಣನವರ ವಚನಗಳೊಡನೆ ಲಿಂಗದೇವ ವಚನಾಂಕಿತವನ್ನೇ ಬಳಸಬೇಕು. ಸ್ಥಾವರಲಿಂಗ ಸೂಚಕವಾದ ಕೂಡಲ ಸಂಗಮ ದೇವ ಬಳಸುವುದರಿಂದ ತಾತ್ತ್ವಿಕ ದೋಷವನ್ನು ಎಸಗಿದಂತಾಗುವುದರಿಂದ ಅದನ್ನು ಬಳಸದೆ ವಚನಗಳೊಡನೆ 'ಲಿಂಗದೇವ' ವಚನಾಂಕಿತವನ್ನೇ ಬಳಸಬೇಕು.

8. ದುರ್ವ್ಯಸನ, ಅನೀತಿಯಿಂದ ದೂರವಿರಬೇಕು.

ಮದ್ಯಪಾನ, ಬೀಡಿ, ಸಿಗರೇಟು, ತಂಬಾಕು ಸೇವನೆ, ಮಾಂಸಾಹಾರಗಳಿಂದ ದೂರವಿರಬೇಕು. 12ನೆಯ ಶತಮಾನದಲ್ಲಿ ಆದ್ಯರು, ವೇದ್ಯರು, ಸಾಧ್ಯರು ಎಂದು 3 ಬಗೆಯಲ್ಲಿ ವಿಂಗಡಿಸಲಾಗಿದೆ ಆದ್ಯರು ಪೂರ್ಣವಾಗಿ ತತ್ತ್ವನಿಷ್ಠರು. ವಚನ ಸಂವಿಧಾನ ಕರ್ತೃಗಳೂ ಆದ ಷಡ್‌ಗಣಾಧೀಶರು, ವಚನಕಾರರು ಮುಂತಾದವರು. ವೇದ್ಯರು ಎಂದರೆ ಪೂರ್ಣವಾಗಿ ಅಲ್ಲದೆ ಇದ್ದರೂ ಹೆಚ್ಚಿನ ಪ್ರಮಾಣದಲ್ಲಿ ತತ್ತ್ವವನ್ನು ಅಳವಡಿಸಿಕೊಂಡವರು. ಸಾಧ್ಯರು ಎಂದರೆ ಸಾಮಾನ್ಯ ಅನುಯಾಯಿಗಳು; ಆದರಂತೆ ಶರಣ ಪಥಿಕರಾದ ಸಂಸತ್ ಸದಸ್ಯರು ಮೊದಲನೆ ಸಾಲಿನಲ್ಲಿ ನಿಲ್ಲುವವರಾಗಬೇಕು. ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಂಡು ಆಯ್ಕೆಯನ್ನು ನಿರೀಕ್ಷಿಸಬಾರದು. ಮತ್ತು ಮೇಲೆ ಸೂಚಿಸಿದ ಅಷ್ಟ ಸೂತ್ರಗಳಲ್ಲಿ ಯಾವುದರಲ್ಲಾದರೂ ಲೋಪವಿದ್ದರೆ ಸದಸ್ಯತ್ವವನ್ನು ನಿರಾಕರಿಸಬೇಕು. ನಾವು ಕಾರಣವನ್ನು ಕೇಳುವುದಿಲ್ಲ.

ಈ ಹಿನ್ನೆಲೆಯಲ್ಲಿ ನಾವು ಕೆಲವೊಂದು ಶರಣರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿ ಪತ್ರ ಬರೆದಿದ್ದೇವೆ. ಪ್ರಸ್ತುತ ನಿಯಮಗಳಿಗೆ ಬದ್ಧರಾಗುವವರು ಮಾತ್ರ ಆಹ್ವಾನವನ್ನು ಒಪ್ಪಿಕೊಳ್ಳಬಹುದು. ಪಾಲಿಸಲು ಆಗದವರು ಒಪ್ಪಿಕೊಳ್ಳಬೇಕಾಗಿಲ್ಲ. ಸಾಮಾನ್ಯ ಸದಸ್ಯರಾಗಿ ಅವರು ಇರಬಹುದು; ನಾವು ಆಯ್ಕೆ ಮಾಡಲು ಮರೆತಿದ್ದರೆ ಸ್ವಯಂ ಪ್ರೇರಣೆಯಿಂದ ಪತ್ರ ಬರೆದು ತಮ್ಮ ಹೆಸರುಗಳನ್ನು ನಮ್ಮ ಗಮನಕ್ಕೆ ತರಬಹುದು

- ಮಾತಾಜಿ, ಬಸವ ಧರ್ಮ ಪೀಠ, ಕೂಡಲ ಸಂಗಮ

19 ನೆಯ ಶರಣ ಮೇಳದಲ್ಲಿ
ದಿ.11-1-2006 ಮತ್ತು 12-1-2006 ರಂದು ನಡೆಯಲಿರುವ ಚಿಂತನಗೋಷ್ಠಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವ ವಿಷಯಗಳು

1. ಸಾಮಾನ್ಯ ಲಿಂಗಾಯತನ ದಿನಚರಿ ಏನಿರಬೇಕು?
2. ಶರಣ ವ್ರತ (ವ್ರತಧಾರಿ ಲಿಂಗಾಯತ) ಸ್ವೀಕರಿಸಿದವರ ದಿನಚರಿ ಏನಿರಬೇಕು? ಮತ್ತು ವ್ರತ ನಿಯಮಗಳು ಏನಿರಬೇಕು?
3. ಲಿಂಗಧಾರಣೆಯನ್ನು ಮಗುವಿಗೆ ಮಾಡಿದ ಮೇಲೆ ಶರೀರದ ಮೇಲೆ ಧರಿಸಿಯೇ ಇರಬೇಕೇ? ಎತ್ತಿಡಬಹುದೆ?
4. ಲಿಂಗದೀಕ್ಷೆ ಕಡ್ಡಾಯವೆ? ಯಾವ ವಯಸ್ಸಿಗೆ ಮಾಡಿಸಬೇಕು?
5. ಲಿಂಗದೀಕ್ಷೆಯ ಬಳಿಕ ಇಷ್ಟಲಿಂಗವನ್ನು ಕಡ್ಡಾಯವಾಗಿ ಧರಿಸಬೇಕೇ ಅಥವಾ ಪೂಜಿಸಿ ಎತ್ತಿಡಬಹುದೆ?
6. ಏಕದೇವೋಪಾಸಕನಾದ ಶರಣನ ದೃಷ್ಟಿಯಲ್ಲಿ 'ಯೋಗಿರಾಜ ಶಿವನ' ಸ್ಥಾನವೇನು?
7. ಮೊದಲಿನಿಂದಲೂ ಬಂದಿರುವ ಸ್ಥಾವರ ಲಿಂಗದ ಗುಡಿಗಳು, ವೀರಭದ್ರನ ಗುಡಿ ಮುಂತಾದುವುಗಳು ಅನೇಕ ಕಡೆ ಲಿಂಗಾಯತರ ಆಡಳಿತದಲ್ಲಿರುತ್ತವೆ. ಶುದ್ಧ ಶರಣ ಪಥಿಕನು ಅವುಗಳೊಡನೆ ಹೇಗೆ ವ್ಯವಹರಿಸಬೇಕು?
8. ಹಲವಾರು ಕಡೆ ರಾಷ್ಟ್ರೀಯ ಬಸವ ದಳಗಳು ಬಸವ ಮಂಟಪಗಳನ್ನು ನಿರ್ಮಿಸಿವೆ. ಅವುಗಳಲ್ಲಿ ಧಾರ್ಮಿಕ ಚಟುವಟಿಕೆ, ಪೂಜೆ-ಪ್ರಾರ್ಥನೆ ಇತ್ಯಾದಿ ನಡೆಸಲು ಯಾವ ರೀತಿ ವ್ಯವಸ್ಥೆ ಮಾಡಬೇಕು?
9. ವ್ಯಕ್ತಿಗಳು ಲಿಂಗೈಕ್ಯರಾದ ಮೇಲೆ ಅವರ ತಲೆಯ ಮೇಲೆ ಜಂಗಮರ ಪಾದವಿಟ್ಟು ಪೂಜೆ ಮಾಡಲಾಗುವುದು. ಇದನ್ನು ಮುಂದುವರಿಸಬೇಕೇ ಬೇಡವೆ? [ಎಂದು ಓರ್ವರು ಕೇಳಿದ್ದಾರೆ]
10. ಸಾಷ್ಟಾಂಗ ನಮಸ್ಕಾರವನ್ನು ಗುರು ಜಂಗಮರಿಗೆ ಮಾಡುವಾಗ ಇಷ್ಟಲಿಂಗವು ಕೆಳಗೆ ಆಗುತ್ತದೆ. ಇದು ಇಷ್ಟಲಿಂಗಕ್ಕೆ ಅಗೌರವ ತೋರಿದಂತಲ್ಲವೆ? [ಎಂದು ಓರ್ವರು ಪ್ರಶ್ನೆ ಕೇಳಿದ್ದಾರೆ]
11. ಲಿಂಗಾಯತರಲ್ಲಿ ಮತ್ತು ಎಲ್ಲ ಮಾನವರಲ್ಲಿ ಎಲ್ಲರೂ ಒಂದೇ ಹಂತದ ಮಾನಸಿಕ ಸ್ಥಿತಿ ಇರುವವರಲ್ಲ, ಆದ್ದರಿಂದ ವಿವಿಧ ಹಂತದ ನಿಯಮಗಳೊಡನೆ ಸಾಂಕೇತಿಕವಾಗಿ ವಿವಿಧ ದೀಕ್ಷೆಗಳನ್ನು ಕೊಟ್ಟರೆ ಹೇಗೆ? ಎಷ್ಟು ಹಂತಗಳನ್ನು ಮಾಡಬಹುದು?
12. ಸಿಖ್ಖರಲ್ಲಿ ಅಮೃತ ದೀಕ್ಷೆ ಎಂದು ಖಾಲ್ಸಾ ಪಂಥದ ದೀಕ್ಷೆಯನ್ನು ಕೊಡುತ್ತಾರೆ. ಅವರಿಗೆ 5 ಕ ಗಳು ಕಡ್ಡಾಯ. ಸಂಪೂರ್ಣವಾಗಿ ಧರ್ಮಕ್ಕೆ ಬದ್ಧನನ್ನಾಗಿ ಮಾಡುವ ಅಂಥ ದೀಕ್ಷೆಯ ಅಗತ್ಯವಿದೆಯೆ?
13. ಪ್ರತಿ ಊರಿನಲ್ಲಿ ಲಿಂಗಾಯತ ಧರ್ಮ ಮಹಾಸಭಾದ ಘಟಕಗಳು ಆಗುವುದು ಅಗತ್ಯವಿದೆ. ಇದಕ್ಕಾಗಿ ಏನು ಮಾಡಬಹುದು?
14. ಲಿಂಗಾಯತ ಎಂಬ ಅಡ್ಡ ಹೆಸರನ್ನು ರೂಢಿಗೆ ತರುವ ವಿಧಾನಗಳು
15. ಗಣ ಲಾಂಛನವನ್ನು ಜನಪ್ರಿಯಗೊಳಿಸುವ ಬಗೆ, ಇತ್ಯಾದಿ

ವಿಶೇಷ ಸೂಚನೆ: ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಳ್ಳಲು ತಮ್ಮ ವಿಚಾರಗಳನ್ನು ಶರಣರ ಮುಂದೆ ಇಡಲು ಎಲ್ಲರಿಗೂ ಅವಕಾಶವಿರುತ್ತದೆ.

ಸ್ವಯಂ ಸೇವಕರಿಗೆ ಕರೆ

ಕಾಯ ಸೇವೆ: ೧೨ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಲಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ:

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬ.ವ.ದೀ. ೨೪೮)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೆ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನುಸೇವೆ - ಮನಸೇವೆ - ಧನಸೇವೆ ಮಾಡಬೇಕು. ಅಂಥವರನ್ನು ಲಿಂಗದೇವನು ಮೆಚ್ಚಿ, ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ (ಧಾರ್ಮಿಕ) ತೌರಿನ ಹಬ್ಬಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆಯನ್ನು ಸಂಗ್ರಹಿಸುತ್ತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ ೧೫ ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ ೧ ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ಮತ್ತು ಇನ್ನಿತರ ಶರಣರು ತನು ಸೇವೆಗೆ ಸನ್ನದ್ಧರಾಗಬೇಕು. ಬುದ್ಧಿಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೇ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ!
ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

-ಬಸವಾತ್ಮಜೆ

ಕಾಲಜ್ಞಾನ ವಚನಗಳು-ಒಂದು ವಿಶ್ಲೇಷಣೆ

ದೆಹಲಿಯಿಂದ ಹೈದರಾಬಾದ್‌ಗೆ ಬಂದು, ಅಲ್ಲಿಂದ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಗಡಗಾಕ್ಕೆ ಹೋಗಿ ಉದಗೀರ್ ಮಾರ್ಗವಾಗಿ ಬಸವ ಕಲ್ಯಾಣಕ್ಕೆ ಬಂದು ನಡೆದಿದ್ದ ಕೆಲಸ ಕಾರ್ಯ ವೀಕ್ಷಿಸಿ, ಕೂಡಲ ಸಂಗಮಕ್ಕೆ ಬಂದಾಗ ಅಲ್ಲಿದ್ದ ಸಾಧಕ ಶರಣ ಬಸವಪ್ರಭು ನೀಲಾಂಬಿಕಾ ತಾಯಿಯ ಒಂದು ಕಾಲಜ್ಞಾನ ವಚನವನ್ನು ತಂದು ಕೊಟ್ಟನು.

ನಕ್ಷತ್ರ ಉದುರ್‍ಯಾವು, ಭೂಮಿಯು ನಡುಗೀತು
ರಾಕ್ಷಸ ತುರುಕರು ಹತವಾಗಿ ಹೋದಾರು
ರಕ್ಷಿಪ ಬಸವಣ್ಣ ಬರುತಾನ ಸುವ್ವಿ॥

ಬೆಂಗಳೂರಿಗೆ ಬಂದ ನಂತರ ನನ್ನ ಬಳಿ ಇದ್ದ ಪುಸ್ತಕ ನೋಡಿದೆ ಪುಟ ೧೨ ರಲ್ಲಿ ೪೨ ನೆಯದಾಗಿ ಈ ತ್ರಿಪದಿ ಇದ್ದಿತು. ಘಟನೆಗಳು ನಡೆದ ಬಳಿಕ ಈ ವಚನಗಳು ಅರ್ಥವಾಗುತ್ತವೆ.

ಮುಸಲ್ಮಾನ್ ರಾಷ್ಟ್ರಗಳಲ್ಲಿ, ರಾಜ್ಯಗಳಲ್ಲಿ ದಿನನಿತ್ಯವೂ ಬಾಂಬ್ ಸ್ಫೋಟ ನಡೆದು ಬೆಂಕಿಯ ಉಂಡೆಗಳು ಉದುರುತ್ತಲೇ ಇರುತ್ತವೆ ಎಂಬುದು ಇಡೀ ಜಗತ್ತಿಗೇ ತಿಳಿದಿರುವ ಸಂಗತಿ. ಈತ್ತೀಚೆಗೆ ಪಾಕ್ ಆಕ್ರಮಿತ ಕಾಶ್ಮೀರ, ಉರಿ ಪ್ರದೇಶದಲ್ಲಿ ನಡೆದ ಭಯಂಕರವಾದ ಭೂಕಂಪದಲ್ಲಿ ಜನಸಾಮಾನ್ಯರು ಸತ್ತುದು ವಿಷಾದನೀಯವಾದರೂ ಸುಮಾರು ೧೫೦೦ ಜನ ಅತ್ಯಂತ ಭಯಂಕರವಾದ ಉಗ್ರವಾದಿಗಳು ಮತ್ತು ಅವರನ್ನು ತಯಾರು ಮಾಡುವ ಶಿಬಿರಗಳೇ ನಾಶವಾದುದಲ್ಲದೇ ಅನೇಕ ಭಯೋತ್ಪಾದಕರು ಮಣ್ಣಿನಲ್ಲೇ ಹುದುಗಿ ಹೋದರು. ನೀಲಾಂಬಿಕಾ ತಾಯಿ ಬರೀ "ತುರುಕರು" ಎಂದು ಹೇಳದೆ, ರಾಕ್ಷಸ ತುರುಕರು ಅಂದರೆ ಭಯೋತ್ಪಾದಕ ಮುಸಲೀಮರು ಎಂದು ಹೇಳಿರುವದು ಗಮನಾರ್ಹ.

ಇಂಥ ಸಮಯದಲ್ಲಿ ಜಗತ್ತನ್ನು ರಕ್ಷಿಪ ಬಸವಣ್ಣ ಬರುತ್ತಾನೆ ಎಂದು ತಾಯಿ ನೀಲಾಂಬಿಕೆ ಹೇಳಿರುವದಕ್ಕೂ, ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ ಆಗಿರುವುದಕ್ಕೂ ದೈವಿಕ ಸಂಬಂಧವಿದೆ ಎನ್ನಿಸದೆ? ಮತ್ತು ಇದೇ ಸಮಯದಲ್ಲಿ ಬಸವ ಮಹಾಮನೆ ಚಾರಿಟೆಬಲ್ ಟ್ರಸ್ಟ್‌ನ ಶಾಖೆಯನ್ನು ನವ ದೆಹಲಿಯಲ್ಲಿ ಆರಂಭಿಸಿರುವುದು ಆಧ ಶರಣರ ಸಂಕಲ್ಪವೇ ಇದೆ ಎನ್ನಿಸುತ್ತಿದೆ.

ಪಾಕಿಸ್ತಾನದ ಭೂಕಂಪದಿಂದಲಾದರೂ ಉಗ್ರವಾದಿ ಮುಸಲೀಮರು ದೇವರ ಅಂತರಂಗವನ್ನು ಅರಿಯುವರೇನೊ? ದೇವರ ಹೆಸರಿನಲ್ಲಿ ಹಿಂಸೆಯನ್ನು ಮಾಡಿದರೂ ಸೃಷ್ಟಿಕರ್ತನು ಇದನ್ನು ಸಹಿಸಿಕೊಳ್ಳನು ಎಂಬುದಕ್ಕೆ ಜ್ವಲಂತ ಉದಾಹರಣೆ ಉಗ್ರವಾದಿಗಳನ್ನು ಬಲಿ ತೆಗೆದುಕೊಂಡ ಭೂಕಂಪ!

ಬಸವ ಪಂಚಮಿ

ಅಕ್ಕಮಹಾದೇವಿಯ ಒಂದು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾಳೆ

"ವಿರೋಧಿಕೃತ ಸಂವತ್ಸರದ ದೀಪಸಂದ
ಬಸವನ ಪಂಚಮಿಯಲ್ಲಿ! ಈ ಕಲ್ಯಾಣದ ಶರಣರು
ಪ್ರತ್ಯಕ್ಷದಲ್ಲಿ ಮೈಗಾಣಿಸುವರು" (ಪುಟ ೧೨೯, ಪದ್ಯ ೨೧)

"ದೀಪ ಸಂದ ಬಸವನ ಪಂಚಮಿ"- ಎಂಬ ಪದ ಪ್ರಯೋಗ ಬಹಳ ಮುಖ್ಯ, ಪ್ರಾಣ (ಆತ್ಮ) ಹೋಯಿತು ಎಂಬುದನ್ನು ದೀಪ ಸಂದಿತು ಎಂದು ಬಳಸುವ ಪರಿಪಾಠ ಇಂದಿಗೂ ಇದೆ. ನಾವು ೧೯೭೭ ರ ನಂತರ "ಬಸವ ಪಂಚಮಿ " ಎಂಬ ಪದವನ್ನು ರೂಢಿಗೆ ತಂದೆವು. ಆಗಿನ್ನೂ ಕಾಲಜ್ಞಾನ ವಚನಗಳನ್ನು ಓದಿರಲಿಲ. ಆದರೆ ಅಕ್ಕನ ಕಾಲಜ್ಞಾನ ವಚನದಲ್ಲಿ ಮೊದಲೇ ಬಳಕೆಯಾಗಿದೆ ಎಂಬುದು ಸಂತೋಷದ ಸಂಗತಿ.

19ನೆಯ ಶರಣ ಮೇಳ ಕಾರ್ಯಕ್ರಮದ ರೂಪುರೇಷೆ

ಶರಣ ಬಂಧುಗಳೇ,

ಶರಣ ಮೇಳವು ಧಾರ್ಮಿಕ, ಅಧ್ಯಾತ್ಮಿಕ, ವೈಚಾರಿಕ ತರಬೇತಿ ನೀಡುವ ಮಹತ್ವಪೂರ್ಣ ಸಮಾವೇಶ. ಆದ್ದರಿಂದ ಶರಣ ಬಂಧುಗಳು ತಪ್ಪದೆ 5 ದಿವಸಗಳ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂಕಲ್ಪ ಹೊಂದಿರಬೇಕು ಮತ್ತು ಸಮಯವನ್ನು ಒದಗಿಸಿಕೊಳ್ಳಬೇಕು.

ಚನ್ನ(ಬುಧ)ವಾರ ದಿ. 11-1-2006

ಬೆಳಿಗ್ಗೆ 10-30 : ಚಿಂತನ ಗೋಷ್ಠಿ

ಪ್ರತಿ ವರ್ಷವೂ ಬೇರೆ ಬೇರೆ ವಿಷಯ ತೆಗೆದುಕೊಂಡು ಸಾಮೂಹಿಕವಾಗಿ ಚರ್ಚಿಸಲಾಗುತ್ತದೆ. ಈ ಸಲವೂ ಸಹ ಸಂಶಯ ನಿವಾರಿಸಿಕೊಳ್ಳಬೇಕೆನ್ನುವವರು ಪ್ರಶ್ನೆಗಳನ್ನು ಕೇಳಬಹುದು

ಮಧ್ಯಾಹ್ನ : 3-30 ರಿಂದ 5-30 : ಧಾರ್ಮಿಕ ರಸ ಪ್ರಶ್ನೆ ಸ್ಪರ್ಧೆ

ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮ ಬಹಳ ಮಹತ್ವ ಪೂರ್ಣವಾದುದು. ವರ್ಷವಿಡೀ ಓದಿರುವ ಜ್ಞಾನದ ಮೌಖಿಕ ಪರೀಕ್ಷೆಯಂತಿರುವುದು. ತಮ್ಮ ತಂಡಗಳಿಗೆ ವಿವಿಧ ರಾಷ್ಟ್ರೀಯ ಬಸವ ದಳಗಳವರು ಮೊದಲೇ ಚೆನ್ನಾಗಿ ತರಬೇತಿ ನೀಡಬೇಕು. ಪ್ರಥಮ ಬಹುಮಾನ ಪಡೆದ ರಾಷ್ಟ್ರೀಯ ಬಸವ ದಳಕ್ಕೆ ಸ್ಮಾರಕ ಫಲಕ ನೀಡಲಾಗುವುದು.

ಸಂಜೆ : 6-30 ನೆನಹು ಮತ್ತು ಪ್ರವಚನ

ಪ್ರಭು ಚನ್ನ(ಗುರು)ವಾರ ದಿ. 12-1-2006

ಸುಪ್ರಭಾತದ 7-30 : ಸಾಮೂಹಿಕ ಇಷ್ಟಲಿಂಗಾರ್ಚನೆ
ಬೆಳಿಗ್ಗೆ 10-30 : ಚಿಂತನಗೋಷ್ಠಿ
ಮಧ್ಯಾಹ್ನ 3-30 : ಧಾರ್ಮಿಕ ರಸ ಪ್ರಶ್ನೆ ಸ್ಪರ್ಧೆ
ಸಂಜೆ 6-30 : ನೆನಹು ಮತ್ತು ಲಿಂಗಾಯತ ಧರ್ಮ ಮಹಾಸಭಾ ಸಂಘಟನೆ ಕುರಿತು ಚರ್ಚೆ
ರಾತ್ರಿ 9-30 : ಸಾಂಸ್ಕೃತಿಕ ಕಾರ್ಯಕ್ರಮ

ಮಾತೃ(ಶುಕ್ರ)ವಾರ ದಿ. 13-1-2006

ಸುಪ್ರಭಾತ 7-30 : ಸಾಮೂಹಿಕ ಇಷ್ಟಲಿಂಗಾರ್ಚನೆ
ಬೆಳಿಗ್ಗೆ 10-30 : ಶರಣ ಮೇಳ ಉದ್ಘಾಟನೆ
ಮಧ್ಯಾಹ್ನ 3-30 : ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರ ಸಭೆ
ಸಂಜೆ 6-30 : ಪೀಠಾರೋಹಣ ವಾರ್ಷಿಕೋತ್ಸವ

ಶರಣ ಜ್ಯೋತಿ ಉರಿಸಲು ಸೂಚನೆ

ಶರಣ ಮೇಳಕ್ಕೆ ಬರುವವರು ದಿ.10-1-2006 ಬೆಳಿಗ್ಗೆ ಬಸವೇಶ್ವರ ಪೂಜಾ ವ್ರತ ಮಾಡಿ ದೀಪವನ್ನು ಹಚ್ಚಬೇಕು ಅದು ಆರದಂತೆ ಎಣ್ಣೆ ಹಾಕುತ್ತಿದ್ದು ಶರಣ ಮೇಳವನ್ನು ಪೂರೈಸಿಕೊಂಡು ಬಂದ ಮೇಲೆ ಮಹಾಮಂಗಲವನ್ನು ಮಾಡಬೇಕು. ಮನೆಯಲ್ಲಿ ಉಳಿದವರು ದೀಪವು ಆರದಂತೆ ಸಂರಕ್ಷಿಸಬೇಕು.

ಶರಣ (ಶನಿ)ವಾರ ದಿ. 14-1-2006

ಸುಪ್ರಭಾತ 7 - 30 : ಸಾಮೂಹಿಕ ಬಸವಾರ್ಚನೆ

ಬೆಳಿಗ್ಗೆ 10-00 : ಗಣಲಿಂಗ ದರ್ಶನ

ಬೆಳಿಗ್ಗೆ 11-00 : ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ
ಸಿದ್ಧರಾಮೇಶ್ವರ ಜಯಂತಿ ಆಚರಣೆ
ಸಮುದಾಯ ಪ್ರಾರ್ಥನೆ, ವಚನ ಪಠಣ
ಕುಸುರೆಳ್ಳು ವಿನಿಮಯ, ಪ್ರತಿಜ್ಞಾ ಸ್ವೀಕಾರ

ಸಂಜೆ 4-00 : ಬಸವ ಐಕ್ಯ ಮಂಟಪದಿಂದ ಮೆರವಣಿಗೆ ಮತ್ತು ಶರಣರಿಂದ ಪಥ ಸಂಚಲನ

ಸಂಜೆ 6-30 : ನೆನಹು ಮತ್ತು ಸಾಮೂಹಿಕ ಇಷ್ಟಲಿಂಗಾರ್ಚನಾ ಪ್ರಾತ್ಯಕ್ಷಿಕೆ ಪ್ರವಚನ

ರಾತ್ರಿ 9-30 : ಸಾಂಸ್ಕೃತಿಕ ಕಾರ್ಯಕ್ರಮ

ದೇವ(ಭಾನು)ವಾರ ದಿ. 15-1-2006

ಬೆಳಿಗ್ಗೆ 10-30 : ಸಾಮೂಹಿಕ ಇಷ್ಟಲಿಂಗಾರ್ಚನೆ
ಶರಣ ಸಂಗನು - ಸಾಮೂಹಿಕ ಪ್ರಾರ್ಥನೆ

ಬೆಳಿಗ್ಗೆ 10-30 : ಗುರು ದರ್ಶನ ಮತ್ತು ಅನುಭವ ಗೋಷ್ಠಿ ಸಮಾರೋಪ ಸಮಾರಂಭ

ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಿಂದ, ಮತ್ತು ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳಿಂದ, ಗಣ ನಾಯಕ-ನಾಯಕಿಯರಿಂದ ವಿಶೇಷ ಉಪನ್ಯಾಸಗಳು ಮತ್ತು ಸಮಾರೋಪ ಸಮಾರಂಭ.

ಕೆಲವು ವಿಶೇಷ ವಿವರಗಳು

ದಿನ ನಿತ್ಯ ಸಾಮೂಹಿಕ ಲಿಂಗಾರ್ಚನೆ 3 ಬಾರಿ, ಸಾಮೂಹಿಕ ಬಸವಾರ್ಚನೆ 1 ಬಾರಿ ನಡೆಯುವಾಗ 108 ಮಂತ್ರ ಜಪ ಮಾಡುವಾಗ ಅಕ್ಕಿಯ ಕಾಳನ್ನು ಉಪಯೋಗಿಸಿ, ಪುನಃ ಅವನ್ನು ಸಂಗ್ರಹಿಸಿಕೊಂಡು ಶರಣ ಮೇಳ ಪೂರೈಸಿಕೊಂಡು ಹೋದ ಮೇಲೆ ಒಂದು ದಿವಸ ಅಕ್ಕಿಯನ್ನು ಉಪಯೋಗಿಸಿ ಪ್ರಸಾದ ಮಾಡಿ ಶರಣ ಬಂಧುಗಳಿಗೆ ಪ್ರಸಾದ ದಾಸೋಹ ಮಾಡಿಸಬೇಕು. ಅವರವರ ಶಕ್ತ್ಯಾನುಸಾರ ಶರಣರನ್ನು ಆಹ್ವಾನಿಸಬಹುದು. ಶರಣ ಮೇಳದಿಂದ ನೆನಪಿನ ಕಾಣಿಕೆಯನ್ನು (ಪುಸ್ತಕ, ಫೋಟೋ, ಕ್ಯಾಲೆಂಡರ್, ಕಾರ್ಡ್, ಗೋಡೆ ಕ್ಯಾಲೆಂಡರ್, ಪಾಕೆಟ್ ಕ್ಯಾಲೆಂಡರ್, ಪ್ರಸಾದ ಇತ್ಯಾದಿ) ತಂದು ವಿತರಿಸಬೇಕು.

ಅಕ್ಕಿಯನ್ನು ತಮ್ಮ ಮನೆಯಿಂದಲೇ ತರಬಹುದು ಅಥವಾ ಶರಣ ಮೇಳದ ಸ್ಟಾಲಿನಲ್ಲಿ ಸಿಗುವ ಪ್ಯಾಕೆಟ್ಟನ್ನು ಖರೀದಿಸಬಹುದು.

ದೆಹಲಿಯ ಸೀಸ್‌ಗಂಜ್ ಗುರುದ್ವಾರದಲ್ಲಿ ಶ್ರದ್ಧಾಂಜಲಿ ಸಮರ್ಪಣೆ
ಸಿಖ್ ಮುಖಂಡರಿಂದ ಖಡ್ಗ ಸಮರ್ಪಣೆ

ಒಂದೊಮ್ಮೆ ಗುರು ಗೋವಿಂದ ಸಿಂಗರನ್ನು ಕುರಿತ ಒಂದು ಕಾದಂಬರಿ ಓದಿದಾಗ ನನ್ನ ಮೇಲೆ ಬಹಳ ಪರಿಣಾಮ ಬೀರಿದುದು ಗುರು ತೇಜ್ ಬಹಾದ್ದೂರರ ಬಲಿದಾನ ಮತ್ತು ಗುರು ಗೋವಿಂದ ಸಿಂಗರು ಅವರ ಸಮಾಜದಲ್ಲಿ ಧೈರ್ಯ-ಶೌರ್ಯಗಳನ್ನು ತುಂಬಿದ ಪ್ರಸಂಗ. ಮತ್ತೊಂದು ಹೃದಯ ಸ್ಪರ್ಶಿ ಪ್ರಸಂಗವೆಂದರೆ ಓರ್ವ ಮುಸಲ್ಮಾನ್ ಬಾದಶಹನು ಗುರು ಗೋವಿಂದ ಸಿಂಗರ ಎರಡು ಚಿಕ್ಕ ಮಕ್ಕಳನ್ನು ಮತಾಂತರಕ್ಕೆ ಒತ್ತಾಯಿಸುವುದು; ಅವರು ಒಪ್ಪದೆ ಇದ್ದಾಗ ಅವರನ್ನು ಕೊಲ್ಲಿಸುವುದು. ಅವರು ವೀರತ್ವವನ್ನು ಪ್ರದರ್ಶಿಸುತ್ತ ಸಾಯಲು ಸಿದ್ಧವಾದರೇ ವಿನಾ ಮತಾಂತರಗೊಳ್ಳುವುದಿಲ್ಲ. ಕಾದಂಬರಿ ಓದಿದಾಗಿನಿಂದಲೂ ಈ ಮೂರು ಘಟನೆಗಳು ಕಣ್ಣಿಗೆ ಕಟ್ಟಿದಂತಾಗಿತ್ತು.

1997ರಲ್ಲಿ ಸಮ್ಮೇಳನ ಮಾಡಿದಾಗ ನಮಗೆ ಸಿಖ್ ಜನರ ಪರಿಚಯ ಅಷ್ಟಾಗಿ ಇರಲಿಲ್ಲ. ಎಲ್ಲ ಕಡೆ ಮಾಡುವಂತೆ ಮೆರವಣಿಗೆ, ಪಥ ಸಂಚಲನವನ್ನು ಚಾಂದನಿ ಚೌಕದಲ್ಲಿ ಮಾಡುವಾಗ ಮೆರವಣಿಗೆ ಸೀಸ್ ಗಂಜ್ ಗುರುದ್ವಾರದ ಮುಂದೆ ಬಂದಿತು. ಆಗ ಮೆರವಣಿಗೆಯನ್ನು ಸಹಜವಾಗಿ ಗಮನಿಸಿದವರೇ ಆ ಗುರುದ್ವಾರದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸತ್ ನಾಮ್ ಸಿಂಗರು ಹೊರಗೆ ಬಂದು ಮಾಲಾರ್ಪಣೆ ಮಾಡಿ, ಶಾಲು ಹೊದ್ದಿಸಿದಾಗ ನಮಗೆ ಆಶ್ಚರ್ಯವಾಗಿತ್ತು. ಪರ ಧರ್ಮೀಯರನ್ನು ನಾವು ಪರಿಚಿತರಲ್ಲದಿದ್ದರೂ ಗೌರವಿಸಿದ್ದು ಆ ಜನಾಂಗದ ಬಗ್ಗೆ ಸದ್ಭಾವ ಮೂಡಿಸಿತ್ತು.

ಅದೇ ನೆನಪಿನ ಮೇಲೆ ಈ ಸಲ ಸಮ್ಮೇಳನ ಸಿದ್ಧತೆಗೆಂದು ಪೂಜ್ಯ ಚನ್ನಬಸವಾನಂದ ಸ್ವಾಮಿಗಳು ಹೋಗುವಾಗ ಶ್ರೀ ಸತ್‌ನಾಮ ಸಿಂಗರಿಗೆ ಪತ್ರ ಕೊಟ್ಟು ಕಳಿಸಿದೆ. ಮಾತಾಜಿ 8-9 ವರ್ಷಕಾಲವಾದರೂ ಮರೆತಿಲ್ಲ ನೆನಪು ಇಟ್ಟಿದ್ದಾರೆ ಎಂದು ಹಿಗ್ಗಿದುದಲ್ಲದೆ ಶ್ರೀ ಸತ್‌ನಾಮಸಿಂಗರು ಬಹಳಷ್ಟು ಸಂತೋಷದಿಂದ ಸಹಕರಿಸಿದರು. ದೆಹಲಿಯ ತುಂಬೆಲ್ಲ ಎಲ್ಲಾ ಬಡಾವಣೆಗಳಲ್ಲಿಯೂ ಬೃಹತ್ ಗುರುದ್ವಾರಗಳಿವೆ. ಐತಿಹಾಸಿಕ ಹಿನ್ನೆಲೆಯ ಗುರುದ್ವಾರಗಳು ಹತ್ತು 1.ಮಜನೂ ಟಿಲ್ಲಾ ಸಾಹಿಬ್ 2. ನಾನಕ್ ಪಿಯಾವ್ರೋ 3.ಮಾತಾ ಸುಂದರಿ.ಜಿ 4.ಬಾಂಗ್ಲಾ ಸಾಹೀಬ್ 5.ರಕಬ್ ಗಂಜ್ ಸಾಹಿಬ್ 6.ಮೋತಿ ಬಾಗ್ 7.ಬಾಲಾ ಸಾಹಿಬ್ 8.ದಮ್‌ದಮಾ ಸಾಹಿಬ್ 9. ಸೀಸ್ ಗಂಜ್ ಸಾಹಿಬ್ 10.ಬಾಬಾ ಬಂದಾ ಸಿಂಗ್ ಬಹಾದ್ದೂರ್ ಗುರುದ್ವಾರ. ಇವು ಅವರ ಸಂತರು ವಾಸ್ತವ್ಯ ಮಾಡಿದುದು, ಪಾದವಿಟ್ಟುದು ಇತ್ಯಾದಿ ಐತಿಹಾಸಿಕ ಮಹತ್ವ ಇರುವಂಥವು.

ಗುರು ತೇಜ್ ಬಹಾದ್ದೂರರು ಅಮೃತಸರದಲ್ಲಿ 1621ರಲ್ಲಿ ಗುರು ಹರಗೋವಿಂದ ಸಿಂಗರೆಂಬ 6ನೆಯ ಸಿಖ್ ಗುರುವಿನ ಕಿರಿಯ ಮಗನಾಗಿ ಹುಟ್ಟಿದರು. ತಂದೆಯ ಮರಣವಾದ 20 ವರ್ಷಗಳ ಬಳಿಕ 9 ನೆಯ ಗುರುವಾಗಿ ಅಧಿಕಾರ ಸ್ವೀಕರಿಸಿದರು. ಔರಂಗ ಜೇಬನು ಬ್ರಾಹ್ಮಣರನ್ನು ಕೊಲ್ಲಿಸುವ ಆದೇಶ ಹೊರಡಿಸಿದಾಗ ನೂರಾರು ಬ್ರಾಹ್ಮಣರು ಹತರಾಗುತ್ತಿದ್ದರು. ಪಂಡಿತ ಕೃಪಾರಾಮ್ ಎನ್ನುವ ಬ್ರಾಹ್ಮಣ ವಿದ್ವಾಂಸನು 500 ಜನ ಕಾಶ್ಮೀರಿ ಬ್ರಾಹ್ಮಣರೊಡನೆ ಗುರು ತೇಜ್‌ಬಹಾದ್ದೂರರನ್ನು ಕಂಡು ಔರಂಗಜೇಬನ ದೌರ್ಜನ್ಯಪೂರ್ಣ ಮತಾಂತರದಿಂದ ರಕ್ಷಿಸಬೇಕೆಂದು ವಿನಂತಿಸಿದನು. ಆಗ ಗುರು ತೇಜ್ ಬಹಾದ್ದೂರರು ಔರಂಗ ಜೇಬನಿಗೆ ಸವಾಲು ಹಾಕಿದರು. "ಮೊದಲು ನನ್ನನ್ನು ಮನವೊಲಿಸು. ನಂತರ ಬ್ರಾಹ್ಮಣರನ್ನೂ, ಉಳಿದ ಹಿಂದುಗಳನ್ನು ಮತಾಂತರಿಸು" ಎಂದರು. 1675ರಲ್ಲಿ ದೆಹಲಿಯನ್ನು ತಲುಪಿದ ಔರಂಗಜೇಬನು ಗುರು ತೇಜ್ ಬಹಾದ್ದೂರರನ್ನು ಬಂಧಿಸಿದ್ದಲ್ಲದೆ ಇಸ್ಲಾಮಿನ ತತ್ತ್ವ ಹೇಳಿ

ಮನವರಿಕೆ ಮಾಡುವ ಬದಲು ನಿರ್ದಯವಾಗಿ ತೇಜ್‌ಬಹಾದ್ದೂರರ ಮುಖ್ಯ ಶಿಷ್ಯರನ್ನು ಕೊಲ್ಲಿಸಿದ. ಭಾಯಿ ದಯಾಳ ದಾಸ್ ಎಂಬಾತನನ್ನು ಕುದಿಯುವ ನೀರಿನ ಬಾಂಡಲಿಯಲ್ಲಿ ಎಸೆಯಲಾಯಿತು. ಆದರೂ ವಿಚಲಿತರಾಗದ ತೇಜ್ ಬಹಾದ್ದೂರರ ತಲೆಯನ್ನು ಕತ್ತರಿಸಿ ಒಂದು ಗಿಡಕ್ಕೆ ತೂಗು ಹಾಕಲಾಯಿತು. ಗುರು ತೇಜ್ ಬಹಾದ್ದೂರರ ಶಿರಶ್ಛೇದನ ಮಾಡಿದ ಸ್ಥಳದಲ್ಲಿ ಸೀಸ್ ಗಂಜ್ ಗುರುದ್ವಾರ ಕಟ್ಟಲಾಗಿದೆ. ಆ ಗಿಡದ ಬೊಡ್ಡೆಯನ್ನೂ ಹಾಗೆಯೇ ಕಾಯ್ದಿರಿಸಲಾಗಿದೆ. ಬಲಿದಾನವಾದ ಸ್ಥಳದಲ್ಲಿ ಒಂದು ನಂದಾ ದೀಪವನ್ನು ಉರಿಸಲಾಗುತ್ತಿದೆ. ಗುರು ಗೋವಿಂದ ಸಿಂಗರ ಬಗೆಗಿನ ಕಾದಂಬರಿಯನ್ನು ಓದಿದಾಗಿನಿಂದಲೂ ನನಗೆ ಈ ಬಗ್ಗೆ ಬಹಳ ಅಭಿಮಾನ ಮೂಡಿದ್ದರಿಂದ ಆ ಸ್ಥಳಕ್ಕೆ ಹೋಗಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಬೇಕೆಂಬ ಬಯಕೆ ಉಂಟಾಯಿತು. 1997ರಲ್ಲಿ ಸಮ್ಮೇಳನವಾದಾಗ ಕೂಡಲ ಸಂಗಮ, ಕಲ್ಯಾಣದಿಂದ ಒಯ್ದಿದ್ದ ಬಸವ ಜ್ಯೋತಿಯನ್ನು ರಾಜಘಾಟದಲ್ಲಿದ್ದ ಮಹಾತ್ಮಾ ಗಾಂಧಿಯವರ ಸಮಾಧಿಯ ಮೇಲೆ ಉರಿಯುತ್ತಿದ್ದ ನಂದಾದೀವಿಗೆಯೊಡನೆ ಬೆರೆಸಲಾಗಿತ್ತು. ಈ ಬಾರಿ ಗುರು ತೇಜ್‌ಬಹಾದ್ದೂರರ ಬಲಿದಾನದ ಸ್ಥಳಕ್ಕೆ ಹೋಗಿ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮದ ಬಗ್ಗೆ ತಿಳಿಸುತ್ತಲೇ ಸಿಖ್ ಮುಖಂಡರಿಗೆ ಅತೀವ ಸಂತೋಷವಾಯಿತು. ಅತ್ಯಂತ ಉತ್ಸುಕತೆಯಿಂದ ಸ್ವಾಗತಿಸಲು ಸಿದ್ಧರಾದರು.

ಎರಡು ಆನೆ; ಒಂದರ ಮೇಲೆ ವಚನ ಸಾಹಿತ್ಯ, ಇನ್ನೊಂದರ ಮೇಲೆ ಬಸವ ಭಾವಚಿತ್ರ; ಎರಡು ಬ್ಯಾಂಡ್ ಸೆಟ್, ಮಂತ್ರ ಘೋಷ, ಶರಣ ಶರಣೆಯರ ಪಥ ಸಂಚಲನ. ಮಹಾವೀರ ವಾಟಿಕಾದಿಂದ ಹೊರಟು, ಲಾಲ್ ಕಿಲ್ಲಾ ರಸ್ತೆಯಲ್ಲಿ ಸಾಗಿ ಚಾಂದನಿ ಚೌಕ ದಾಟಿ, ಸೀಸ್ ಗಂಜ್ ರಸ್ತೆಯಲ್ಲಿ ಮೆರವಣಿಗೆ ಸಾಗಿತು. ಮಧ್ಯೆ ಉತ್ಸಾಹಿ ಶರಣರಿಂದ ನೃತ್ಯ, ಜಯ ಘೋಷ. ಗುರುದ್ವಾರದ ಬಾಗಿಲಲ್ಲಿ ಬಂದಾಗ ಶ್ರೀ ಸತ್‌ನಾಮ ಸಿಂಗ್, ಶ್ರೀ ಭಾಯಿ ಹರದೇವ ಸಿಂಗ್ ಮತ್ತು ಗುರುದ್ವಾರದ ಪ್ರಮುಖರು ರಥ(ಕುದುರೆ ಸಾರೋಟು)'ದ ಬಳಿಗೆ ಬಂದು ನಮಗೆ ಮತ್ತು ಪೂಜ್ಯ ಗಂಗಾ ಮಾತಾಜಿಯವರಿಗೆ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು.

ಗುರುದ್ವಾರದ ಒಳಗೆ ಪ್ರವೇಶಿಸಿದೆವು. ಒಂದು ಕಡೆ ಭವ್ಯವಾದ ಮಂಟಪದಲ್ಲಿ ಗುರು ಗ್ರಂಥ ಸಾಹೀಬವನ್ನು ಇಟ್ಟಿರಲಾಗುವುದು. ಪಕ್ಕದಲ್ಲಿ ಗುರು ಗ್ರಂಥವನ್ನು ಸದಾ ಕೀರ್ತನ ಮಾಡುವ 'ರಾಗಿ' ಗಳು ಹಾರ್ಮೋನಿಯಮ್ ತಬಲಾ ಸಹಿತವಾಗಿ ಹಾಡುತ್ತಿದ್ದರು. ಶ್ರೀ ಸತ್ ನಾಮ ಸಿಂಗ್ ಮತ್ತು ಮುಖಂಡರು ಕಾವಿಯ ವಸ್ತ್ರ ಹೊದ್ದಿಸಿ, ಮಾಲಾರ್ಪಣೆ ಮಾಡಿ, ಗಣ್ಯಾತಿ ಗಣ್ಯರಿಗೆ ನೀಡುವ ಕೊಡುಗೆಯಾಗಿ ಕತ್ತಿಯೊಂದನ್ನು ಸಮರ್ಪಿಸಿದರು. "ಧರ್ಮವು ಸಂರಕ್ಷಿಸಲ್ಪಡಲು ಕೇವಲ ಭಕ್ತಿಯೊಂದೇ ಸಾಲದು, ಶೌರ್ಯವೂ ಬೇಕು. ಧೈರ್ಯವೆಂದರೆ ಕ್ರೌರ್ಯವಲ್ಲ ಆತ್ಮ ರಕ್ಷಣೆಯ ಛಲ ಎಂಬುದನ್ನು ಗುರು ಗೋವಿಂದ ಸಿಂಗರು ಕಲಿಸಿದ್ದಾರೆ. ಭಾರತೀಯ ಸಂಸ್ಕೃತಿಯ ರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಮಹಾನ್ ಚೇತನ ಗುರು ತೇಜ್ ಬಹಾದ್ದೂರರು. ನಮ್ಮ ಧರ್ಮದಲ್ಲಿ ಸಹ ವಚನ ಸಾಹಿತ್ಯ ರಕ್ಷಣೆಗೆ ನಮ್ಮ ಶರಣರು ಹೋರಾಡಿದ್ದಾರೆ; ಸಮಾನತೆಯ ಸ್ಥಾಪನೆಗಾಗಿ ಹರಳಯ್ಯ-ಮಧುವರಸರು ಪ್ರಾಣಾರ್ಪಣೆ ಮಾಡಿದ್ದಾರೆ. ಹೀಗೆ ಲಿಂಗಾಯತ ಮತ್ತು ಸಿಖ್ ಧರ್ಮಗಳೆರಡೂ ಸಮಾನತೆಗಾಗಿ ಹೋರಾಡುವ ಧರ್ಮಗಳಾಗಿವೆ. ಎರಡರ ಮಧ್ಯೆ ಬಹಳಷ್ಟು ಹೋಲಿಕೆ ಇದೆ. ನೀವು ನಮಗೆ ತೋರಿದ ಗೌರವಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇವೆ." ಎಂದು ನಾನು ಸಂಕ್ಷಿಪ್ತವಾಗಿ ಮಾತನಾಡಿದೆ.

ಶೌರ್ಯದ ಸಂಕೇತವಾದ ಖಡ್ಗವು ಹೀಗೆ ಬಂದುದು ಬಹಳ ಸಾಂಕೇತಿಕವೆನಿಸಿತು. ಭಕ್ತಿ-ಸೇವೆಗಳೊಡನೆ ವೀರತ್ವವನ್ನು ಹೊಂದಿರುವ ಸಿಖ್ ಧರ್ಮವು ಲಿಂಗಾಯತ ಧರ್ಮೀಯರಲ್ಲಿ ತುಂಬಿರುವ ಹೇಡಿತನವನ್ನು ತೊಡೆದು ಧೈರ್ಯ-ಶೌರ್ಯ-ಛಲವನ್ನು ತುಂಬಲಿ ಎಂದು ಮನದಲ್ಲಿ ಆ ವೀರಭೂಮಿಯಲ್ಲಿ ಸಂಕಲ್ಪ ಮಾಡಿಕೊಂಡೆ.


– ಮಾತಾಜಿ



ದಿನಾಂಕ 16-10-2005, ಕರ್ನಾಟಕ ಸರ್ಕಾರದ ಅರಣ್ಯ ಸಚಿವ ಗುರುಪಾದಪ್ಪ ನಾಗ್ಮಾರಪಳ್ಳಿ ಇವರಿಂದ ಬಸವ ಧ್ವಜಾರೋಹಣ



ಹೈದರಾಬಾದಿಗೆ ದೇಹಲಿಯಿಂದ ದಿನಾಂಕ 15-10-2005 ರಂದು ಆಗಮಿಸಿದ ಪೂಜ್ಯ ಜಗದ್ಗುರು ಮಾತೆ ಮಹಾದೇವಿ ಹಾಗೂ ಪ್ರವಚನ ಮಾಡುತ್ತಿದ್ದ ಮಾತೆ ಗಂಗಾದೇವಿಯವರಿಗೆ ಮೆರವಣಿಗೆ ಮೂಲಕ ಸ್ವಾಗತ.



ಶರಣ ಗುರುಪಾದಪ್ಪ ನಾಗ್ಮಾರಪಳ್ಳಿ ಇವರಿಂದ ಭಾಷಣ.
ವೇದಿಕೆ ಮೇಲೆ ಆಂಧ್ರದ ಸಚಿವ ರಘುವೀರ್ ರೆಡ್ಡಿ ಮತ್ತು ಶಾಸಕ ಮುಖೇಶ್



ಹೈದರಾಬಾದ್ ಧ್ವಜಾರೋಹಣದ ಸಮಯದಲ್ಲಿ ಧ್ವಜ ವಂದನೆ ಮಾಡುತ್ತಿರುವ ಶರಣ ಸಮೂಹ

ಶರಣ ಮೇಳದಲ್ಲಿ
ವಚನ ಪಠಣ ಸಪ್ತಾಹ ಮತ್ತು
ವಚನ ಭಜನಾ ಪಂಚ ದಿನೋತ್ಸವ

19ನೆಯ ಶರಣ ಮೇಳದಲ್ಲಿ ವಚನ ಪಠಣ ಸಪ್ತಾಹದೊಡನೆ ವಚನ ಭಜನಾ ಪಂಚದಿನೋತ್ಸವವನ್ನು ಏರ್ಪಡಿಸುವ ಯೋಜನೆ ರೂಪಿಸಲಾಗಿದೆ. ಸಿಖ್ಖರ ಗುರುದ್ವಾರಗಳಲ್ಲಿ ಹಾರ್ಮೋನಿಯಮ್, ತಬಲಾ, ತಾಳಗಳನ್ನು ಇರಿಸಿಕೊಂಡು ಗ್ರಂಥಿಗಳು ಗ್ರಂಥ ಸಾಹೇಬದ ಗೀತೆಗಳನ್ನು ಹಾಡುತ್ತಲಿರುತ್ತಾರೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಹಳ್ಳಿಯಲ್ಲೂ ವಚನಗಳ ಭಜನೆ ಮಾಡುವ ತಂಡಗಳು ಇರುತ್ತವೆ. ಈ ಯೋಜನೆಯಿಂದ ಅವರುಗಳಿಗೆಲ್ಲ ಭಾಗವಹಿಸುವ ಮತ್ತು ಗುರು ಸೇವೆ ಮಾಡುವ ಅವಕಾಶ ಲಭ್ಯವಾಗುತ್ತದೆ.

1. ವಚನ ಪಠಣ ಸಪ್ತಾಹವು ದಿ.9-1-2006ರ ಬೆಳಿಗ್ಗೆ 8 ಗಂಟೆಗೆ ವಚನ ಮಂಟಪದಲ್ಲಿ, ವಚನ ಭಜನೆಯು ದಿ.11-1-2006 ರಂದು ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಗುತ್ತದೆ. ದಿ.15-1-2006 ರಾತ್ರಿ 9 ಗಂಟೆಗೆ ಮಹಾಮಂಗಲ.

2. ಕೇವಲ ವಚನಗಳ ಭಜನೆಗೆ ಮಾತ್ರ ಅವಕಾಶ. ಬಸವಾದಿ ಪ್ರಮಥರ ಸ್ತುತಿ ಮಾಡುವ ಗೀತೆಗಳನ್ನು ಹಾಡಬಹುದು. ಇವೆರಡರ ಹೊರತು ಬೇರೆ ಯಾವ ಭಜನೆಯನ್ನೂ ಮಾಡಬಾರದು.

3. ಪಾಳಿಯ ಮೇಲೆ ಭಜನೆ ಮಾಡಲು ಅವಕಾಶ ನೀಡಲಾಗುವುದು. ಅಲ್ಲಿ ಕೊಡಲಾಗುವ ಪವಿತ್ರ ವಸ್ತ್ರಗಳನ್ನು ಹೊದ್ದು ಭಜನೆ ಮಾಡಬೇಕು. ಹಾರ್ಮೋನಿಯಮ್, ತಬಲಾ, ತಾಳಗಳನ್ನು ಅಲ್ಲೇ ಕೊಡಲಾಗುವುದು. ತಮ್ಮ ವಸ್ತುಗಳನ್ನು ತಾವೇ ತಂದುಕೊಳ್ಳಲೂ ಅವಕಾಶವಿರುತ್ತದೆ.

4. ಈ ಅವಧಿಯಲ್ಲಿ (5 ದಿವಸಗಳ ಕಾಲ) ಬೀಡಿ, ಸಿಗರೇಟು, ಚುಟ್ಟಾ, ತಂಬಾಕು ಸೇವನೆ, ಮದ್ಯಪಾನ ಮಾಡಬಾರದು. ಮುಂದೆ ಕಾಯಂ ಆಗಿ ಬಿಡುವ ಸಂಕಲ್ಪ ಮಾಡಬೇಕು.

5. ತಮ್ಮ ಊರುಗಳಿಂದ ಬಂದು ಹೋಗುವ ಗಾಡಿ ಖರ್ಚು ಅವರವರೇ ಭರಿಸಬೇಕು. ಊಟ ಮತ್ತು ವಸತಿ ಉಚಿತವಾಗಿರುವುದು.

6. ಭಜನಾ ತಂಡಗಳ ಮಧ್ಯೆ ಸ್ಪರ್ಧೆ ಏರ್ಪಡಿಸಿ ಪ್ರಥಮ - 1, ದ್ವಿತೀಯ - 2 ಮತ್ತು ತೃತೀಯ - 3 ಬಹುಮಾನಗಳನ್ನು ವಿಜೇತ ತಂಡಗಳಿಗೆ ಕೊಡಲಾಗುವುದು.

7. ಬೆಳಗಿನ 6 ಗಂಟೆಗೆ ಬಸವೇಶ್ವರ ಪೂಜಾವ್ರತ ಪೂರೈಸಿದ ಮೇಲೆ ಭಜನೆ ಪ್ರಾರಂಭ. ಬೆಳಿಗ್ಗೆ 8ರಿಂದ ರಾತ್ರಿ 10ರವರೆಗೆ ಭಜನೆ. 1 ತಂಡಕ್ಕೆ 1 ಗಂಟೆ ಸಮಯಾವಕಾಶ. ಉಳಿದ ಸಮಯದಲ್ಲಿ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು, ಪ್ರವಚನ ಕೇಳಬೇಕು, ಸೇವೆ ಸಲ್ಲಿಸಬೇಕು. ಭಾಗವಹಿಸುವ ತಂಡಗಳ ಸಂಖ್ಯೆಯ ಮೇಲೆಯೂ ಭಜನಾ ಸಮಯದ ನಿರ್ಧಾರ ಮಾಡಲಾಗುವುದು.

8. ಶರಣೆಯರ ಭಜನಾ ತಂಡಗಳಿದ್ದರೆ ಅವರಿಗೂ ಭಾಗವಹಿಸಲು ಅವಕಾಶ ಉಂಟು.

9. ಆಸಕ್ತರು ಬೆಂಗಳೂರಿನ ವಿಳಾಸಕ್ಕೆ ಪತ್ರ ಬರೆಯಬೇಕು. ಸಂಪರ್ಕಿಸಲು ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ತಿಳಿಸಬೇಕು.

[ಶರಣ ಮೇಳದ ಸಮಯದಲ್ಲಿ ಈ ರೀತಿ ಪವಿತ್ರವಾದ ವಚನ ಭಜನಾ ಸೇವೆಯನ್ನು ಮಾಡುವುದಾಗಿ ಇಷ್ಟಾರ್ಥಸಿದ್ಧಿಗಾಗಿ ಸಂಕಲ್ಪ ಮಾಡಿಕೊಳ್ಳಿರಿ.]

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೆಯ ಮುಖ್ಯ ರಸ್ತೆ, ಕಾರ್ಡ್ ರೋಡ್
2ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335 /23322790

2006 ನೆಯ ಇಸವಿಯಲ್ಲಿ ಬರುವ
ಲಿಂಗಾಯತ ಧರ್ಮದ ಹಬ್ಬ-ಹುಣ್ಣಿಮೆ-ಉತ್ಸವಗಳು

1. ಕೂಡಲ ಸಂಗಮದಲ್ಲಿ ಶರಣ ಮೇಳ	-	ಜನವರಿ 11 ರಿಂದ 15
2. ಲಿಂಗಾಯತ ಧರ್ಮ ಸಂಸ್ಥಾಪನ (ಸಮುದಾಯ ಪ್ರಾರ್ಥನಾ) ದಿನ	-	ಜನವರಿ 14
3. ಸಿದ್ಧರಾಮೇಶ್ವರ ಜಯಂತಿ	-	ಜನವರಿ 14
4. ಗಣರಾಜ್ಯೋತ್ಸವ	-	ಜನವರಿ 26
5. ಉಳವಿಯಲ್ಲಿ ರಥೋತ್ಸವ ಚನ್ನ ಹುಣ್ಣಿಮೆ, ಗಣ ಭೋಜನ	-	ಫೆಬ್ರವರಿ 13
6. ಮಹಾಶಿವರಾತ್ರಿಯ ಗಣ ಮೇಳ	-	ಫೆಬ್ರವರಿ 26
7. ಪೂಜ್ಯ ಮಾತಾಜಿಯವರ ವರ್ಧಂತಿ	-	ಮಾರ್ಚ್ 13
8. ಕಲ್ಯಾಣ ಕ್ರಾಂತಿಯ ಸಂಸ್ಮರಣಾ	-	ಮಾರ್ಚ್ 11 ರಿಂದ 16
9. ಹರಳಯ್ಯ - ಮಧುವರಸರ ಹುತಾತ್ಮ ದಿನಾಚರಣೆ	-	ಮಾರ್ಚ್ 13
10. ಅಲ್ಲಮಪ್ರಭು ಜಯಂತಿ, ಯುಗಾದಿ	-	ಮಾರ್ಚ್ 30
11. ಅಕ್ಕಮಹಾದೇವಿ ಜಯಂತಿ	-	ಏಪ್ರಿಲ್ 13
12. ಹರಳಯ್ಯನವರ ಜಯಂತಿ	-	ಏಪ್ರಿಲ್ 13
13. ಬಸವ ಜಯಂತಿ /-	-	ಏಪ್ರಿಲ್ 30
14. ಲಿಂಗಾಯತರ ಹೊಸವರ್ಷ ಆರಂಭ	-	ಏಪ್ರಿಲ್ 30
15. ಮಡಿವಾಳ ಮಾಚಿದೇವ ಜಯಂತಿ	-	ಮೇ 1
16. ಬಸವ ಕಲ್ಯಾಣದಲ್ಲಿ 5 ನೆಯ ಕಲ್ಯಾಣ ಪರ್ವ	-	ಮೇ 6, 7, 8
17. ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ 11ನೆಯ ಲಿಂಗೈಕ್ಯ ಸಂಸ್ಮರಣೆ	-	ಜೂನ್ 30
18. ಲಿಂ॥ಶರಣ.ಫ.ಗು.ಹಳಕಟ್ಟಿ ಜಯಂತಿ	-	ಜುಲೈ 3
19. ಆಷಾಡ ಹುಣ್ಣಿಮೆ-ಹಡಪದ ಅಪ್ಪಣ್ಣ ಜಯಂತಿ	-	ಜುಲೈ 11
20. ಶ್ರಾವಣ ಮಾಸ-ಬಸವ ಜ್ಯೋತಿ ಆರಂಭ ಶ್ರಾವಣ ಮಾಸ ವ್ರತ ಆರಂಭ	-	ಜುಲೈ 26
21. ಬಸವ (ಲಿಂಗೈಕ್ಯ ಸಂಸ್ಮರಣೆ) ಪಂಚಮಿ	-	ಜುಲೈ 30
22. ನೀಲಮ್ಮ ಷಷ್ಠಿ (ಲಿಂಗೈಕ್ಯ ಸಂಸ್ಮರಣೆ)	-	ಜುಲೈ 31
23. ಸ್ವಾತಂತ್ರ್ಯೋತ್ಸವ	-	ಆಗಸ್ಟ್ 15
23. ಪೂಜ್ಯ ಲಿಂಗಾನಂದ ಸ್ವಾಮಿಗಳ ಜಯಂತಿ	-	ಆಗಸ್ಟ್ 27
24. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	-	ಆಗಸ್ಟ್ 27
25. ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ವರ್ಧಂತಿ	-	ಆಗಸ್ಟ್ 27
26. ಶ್ರಾವಣ ಮಾಸದ ಬಸವ ಜ್ಯೋತಿ ಮಂಗಲಾಚರಣೆ	-	ಆಗಸ್ಟ್ 27
27. ಗಾಂಧಿ ಜಯಂತಿ	-	ಅಕ್ಟೋಬರ್ 2
28. ಅಕ್ಕನಾಗಲಾಂಬಿಕಾ ಸಂಸ್ಮರಣೆ /- ಬಸವ ಧರ್ಮ ವಿಜಯೋತ್ಸವ	-	ಅಕ್ಟೋಬರ್ 2
29. ಚಿನ್ಮಯಜ್ಞಾನಿ ಚನ್ನಬಸವೇಶ್ವರ ಜಯಂತಿ	-	ಅಕ್ಟೋಬರ್ 23
30. ಶರಣ ವ್ರತ ಸ್ವೀಕಾರ, 40,30,20,10 ದಿವಸ	-	ಡಿಸೆಂಬರ್ 2,12,22, ಜನವರಿ 1



Sri Satnam Singhji uppal and Sri Hardev Singh offering sword to Pujya Mataji to honour her.

CPMG/KA/BGW-50/2003-2005 WPP (W) - 17 R.No. 19980/70



Pujya Mataji, Ganga Mataji,Satnam Singhji uppal,Hardev Singh,Channabasavananda Swamiji

... Sikh Leaders Standing in front of sis...